
ಪ್ರಚೋದನೆ


ಲಂಕೇಶ್

ನವೆಂಬರ್ 07, 2012 ಪುಟ 20 ರೂ. 14/-


ಬಾನು ಮುಷ್ತಾಕ್
ಮ್ಯಾಂಗೋ ಪೀಪಲ್ ಬನಾನ ರಿಪಬ್ಲಿಕ್



ರೇಪ್ ರಾಜಧಾನಿ




ಶೇಮ್ ಗೃಹಮಂತ್ರಿ!



ಯಡ್ಡಿ ಪಕ್ಷಕ್ಕೆ ಸೋಮಣ್ಣನೇ ಮೊದಲ ವಿಘ್ನ!

ಹೊನ್ನಾವರ ಮುನ್ಸಿಪಾಲ್ಟಿ ಅಧ್ಯಕ್ಷನ ಅಡ್ಡೆ ಆರ್ಭಟ



ಜೈಲಿನ ಹಾದಿಯಲ್ಲಿ ಜಿ.ಟಿ.ದೇವೇಗೌಡ

ದಾವಣಗೆರೆ ಟೆಕ್ಸ್‌ಟೈಲ್ ಪಾರ್ಕ್‌ನಲ್ಲಿ ಭೂಮಿ ಕದ್ದವರು

ಅಂಚಿನಿಂದ

ಡಾ.ವಾಸು ಎಚ್.ವಿ.




ಹಿಂದುಳಿದ ವಿದ್ಯಾರ್ಥಿಗಳು V/s ದಲಿತ ವಿದ್ಯಾರ್ಥಿಗಳು

ಏನೀ ಹೊಸ ಹುನ್ನಾರ?

ಕಳೆದ ವಾರ ಮೈಸೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿ ಕಾಲೇಜೊಂದರಲ್ಲಿ ಒಂದು ಘಟನೆ ನಡೆಯಿತು. ಹಿಂದುಳಿದ ಜಾತಿಗಳಿಗೆ ಸೇರಿದ ಕೆಲವು ವಿದ್ಯಾರ್ಥಿಗಳು, ತಮ್ಮ ಸಹಪಾಠಿ ದಲಿತ ವಿದ್ಯಾರ್ಥಿಗಳ ಜೊತೆ ಜಗಳವಾಡಿದರು. ಜಗಳ ಹೇಗೆ ಶುರುವಾಯಿತೋ ಗೊತ್ತಿಲ್ಲ, ಆದರೆ ಅದನ್ನು ಅವರ ಉಪನ್ಯಾಸಕರು ವಿಚಾರಿಸಿದಾಗ, ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳ ಸಿಟ್ಟಿನ ಕಾರಣವೇನೆಂದರೆ "ನಿಮಗೆ ಮಾತ್ರ ಎಲ್ಲಾ ಅನುಕೂಲಗಳು, ನಮಗೆ ಎಲ್ಲಾ ಕಡೆಯೂ ತೊಂದರೆ". ಈ ವಿವಾದವು ಸರ್ಕಾರವು ಹೊರಡಿಸಿರುವ ಹೊಸ ಆದೇಶವೊಂದರಿಂದ ಶುರುವಾಗಿತ್ತು.

ಇದುವರೆಗೆ ಎಲ್ಲಾ ಪದವಿ ಕಾಲೇಜುಗಳಲ್ಲಿ ಪರೀಕ್ಷಾ ಶುಲ್ಕವೆಂದು ಎಲ್ಲಾ ವಿದ್ಯಾರ್ಥಿಗಳಿಂದ ಸುಮಾರು 150 ರೂ.ಗಳನ್ನು ಕಟ್ಟಿಸಿಕೊಳ್ಳಲಾಗುತ್ತಿತ್ತು, ಆದರೆ ಈ ಸಾರಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ (ಪ್ರವರ್ಗ 1 ಎ ಹೊರತುಪಡಿಸಿ) 600 ರೂ.ಗಳಿಂದ 2,500 ರೂ.ಗಳವರೆಗೆ ಪರೀಕ್ಷಾ ಶುಲ್ಕ ಕಟ್ಟಲು ಹೇಳಲಾಯಿತು. ಒಂದೇ ಬಾರಿಗೆ ಈ ಪ್ರಮಾಣದ ಏರಿಕೆಯಾಗಿದ್ದರಿಂದ ಮೈಸೂರು




ವಿಶ್ವವಿದ್ಯಾಲಯದ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟಿಸಿದರು. ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳದ್ದು ಒಂದೇ ಉತ್ತರ. ಇದು ಕೇವಲ ಮೈಸೂರು ವಿಶ್ವವಿದ್ಯಾಲಯದ ಆದೇಶವಲ್ಲ; ಇದು ಸರ್ಕಾರದ ಆದೇಶ. ಇದು ಉಳಿದ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆಗೆ ಶುಲ್ಕ ಕಟ್ಟುವ ಸಮಯ ಅಲ್ಲವಾದ್ದರಿಂದ ಅಲ್ಲಿ ಇನ್ನೂ ಗೊತ್ತಾಗಿಲ್ಲ ಅಷ್ಟೇ. ಜೊತೆಗೆ ಇದು ಫೀ ಹೆಚ್ಚಳವಲ್ಲ; ಏಕೆಂದರೆ ಹಿಂದಿನ ವರ್ಷಗಳಲ್ಲೂ ಹೆಚ್ಚೂ ಕಡಿಮೆ ಇಷ್ಟೇ ಶುಲ್ಕ ಇರುತ್ತಿತ್ತು, ಆದರೆ ಅದರಲ್ಲಿ ಕೇವಲ 150 ರೂ.ಗಳನ್ನು ಮಾತ್ರ ನೀವು ಕಟ್ಟುತ್ತಿದ್ದಿರಿ, ಸರ್ಕಾರವು ಉಳಿದ ಹಣವನ್ನು ವಿಶ್ವವಿದ್ಯಾಲಯಕ್ಕೆ ನೇರವಾಗಿ ಮರುಪಾವತಿ ಮಾಡುತ್ತಿದ್ದುದರಿಂದ ನಿಮಗೆ ಗೊತ್ತಿರಲಿಲ್ಲ. ನೀವೆಲ್ಲರೂ ಬ್ಯಾಂಕ್ ಖಾತೆಯನ್ನು ತೆರೆದರೆ, ಸರ್ಕಾರವು ನೇರವಾಗಿ ನಿಮ್ಮ ಖಾತೆಗೆ ಮರುಪಾವತಿ ಮಾಡುತ್ತದೆ.

ಇದು ಕೇವಲ ಅರ್ಧಸತ್ಯವಾಗಿತ್ತು, ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಸರ್ಕಾರವು ಆದೇಶ ಹೊರಡಿಸಿದೆ (ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಸಕಇ 201 ಬಿಎಂಎಸ್ 2012, ಬೆಂಗಳೂರು ದಿನಾಂಕ: 23.06.2012) ಎಂಬುದೇನೋ ನಿಜ. ಆದರೆ ಮರುಪಾವತಿ ಎಂಬುದು ದೊಡ್ಡ ಮೋಸವಷ್ಟೇ. ಸರ್ಕಾರವು ಇದಕ್ಕಿಂತ ದಗಾಕೋರ ಕೆಲಸಗಳನ್ನು ಮಾಡಿ ಗಳಿಸಿಕೊಂಡಿರುವ ಅನುಭವದಿಂದ ಮಾಡಿರುವ ಕುಟಿಲ ಹುನ್ನಾರದ ಭಾಗವಾಗಿ 'ನೇರವಾಗಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ' ಎಂಬ ಆದೇಶ ಹೊರಬಿದ್ದಿದೆ.

ಆ ಆದೇಶದ 1ನೇ ಕಲಂನ ಪ್ರಕಾರ ಈ ಹಿಂದೆ ಶುಲ್ಕ ವಿನಾಯಿತಿ ಪಡೆದುಕೊಳ್ಳುತ್ತಿದ್ದ ವಿದ್ಯಾರ್ಥಿಗಳೆಲ್ಲರಿಗೂ ಶುಲ್ಕ ಮರುಪಾವತಿ ಇರುವುದಿಲ್ಲ, ಅದಕ್ಕೆ ಪ್ರವರ್ಗ 1ರಲ್ಲಿ ಬರುವ ಪೋಷಕರ ವರಮಾನ ತಿಂಗಳಿಗೆ 8,333 ರೂ.ಗಳಿಗಿಂತ ಕಡಿಮೆ ಇರಬೇಕು. ಪ್ರವರ್ಗ 2ಎ, 3ಎ ಮತ್ತು 3ಬಿಗಳಲ್ಲಿ ಬರುವ ಪೋಷಕರ ವರಮಾನ ತಿಂಗಳಿಗೆ 3,708 ರೂ.ಗಳಿಗಿಂತ ಕಡಿಮೆ ಇರಬೇಕು. ಅಂದರೆ ದಿನಕ್ಕೆ 125 ರೂ.ಗಳಷ್ಟು ಸಂಪಾದಿಸುವವರ ಮಕ್ಕಳೆಲ್ಲರೂ ಪೂರ್ಣ ಶುಲ್ಕ ಕಟ್ಟಬೇಕು. ಅದರರ್ಥ, ಅವರ ಮಕ್ಕಳು ಒಂದು ವೇಳೆ ಕಂಪ್ಯೂಟರ್ ವಿಜ್ಞಾನ, ಬಿಸಿಎ ಇತ್ಯಾದಿ ಓದುತ್ತಿದ್ದರೆ, ಅವರ ಇಡೀ ತಿಂಗಳ ಸಂಪಾದನೆಯನ್ನು ಕೇವಲ ಪರೀಕ್ಷಾ ಶುಲ್ಕವಾಗಿ ಕಟ್ಟಬೇಕು. ಇದರರ್ಥವೇನು? ಅಂತಹವರ ಮಕ್ಕಳು ಪದವಿ ಪಡೆಯಬಾರದು ಎಂದು.

ಆದಾಯ ಪ್ರಮಾಣ ಪತ್ರಗಳು ಸುಲಭವಾಗಿ (ಲಂಚ ಕೊಟ್ಟರೆ) ಸಿಕ್ಕಿಬಿಡುತ್ತವೆ; ಹಾಗಾಗಿ ಸರ್ಕಾರೀ ಉದ್ಯೋಗದಲ್ಲಿಲ್ಲದ ಎಲ್ಲಾ ಪೋಷಕರ ಮಕ್ಕಳೂ ಇದಕ್ಕೆ ಅರ್ಹರಾಗಿ ಬಿಡುತ್ತಾರೆಂದು ಭಾವಿಸಬಹುದು. ಆದರೆ ನಮ್ಮನ್ನಾಳುವವರೇನೂ ದಡ್ಡರಲ್ಲ. ಈ ರೀತಿಯ ಆದಾಯ ಪ್ರಮಾಣ ಪತ್ರ ಸಲ್ಲಿಸಿದವರಿಗೆಲ್ಲರಿಗೂ ಶುಲ್ಕ ಮರುಪಾವತಿ ಆಗುವುದಿಲ್ಲ. ಅದನ್ನು ಈ ಮಕ್ಕಳು ಪಡೆಯಬೇಕೆಂದರೆ ಸದರಿ ಆದೇಶದ ಕಲಂ 5ರ ಪ್ರಕಾರ ಅವರಿಗೆ ಅರ್ಹತೆ ಮತ್ತು ಮೆರಿಟ್ ಇರಬೇಕು. (ಈ ಅರ್ಹತೆ ಮತ್ತು ಮೆರಿಟ್ ಎಂದರೆ ಏನು, ಎಷ್ಟು ಇದುವರೆಗೂ ನಿಗದಿಯಾಗಿಲ್ಲ). ಒಂದು ವೇಳೆ ವಿದ್ಯಾರ್ಥಿಯು ಯಾವುದಾದರೂ ವಿಷಯಗಳಲ್ಲಿ ಫೇಲಾದರೆ ಅವರು ಮರುಪಾವತಿಗೆ ಅರ್ಹರಲ್ಲ.

ಹಿಂದುಳಿದ ವರ್ಗಗಳ, ತಿಂಗಳಿಗೆ 3,700ಕ್ಕಿಂತ ಕಡಿಮೆ ಸಂಪಾದನೆಯಿರುವ ಪೋಷಕರ ಮಕ್ಕಳು ಎಲ್ಲಾ ಸಾಮಾಜಿಕ, ಆರ್ಥಿಕ ಅನಾನುಕೂಲತೆಗಳ ನಡುವೆ ಕಾಲೇಜು ಸೇರಿ, ಚೆನ್ನಾಗಿ ಓದಿ, ಸರ್ಕಾರದ ಯಾವುದೋ ಒಂದು ಸಮಿತಿ ನಿರ್ಧರಿಸುವ ಅರ್ಹತೆ ಮತ್ತು ಮೆರಿಟ್‌ಅನ್ನು ಸಂಪಾದಿಸಿಬಿಟ್ಟರೆ ಅವರಿಗೆ ಸರ್ಕಾರದ ವತಿಯಿಂದ ಮರುಪಾವತಿಯು ಖಾತ್ರಿಯಾ? ಇಲ್ಲ, ಆ ವರ್ಷ ಸರ್ಕಾರವು ನೀಡುವ ಅನುದಾನವು ಆದ್ಯತೆವಾರು ವಿಂಗಡಣೆಯಾಗಿ ಇನ್ನೂ ಉಳಿದಿದ್ದರೆ ಮಾತ್ರ ಮರುಪಾವತಿ ಆಗುತ್ತದೆ. ಈ ಆದ್ಯತೆವಾರು ವಿಂಗಡಣೆ ಎಂದರೇನು? ಸರ್ಕಾರ ಶೈಕ್ಷಣಿಕ ಉದ್ದೇಶಕ್ಕಾಗಿ ಹಿಂದುಳಿದ ವರ್ಗಗಳ ಇಲಾಖೆಗೆ ನೀಡುವ ಅನುದಾನದಲ್ಲಿ, ಆ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಳ್ಳುವ ಮಕ್ಕಳಿಗೆ ಮೊದಲು ಪರೀಕ್ಷಾ ಶುಲ್ಕ ಪಾವತಿ ಮಾಡುತ್ತದೆ; ಅನಂತರ ಹಿಂದುಳಿದ ವರ್ಗಗಳ ಪ್ರವರ್ಗ 1ರ ವಿದ್ಯಾರ್ಥಿಗಳಿಗೆ ನಿಗದಿತ ಶುಲ್ಕ ಮರುಪಾವತಿ ಮಾಡುತ್ತದೆ. ಒಂದು ವೇಳೆ ಆ ವರ್ಷ ಬಿಡುಗಡೆ ಮಾಡಿದ ಅನುದಾನ ಇಷ್ಟಕ್ಕೇ ಕೊನೆಗೊಂಡರೆ ಮುಗಿಯಿತು. ಅಕಸ್ಮಾತ್ ಉಳಿದಿದ್ದರೆ, ಆಗ ಮಾತ್ರ ಮರುಪಾವತಿ ಮಾಡಲಾಗುತ್ತದೆ. ಸರ್ಕಾರಿ ಆದೇಶದ 8ನೇ ಕಲಂನ ಪ್ರಕಾರ ಒಂದು ವೇಳೆ ಆ ವರ್ಷ ಅನುದಾನ ಲಭ್ಯವೇ ಆಗದಿದ್ದಲ್ಲಿ, ಅನುದಾನ ಪಡೆದುಕೊಳ್ಳದ ಎಲ್ಲಾ ಅರ್ಜಿಗಳನ್ನು



ವ್ಯಪಗತ (ಲ್ಯಾಪ್ಸ್) ಎಂದು ಪರಿಗಣಿಸಲಾಗುವುದು.


ಈ ಆದೇಶದ ಪರಿಣಾಮಗಳನ್ನು ಊಹಿಸಬಲ್ಲಿರಾ? ಇದು ದೊಡ್ಡ ಮಟ್ಟದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಕಾಲೇಜುಗಳಿಂದ ಓಡಿಸುತ್ತದೆ. ಏಕೆಂದರೆ ಈ ಸಮಸ್ಯೆ ಕೇವಲ ಪರೀಕ್ಷಾ ಶುಲ್ಕದ ವಿಚಾರಕ್ಕೆ ಸೀಮಿತವಲ್ಲ, ಇದು ಶಿಕ್ಷಣವನ್ನು ವ್ಯಾಪಾರದ ಸರಕನ್ನಾಗಿ ಮಾಡಿರುವ ಜಾಗತೀಕರಣ ನೀತಿಯ ಒಂದು ಸಣ್ಣ ತುಣುಕು ಅಷ್ಟೇ. ಪ್ರತೀ ಸಚಿವ ಸಂಪುಟ ಸಭೆಯಲ್ಲೂ ಇಂತಹ ಹಲವು ತೀರ್ಮಾನಗಳನ್ನು ಜಾರಿಗೊಳಿಸಲಾಗುತ್ತದೆ. ತಾನು ಬಹಳ ದೊಡ್ಡ ಸಾಧನೆ ಮಾಡುತ್ತಿರುವ ಸೋಗನ್ನು ಹಾಕುತ್ತಿರುವ ಸಿ.ಟಿ.ರವಿಯೆಂಬ ಆರೆಸ್ಸೆಸ್ ಪಟು ಉನ್ನತ ಶಿಕ್ಷಣ ಇಲಾಖೆಯಲ್ಲಿ ಮಾಡುತ್ತಿರುವ ಮಹಾನ್ ಕೆಲಸ ಇದು.

ಜಾಗತೀಕರಣವು ಮತ್ತೊಂದು ಮಜಲನ್ನು ಮುಟ್ಟುತ್ತಿರುವ ಈ ದಿನಗಳಲ್ಲಿ ವ್ಯಾಪಾರೀಕರಣವು ಆರೋಗ್ಯ, ಶಿಕ್ಷಣ, ಚಿಲ್ಲರೆ ವ್ಯಾಪಾರ ಇನ್ನಿತರ ಸೇವಾ ಕ್ಷೇತ್ರಗಳನ್ನು ತೀವ್ರವಾಗಿ ವ್ಯಾಪಿಸುತ್ತಿದೆ. ಅದರ ಕುರಿತು ಯಾವ ರಾಜಕೀಯ ಪಕ್ಷಗಳಿಗೂ ಭಿನ್ನವಾದ ನೀತಿಯಾಗಲೀ, ಕಾರ್ಯಕ್ರಮವಾಗಲೀ ಇಲ್ಲ. ಆದರೆ ಅದು ಈ ನಿರ್ದಿಷ್ಟ ಸಂದರ್ಭದಲ್ಲಿ ಹಿಂದುಳಿದ ಮತ್ತು ದಲಿತ ವಿದ್ಯಾರ್ಥಿಗಳ ನಡುವಿನ ದೊಡ್ಡ ತಾರತಮ್ಯವಾಗಿ ಗೋಚರಿಸುತ್ತಿರುವುದು ಮಾತ್ರ ಆಶ್ಚರ್ಯಕರವಾಗಿದೆ. ಅದಕ್ಕೆ ಒಂದು ತಕ್ಷಣದ ಕಾರಣವಿದೆ. ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದ ಸಂದರ್ಭದಲ್ಲೇ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುದಾನ ಕಡಿತ ಮಾಡುವ ರಾಜ್ಯ ಸರ್ಕಾರದ ಆದೇಶ ಹೊರಬಿದ್ದಿದೆ.

ಹಿಂದುಳಿದ ವರ್ಗಗಳೂ ಸೇರಿದಂತೆ ಎಲ್ಲರಿಗೂ ಆರೋಗ್ಯ ಹಾಗೂ ಶಿಕ್ಷಣವನ್ನು ಎಲ್ಲಾ ಹಂತಗಳಲ್ಲೂ ಉಚಿತವಾಗಿ ನೀಡಬೇಕಾದ್ದು ಸರ್ಕಾರದ ಕರ್ತವ್ಯ. ಅದನ್ನು ನೀಡದೇ ಇರುವ ಸರ್ಕಾರದ ವಿರುದ್ಧ ತಿರುಗಬೇಕಾದ ಆಕ್ರೋಶ ದಲಿತ ವಿದ್ಯಾರ್ಥಿಗಳನ್ನು ಗುರಿಯಾಗಿಸಿದರೆ ಅದಕ್ಕಿಂತ ದುರಂತ ಮತ್ತೊಂದಿಲ್ಲ. ಇವತ್ತಿಗೂ ದಲಿತ ಸಮುದಾಯವು ಅತ್ಯಂತ ದೊಡ್ಡ ಶಿಕ್ಷಣ ವಂಚಿತ ಸಮುದಾಯವಾಗಿಯೇ ಉಳಿದಿದೆ. ಪಕ್ಕದ ಬಾಕ್ಸ್ ನೋಡಿ) 50 ವರ್ಷಗಳಿಗೆ ಹೋಲಿಸಿದರೆ, ಅಂಕಿ-ಅಂಶಗಳಲ್ಲಿ ಸಾಕಷ್ಟು ಬದಲಾವಣೆಯಾಗಿದೆಯೆಂಬುದೇ ಸಮಾಧಾನದ ವಿಚಾರವಾಗಿಬಿಡಬಾರದು. ಇಂದು ದಲಿತ ಸಮುದಾಯ ನೀಡಲಾಗುತ್ತಿರುವ ಅನುದಾನ/ಸೌಲಭ್ಯಗಳೆಲ್ಲವ ನ್ಯಾಯಯುತವಾದದ್ದು ಮಾತ್ರವಲ್ಲ, ಇನ್ನೂ ಹೆಚ್ಚಾಗು ಅಗತ್ಯವಿದೆ. ಅದು ಹಿಂದುಳಿದ ವರ್ಗಗಳಿಂದ ಕಿತ್ತುಕೊಂ ಕೊಡುತ್ತಿರುವ ಅನುದಾನವಲ್ಲ, ಎಲ್ಲರ ಪಾಲಿನ ಹಣವ ಕಿತ್ತುಕೊಂಡು ಲಕ್ಷ ಕೋಟಿಗಳಲ್ಲಿ ಸಂಪತ್ತು ಲೂ ಹೊಡೆಯುತ್ತಿರುವ ವರ್ಗ ಈ ದೇಶದ ಶೇ.2ರಷ್ಟೂ ಇರ ದೊಡ್ಡ ಬಂಡವಾಳಶಾಹಿಗಳು ಮತ್ತು ವಿದೇ ಬಹುರಾಷ್ಟ್ರೀಯ ಕಂಪೆನಿಗಳಾಗಿವೆ.

ತಮ್ಮ ಸ್ವಂತ ಹಿತಾಸಕ್ತಿಗಾಗಿ ಹಿಂದುಳಿದ ವರ್ಗ ನೇತಾರರೆಂದು ಪೋಸು ಕೊಡುವವರಲ್ಲಿ ಒಬ್ಬರಾದರೂ ಸರ್ಕಾರೀ ಆದೇಶದ ವಿರುದ್ಧ ದನಿ ಎತ್ತಿಲ್ಲ. ಕಾಂಗ್ರೆ ಪಕ್ಷವೆಂದರೇ ಅಹಿಂದದ ಪಕ್ಷವೆಂದು ಅದರ ಮೂಲ ಮುಖ್ಯಮಂತ್ರಿಯಾಗಲು ಹೊರಟಿರುವವರಿ ಉಪಮುಖ್ಯಮಂತ್ರಿ ಸ್ಥಾನವನ್ನು ಅದೇ ಕೋಟಾದ ಗಿಟ್ಟಿಸಿಕೊಂಡಿರುವವರಿಗೆ, ಒಕ್ಕಲಿಗರನ್ನು ಹಿಂದುಳಿ ವರ್ಗಗಳ ಪಟ್ಟಿಯಲ್ಲಿ ಉಳಿಸಿಕೊಳ್ಳಲು ಪಂಚೆ ಎತ್ತಿಕ ಹೋರಾಡಿದವರಿಗೆ ಇದು ಯಾಕೆ ಕಣ್ಣಿಗೆ ಬಿದ್ದಿಲ್ಲ ಹೋಗಲಿ, ಶ್ರೀರಾಮುಲುವಿನಂತಹ 'ಹಿಂದುಳಿ ವರ್ಗಗಳ ಸಂಪನ್ಮೂಲ ವ್ಯಕ್ತಿ'ಯ ಜೊತೆಗಿರು ಬುದ್ಧಿಜೀವಿಗಳಿಗೆ? ಎಲ್ಲರೂ ತಮ್ಮ ಹಿತಾಸಕ್ತಿಯ ಮಹತ್ಕಾರ್ಯದಲ್ಲಿ ನಿರತರಾಗಿದ್ದಾರೆ. ಈ ಆದೇಶವ ಅವರುಗಳಿಗೆ ಗೊತ್ತಿರುವುದಿಲ್ಲ.

ಅವರು ಏನಾದರೂ ಮಾಡಿಕೊಂಡು ಹಾಳಾಗಲಿ. ನಾಡಿನ ಶಿಕ್ಷಣವನ್ನು ಖಾಸಗಿಯವರ ಪಾಲಾಗಿಸುವಲ್ಲಿ ಮತ್ತ ಶೋಷಿತ ಸಮುದಾಯಗಳು ಶಿಕ್ಷಣದಿಂದ ಮತ್ತಷ್ಟು ವಂಚಿತರಾಗಲು ಕಾರಣವಾಗುವ ಈ ಆದೇಶದ ವಿರು ನಾವೇನು ಮಾಡಬಹುದು? ಈ ಆದೇಶವನ್ನು



ಕೇಂದ್ರವಾಗಿಟ್ಟುಕೊಂಡು ಒಂದು ಚಮತ್ಕಾರ ಸಾಧಿಸಲು ಸಾಧ್ಯವಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಾರಕವಾಗಿರುವ ಈ ಆದೇಶವನ್ನು ಹಿಂಪಡೆಯಬೇಕೆಂದು ಎಲ್ಲಾ ದಲಿತ ಸಂಘಟನೆಗಳು ಹೋರಾಟಕ್ಕಿಳಿದರೆ ಹೇಗಿರುತ್ತದೆ? ಈ ಒತ್ತಾಯದ ಜೊತೆಗೆ ದಲಿತ ವಿದ್ಯಾರ್ಥಿಗಳೆಲ್ಲರೂ ಅತ್ಯುತ್ತಮ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಹಿಂದುಳಿದ ವರ್ಗಗಳ ಸಂಘಟನೆಗಳು ಒತ್ತಾಯಿಸುವುದು ಇದು ಸಾಧ್ಯವೇ?

ಈಶ್ವರಪ್ಪ-ಸಿದ್ದರಾಮಯ್ಯರ ಇದಕ್ಕೇನು ಹೇಳುತ್ತಾರೆ

ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ಅನುದಾ ಖಾಸಗಿ ಕಾಲೇಜೊಂದರಲ್ಲಿ ಓದುತ್ತಿರುವ 2 ಎ ವರ್ಗ ಬಿಕಾಂ ವಿದ್ಯಾರ್ಥಿಯೊಬ್ಬ ಕಳೆದ ವರ್ಷ 150 ರ ಶುಲ್ಕ ಕಟ್ಟಿದ್ದ. ಅದೇ ಕಾಲೇಜಿನಲ್ಲಿ ಆದಾಯ ಪ್ರಮಾ ಪತ್ರ ಇರದ ಈ ವರ್ಗದ ವಿದ್ಯಾರ್ಥಿಯೂ 550 ರ ಮಾತ್ರ ಶುಲ್ಕ ಕಟ್ಟಿದ್ದ. ಆದರೆ ಈ ಸಾರಿ ಅವರಿಬ್ಬರ 2,460 ರೂ. ಕಟ್ಟಬೇಕೆಂದು ಹೇಳಲಾಗಿದೆ. ಇದೇ ವರ್ಗ ಸೇರಿರುವ, ಹಾಲಿ ಮತ್ತು ಮಾಜಿ ಉಪಮುಖ್ಯಮಂತ್ರಿ ಕಣ್ಣಿಗೆ ಇದು ಬಿದ್ದಿಲ್ಲವೇಕೆ? ಅವರ ಕಣ್ಣ ಮುಂದೆ ಮು ಮಂತ್ರಿ ಕುರ್ಚಿ ಮಾತ್ರ ಕಾಣುತ್ತಿರಬೇಕು.

ದಲಿತ ವಿದ್ಯಾರ್ಥಿಗಳಿಗೆ ಎಷ್ಟರಮಟ್ಟಿಗೆ ಶಿಕ್ಷಣ ಸಿಕ್ಕಿದೆ?

2010ರಲ್ಲಿ ಹೊರಬಂದ ವರದಿಯೊಂದರ ಪ್ರಕಾರ, ದಲಿತರು ಮತ್ತು ಇತರ ಭಾರತೀಯ ವಿದ್ಯಾರ್ಥಿಗಳಲ್ಲಿ ಶಾಲೆ ಬಿಟ್ಟುಬಿಡುವ ಶೇಕಡಾವಾರು ಪ್ರಮಾಣದ ನಡುವಿನ ವ್ಯತ್ಯಾಸವನ್ನು ನೋಡಿ. 1989ರಲ್ಲಿ ಅದು 4.39 ? ಆಗಿದ್ದರೆ 2008ರಲ್ಲಿ 16.21 ?. ಅಂದರೆ ದಲಿತರು ಶಾಲಾ-ಕಾಲೇಜುಗಳಲ್ಲಿ ಉಳಿಯಲಾಗುತ್ತಿಲ್ಲ.

ಇದಕ್ಕೆ ದಲಿತ ಕುಟುಂಬಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಜೊತೆಗೆ ಶಾಲೆಗಳಲ್ಲಿ ನಡೆಯುವ ತಾರತಮ್ಯವೂ ಕಾರಣವಾಗಿದೆಯೆಂದು ಹಲವು ತಜ್ಞರ ವರದಿಗಳು ಹೇಳುತ್ತವೆ. ಹಿಂದಿನಂತೆ ಹೊಡೆಯುವುದು, ಕಸ ಗುಡಿಸುವುದು, ಶೌಚಾಲಯ ಶುಚಿಗೊಳಿಸುವುದು ಇತ್ಯಾದಿಗಳು ಕಡಿಮೆಯಾಗಿರಬಹುದು. ಆದರೆ ಪರೋಕ್ಷ ತಾರತಮ್ಯ, ನಿರ್ಲಕ್ಷ್ಯ, ಚೆನ್ನಾಗಿ ಓದುವುದಿಲ್ಲವೆಂದು ಹಣೆಪಟ್ಟಿ ಕಟ್ಟುವುದು ಇತ್ಯಾದಿಗಳು ನಡೆಯುತ್ತಲೇ ಇವೆ. ಆದರಿಂದ ಶಾಲೆ ತಪ್ಪಿಸುವುದು, ವಿದ್ಯಾಭ್ಯಾಸದಲ್ಲಿ ಆಸಕ್ತಿ ಕಳೆದುಕೊಳ್ಳುವುದು. ಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸದೇ ಇರುವುದು, ನಪಾಸಾಗುವುದು ಮತ್ತು ಅಂತಿಮವಾಗಿ ಶಾಲೆ ಬಿಡುವುದು ನಡೆಯುತ್ತದೆ ಎಂದು 2010ರಲ್ಲಿ ಡಿ.ಆರ್.ವಿಶ್ವರ್ಮ ಎಂಬುವರು ನಡೆಸಿರುವ ಅಧ್ಯಯನದಲ್ಲಿ ಹೇಳಲಾಗಿದೆ.

ಎಸ್‌ಸಿ ಮಕ್ಕಳಿಗೆ 6 ಕೆ.ಜಿ., ಎಸ್‌ಟಿ ಮಕ್ಕಳಿಗೆ 7 ಕೆ.ಜಿ. ಓಬಿಸಿ ಮಕ್ಕಳಿಗೆ 4 ಕೆ.ಜಿ. ಅಕ್ಕಿ!

ಇಂತಹದೊಂದು ಆದೇಶವನ್ನು ನಮ್ಮ ಘನ ಸರ್ಕಾರವೇ ಹೊರಡಿಸಿದೆ. ಎಲ್ಲಾ ಸರ್ಕಾರೀ ಕಾಲೇಜು ಮಕ್ಕಳ ಹಾಸ್ಟೆಲ್‌ಗಳಲ್ಲೂ ಹಿಂದೆ ತಲಾ 12 ಕೆ.ಜಿ. ಅಕ್ಕಿಯನ್ನು ಸಬ್ಸಿಡಿ ದರದಲ್ಲಿ ಸರ್ಕಾರವು ಪೂರೈಸುತ್ತಿತ್ತು. ಆದರೆ ಸರ್ಕಾರವು 3.07.2012ರಂದು ಹೊರಡಿಸಿದ ಆದೇಶದಲ್ಲಿ ಅಕ್ಕಿ ಕಡಿತ ಮಾಡಲು ಸೂಚಿಸಿದೆ. ಮೊದಲನೆಯದಾಗಿ ಕಡಿತ ತಪ್ಪು, ಅದನ್ನು ಹಿಂದಿನಷ್ಟೇ ಮುಂದುವರೆಸಬೇಕು; ಇನ್ನೂ ಹಲವು ರೀತಿಯ ಸೌಲಭ್ಯಗಳನ್ನು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಒದಗಿಸಬೇಕು. ಎರಡನೆಯದ್ದು, ಎಲ್ಲರ ಹೊಟ್ಟೆಯೂ ಒಂದೇ ಇರುವಾಗ, ಮೇಲಿನ ರೀತಿ ಅಕ್ಕಿಯಲ್ಲಿ ತಾರತಮ್ಯ ಮಾಡಿದ್ದು ಇನ್ನೊಂದು ತಪ್ಪು. ಈ ರಾಜ್ಯವನ್ನು ಆರೆಸ್ಸೆಸ್‌ನ ನಿಯಂತ್ರಣದಲ್ಲಿರುವ ಬಿಜೆಪಿ ಸರ್ಕಾರವು ನಡೆಸುತ್ತಿರುವಾಗ, ಇದರ ಹಿಂದೆ ಹಿಂದುಳಿದವರನ್ನು ದಲಿತರನ್ನು ಪರಸ್ಪರ ಎತ್ತಿಕಟ್ಟುವ ಹುನ್ನಾರವಿಲ್ಲವೆಂದು ನಾವು ನಂಬಬಹುದೇ?


ಇಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ, ದಲಿತ ಮಕ್ಕಳಿಗೂ 6 ಕೆ.ಜಿ. ಅಕ್ಕಿ ಕಡಿಮೆಯಾಗಿದೆ. ಅವರೂ ಅರೆಹೊಟ್ಟೆಯೇ. ಆದರೆ ಜಗಳ ಹತ್ತಿಕೊಂಡರೆ ಅದು ಸರ್ಕಾರದ ವಿರುದ್ಧ ಆಗುವುದಕ್ಕಿಂತಲೂ ಪರಸ್ಪರ ಈ ಎರಡು ಸಮುದಾಯಗಳ ನಡುವೆ ಆಗುವ ಸಾಧ್ಯತೆ ಇದೆ. ಇದು ಆರೆಸ್ಸೆಸ್‌ನ ಪಟುಗಳಿಗೆ ಅನುಕೂಲಕರವಾಗಿ ಕಂಡಿರಬಹುದೇ?

ಮಲ್ಯನ ಹುಚ್ಚಾಟ, ಜನರ ಪೇಚಾಟ...

"ರೋಮ್ ನಗರ ಬೆಂಕಿ ಹತ್ತಿ ಉರಿಯುತ್ತಿದ್ದಾಗ ...ೀ ಎಂಬ ರಾಜ ಪಿಟೀಲು ಬಾರಿಸುತ್ತಿದ್ದನಂತೆ. ಸ್ವಯಂ ...ೀಷಿತ 'ಕಿಂಗ್ ಆಫ್ ಗುಡ್ ಟೈಮ್ಸ್' ವಿಜಯ್ ...ಲ್ಯ ಕೂಡ ತನ್ನ ಕಿಂಗ್‌ಫಿಷರ್ ಏರ್‌ಲೈನ್ಸ್ ಮಕಾಡೆ ...ಲಗುತ್ತಿದ್ದಾಗ ನೆರೋನಂತೆ ಕಿಂಚಿತ್ತೂ ಕಾಳಜಿ ಇಲ್ಲದೆ ...ತ್ತಿನಾದ್ಯಂತ ಅಂಡಲೆಯುತ್ತಿದ್ದಾನೆ..."

...ಇದು ಹೆಂಡೋದ್ಯಮಿ ವಿಜಯ್ ಮಲ್ಯನನ್ನು ಕುರಿತು ...ನ ಕಂಪನಿಯ ಉದ್ಯೋಗಿಗಳೇ ಹೇಳುತ್ತಿರುವ ಮಾತು.

...ಮೊನ್ನೆ ಕೇಂದ್ರ ಸರ್ಕಾರದ ವಿಮಾನಯಾನ ಇಲಾಖೆಯು ...ಲ್ಯನ ಕಿಂಗ್‌ಫಿಷರ್ ಏರ್‌ಲೈನ್ಸ್ ಅನ್ನು ಸ್ಥಗಿತಗೊಳಿಸುವಂತೆ ...ದೇಶಿಸಿದಾಗ ಆ ಏರ್‌ಲೈನ್ ಕಂಪನಿಯಲ್ಲಿ ಕೆಲಸ ...ಡುತ್ತಿರುವ ಸುಮಾರು ಆರು ಸಾವಿರ ನೌಕರರು ಮಲ್ಯ ...ಡಲೇ ವಿಮಾನಯಾನ ಸಚಿವ ಅಜಿತ್ ಸಿಂಗ್ ಅವರನ್ನು ...ಟಿ ಮಾಡಿ ತನ್ನ ಕಂಪನಿಯನ್ನು ಉಳಿಸಿಕೊಳ್ಳಲು ...ಂದಾಗುತ್ತಾನೆ ಎಂದು ಅಂದಾಜಿಸಿದ್ದರು. ಆದರೆ ಮಲ್ಯ ...ಹಾತ್ಮ ಮಾಡಿದ್ದೇ ಬೇರೆ.



...ತನ್ನ ಕಂಪನಿಯ ಬಗ್ಗೆಯಾಗಲಿ, ಅಲ್ಲಿ ಕೆಲಸ ...ಡುತ್ತಿರುವವರ ಬಗ್ಗೆಯಾಗಲಿ ಮಲ್ಯ ಕಿಂಚಿತ್ತೂ ತನ್ನ ...ಕೆಡಿಸಿಕೊಳ್ಳಲಿಲ್ಲ, ಬದಲಾಗಿ ಆತ ತನ್ನ ಐಷಾರಾಮಿ ...ಸಗಿ ವಿಮಾನವನ್ನೇರಿ ವಿದೇಶಕ್ಕೆ ಹಾರಿ ಹೋದ. ...ೀಗಲಿ ಅಲ್ಲಿಯಾದರೂ ಆತ ವಿದೇಶಿ ಬಂಡವಾಳಶಾಹಿ...ನ್ನು ಸಂಪರ್ಕಿಸಿ ತನ್ನ ಕಂಪನಿಯಲ್ಲಿ ಹಣ ಹೂಡುವ ...ಮೂಲಕ ಅದನ್ನು ರಕ್ಷಿಸಿಕೊಳ್ಳುವ ಪ್ರಯತ್ನ ...ಡುತ್ತಿರಬಹುದು ಎಂದು ಭಾವಿಸಿದವರಿಗೆ ನಿರಾಶೆ ...ತ್ತು. ಏಕೆಂದರೆ ಅಂತಹ ಯಾವುದೇ ಕೆಲಸ ಮಾಡದ ...ಲ್ಯ ಕೊರಿಯಾದಲ್ಲಿ ಫಾರ್ಮುಲಾ ರೇಸನ್ನು ವೀಕ್ಷಿಸುತ್ತಾ ...ಜಾ ಉಡಾಯಿಸುತ್ತಿದ್ದ!

...ಅಷ್ಟೇ ಅಲ್ಲ, ಬಿಡುವು ಸಿಕ್ಕಾಗ ಮಲ್ಯ ಕ್ರಿಕೆಟ್ ಬಗ್ಗೆ, ...ತ್ತಿನ ಬಗ್ಗೆ ಫಾರ್ಮುಲಾ ಒನ್ ರೇಸಿನ ಬಗ್ಗೆ ಟ್ವಿಟ್ಟರ್‌ನಲ್ಲಿ ...ಹಿಂಬಾಲಕರಿಗೆ ಸಂದೇಶಗಳನ್ನು ಕಳುಹಿಸುತ್ತಿದ್ದ. ...ವುದೋ ಲೆಕ್ಕಕ್ಕಿಲ್ಲದ ಪತ್ರಿಕೆ ತನ್ನ ಏಕೈಕ ಸುಪುತ್ರ ...ದ್ಧಾರ್ಥ ಮಲ್ಯನನ್ನು 'ಡಿಜಿಟಲ್ ಮ್ಯಾನ್ ಆಫ್ ದಿ ...ಯರ್' ಸ್ಪರ್ಧೆಗೆ ನೇಮಿಸಿದ್ದರಿಂದ ಎಲ್ಲರೂ ತನ್ನ ಮಗನ ...ವಾಗಿ ಓಟ್ ಹಾಕಬೇಕೆಂದೂ ಅದೇ ಟ್ವಿಟ್ಟರ್ ಮೂಲಕ ...ದ. ಇಷ್ಟೆಲ್ಲದರ ಮಧ್ಯೆ ಒಮ್ಮೆಯೂ ಆತ ಕಿಂಗ್‌ಫಿಷರ್ ...ರ್‌ಲೈನ್ಸ್ ನೌಕರರ ಸ್ಥಿತಿಗತಿ ಬಗ್ಗೆ ಒಂದೇ ಒಂದು ...ವನ್ನೂ ಹೇಳಲಿಲ್ಲ. ಆತನ ಈ ವರ್ತನೆಯ ಬಗ್ಗೆ ...ಧ್ಯಮಗಳು ಅಚ್ಚರಿ ವ್ಯಕ್ತಪಡಿಸಿದಾಗ ಮಲ್ಯ ಸಾಹೇಬ...ನ್ನು ಟೀಕಿಸುವುದರಲ್ಲೇ ಮಾಧ್ಯಮಗಳು ಸಂಭ್ರಮಿಸುತ್ತಿವೆ. ...ದು ಆಧಾರವಿಲ್ಲದ ಮಾಹಿತಿಗಳನ್ನು ಹಬ್ಬಿಸುತ್ತಿದ್ದಾರೆ. ...will prove them all wrong" ಎಂದು ...ಜಾರಿದ.

ಅಪ್ಪ ವಿಜಯ್ ಮಲ್ಯನ ಕತೆ ಇದಾದರೆ ಆತನ ಉಂಡಾಡಿ ಗುಂಡ ಮಗ ಸಿದ್ಧಾರ್ಥ್ ಮಲ್ಯನ ವರ್ತನೆಯಂತೂ ಬೇಜವಾಬ್ದಾರಿತನದಿಂದ ಕೂಡಿತ್ತು. ಸೋಜಿಗದ ವಿಷಯ ಯಾವುದೆಂದರೆ ಇದೇ ಸಿದ್ಧಾರ್ಥನ 18 ನೇ ಹುಟ್ಟುಹಬ್ಬದಂದು ಆತನಿಗೆ ಉಡುಗೊರೆಯಾಗಿ ವಿಜಯ್ ಮಲ್ಯ ಈಗ ಆರ್ಥಿಕ ಸಂಕಷ್ಟದಲ್ಲಿರುವ ಕಿಂಗ್‌ಫಿಷರ್ ಏರ್‌ಲೈನ್ಸ್ ಕಂಪನಿಯನ್ನು ಪ್ರಾರಂಭಿಸಿದ. ಆ ಕಂಪನಿಯತ್ತ, ಅದಕ್ಕಾಗಿ ದುಡಿಯುತ್ತಿರುವವರತ್ತ ಒಮ್ಮೆಯೂ ಕಣ್ಣೆತ್ತಿ ನೋಡದ ಸಿದ್ಧಾರ್ಥ ಸುಂದರ ಬೆಡಗಿಯರೊಂದಿಗೆ ಪಾರ್ಟಿಗಳಿಗೆ ಹಾಜರಾಗುವುದು, ಜಿಮ್‌ನಲ್ಲಿ ವ್ಯಾಯಾಮ ಮಾಡುವುದು, ದುಬಾರಿ ಉಡುಗೆಗಳನ್ನು ತೊಟ್ಟು ಹೈಫೈ ಜನರ ಮೆಚ್ಚುಗೆ ಪಡೆಯುವುದರಲ್ಲೇ ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಂಡ.

ಪ್ರಾರಂಭವಾದಾಗಿನಿಂದ ಕಿಂಗ್‌ಫಿಷರ್ ಏರ್‌ಲೈನ್ಸ್ ನಷ್ಟ ಕಾಣುತ್ತಲೇ ಬಂದಿದೆ. ಈಗ ಅದರ ಸ್ಥಿತಿ ಎಷ್ಟು ಹೀನಾಯವಾಗಿದೆ ಎಂದರೆ ಕಳೆದ ಎಂಟು ತಿಂಗಳುಗಳಿಂದ ತನ್ನ ಸಿಬ್ಬಂದಿಗೆ ಸಂಬಳವನ್ನೇ ಕೊಟ್ಟಿಲ್ಲ. ಇದು ಸಿಬ್ಬಂದಿಯನ್ನು ಎಂತಹ ಬಿಕ್ಕಟ್ಟಿಗೆ ದೂಡಿತೆಂದರೆ ಇತ್ತೀಚೆಗೆ ಓರ್ವ ಪೈಲೆಟ್‌ನ ಮಡದಿ ತನ್ನ ಸಂಸಾರವನ್ನು ನೋಡಿಕೊಳ್ಳಲಾಗದೆ ಆತ್ಮಹತ್ಯೆ ಮಾಡಿಕೊಂಡಳು. ಆಗಲಾದರೂ ಪುಂಡ ಸಿದ್ಧಾರ್ಥ ಮತ್ತು ಆತನ ಅಪ್ಪ ವಿಜಯ್ ಎಚ್ಚೆತ್ತುಕೊಳ್ಳಬೇಕಿತ್ತು. ಊಹುಂ. ಅದು ಅವರಿಂದ ಸಾಧ್ಯವಾಗಲಿಲ್ಲ.

ತಮಗೆ ಬರಬೇಕಿರುವ ಸಂಬಳಕ್ಕಾಗಿ ದೇಶದ ನಾನಾ ನಗರಗಳಲ್ಲಿ ಕಿಂಗ್‌ಫಿಷರ್ ಏರ್‌ಲೈನ್ಸ್ ನೌಕರರು ಪ್ರತಿಭಟಿಸಲಾರಂಭಿಸಿದಾಗ ಈ ಸಿದ್ಧಾರ್ಥ ಗೋವಾಗೆ ಹಾರಿ ಹೋಗಿ ಅಲ್ಲಿ ಬಿಕಿನಿ ತೊಟ್ಟಿರುವ ಯುವತಿಯರೊಂದಿಗೆ ಫೋಟೋ ಶೂಟ್‌ನಲ್ಲಿ ತಲ್ಲೀನನಾಗಿದ್ದ. ಆತ ತನ್ನ ಟ್ವಿಟ್ಟರ್ ಮೂಲಕ ಆ ಅನುಭವ ಕುರಿತು ಕಳುಹಿಸಿದ ಹಲವು ಸಂದೇಶಗಳು ಹೀಗಿವೆ:

* ರಾತ್ರಿ ಎರಡು ಗಂಟೆಗೆ ಪ್ಯಾಕ್ ಅಪ್? ಇದು ನಿಜವಾ? ಇಷ್ಟು ಬೇಗನೆ ನಿದ್ದೆ ಮಾಡಲು ನಾನು ತುಂಬಾ ಕಷ್ಟ ಪಡಬೇಕಿದೆ!

* ಇಷ್ಟು ಹೊತ್ತು ನಾನು ಬೀಚಿನಲ್ಲಿ ಬಿಕಿನಿ ತೊಟ್ಟಿದ್ದ 12 ಯುವತಿಯರೊಂದಿಗೆ ಬ್ಯಾಸ್ಕೆಟ್ ಬಾಲ್ ಆಡಿದೆ. ನನ್ನನ್ನು ಕಂಡರೆ ಯಾಕೆ ಕೆಲವರಿಗೆ ಹೊಟ್ಟೆಕಿಚ್ಚು ಎಂದು ನನಗೆ ಈಗ ಅರ್ಥವಾಗುತ್ತಿದೆ! ಹಾಹಾ!!

* 18 ದಿನಗಳ ಶೂಟಿಂಗ್ ನಂತರ ನಾವು 2013ರ ಕಿಂಗ್‌ಫಿಷರ್ ಕ್ಯಾಲೆಂಡರ್ ಕೆಲಸವನ್ನು ಮುಗಿಸಿದೆವು. ಸೂಪರ್ಬ್ ಅನುಭವ!

* ಗುಡ್ ಮಾರ್ನಿಂಗ್. ಡಿಜಿಟಲ್ ಮ್ಯಾನ್ ಆಫ್ ದ ಇಯರ್ ಸ್ಪರ್ಧೆಯಲ್ಲಿ ಎಲ್ಲರೂ ನನ್ನ ಪರವಾಗಿ ಓಟ್ ಮಾಡಿ ಪ್ಲೀಸ್!

* ಡಿಜಿಟಲ್ ಮ್ಯಾನ್ ಆಫ್ ದ ಇಯರ್ ಸ್ಪರ್ಧೆಯಲ್ಲಿ ನನಗೆ ಸಾಕಷ್ಟು ಓಟುಗಳು ಬಂದಿವೆ. ಆದರೂ ಇನ್ನೂ ಓಟ್ ಹಾಕದಿರುವವರು ನನಗೆ ಓಟ್ ಮಾಡಿ ಪ್ಲೀಸ್!

* ಲಂಡನ್ ಪಬ್‌ನಲ್ಲಿ ಸಂಜೆ ಐದು ಗಂಟೆಗೆ ತುಂಬಾ ರಶ್ ಇರುತ್ತದೆ. ಆದರೂ ಇಲ್ಲಿನ ವಾತಾವರಣ ಸುಖಕರವಾಗಿದೆ. ಇಲ್ಲಿರುವುದು ಎಷ್ಟು ಚೆನ್ನಾಗಿದೆ ಎಂದರೆ ನಾನು ಯಾಕಾದರೂ ಭಾರತಕ್ಕೆ ವಾಪಸ್ ಬಂದೆನೋ ಎಂದು ಅನ್ನಿಸುತ್ತದೆ.

ಇದು ಆರು ಸಾವಿರ ನೌಕರರ ಬದುಕನ್ನು ಅನಿಶ್ಚತತೆಗೆ ದೂಡಿರುವ ಕಂಪನಿಯ ಮಾಲೀಕನ ಮೋಜು-ಮಸ್ತಿಯ ಪರಿ...


ವಿಜಯ್ ಮಲ್ಯ ಎಂತಹ ಸ್ವಾರ್ಥಿ ಎಂದರೆ ಆತನ ಒಡೆತನದ ಕಿಂಗ್‌ಫಿಷರ್ ಏರ್‌ಲೈನ್ಸ್ ಕಂಪನಿ ನಷ್ಟದಲ್ಲಿದ್ದರೂ, ಆ ಕಂಪನಿಯ ಒಡೆತನದಲ್ಲಿದ್ದ 60 ವಿಮಾನಗಳ ಸಂಖ್ಯೆ 10ಕ್ಕೆ ಬಂದು ನಿಂತಿದ್ದರೂ ಆತ ತನ್ನ ಖಾಸಗಿ ಐಷಾರಾಮಿ ವಿಮಾನಗಳನ್ನು ಮಾತ್ರ ಮಾರಿಲ್ಲ. ಇತ್ತ ಏರ್‌ಲೈನ್ಸ್ ನೌಕರರಿಗೆ ಕಳೆದ ಎಂಟು ತಿಂಗಳುಗಳಿಂದ ಸಂಬಳ ನೀಡಿರದಿದ್ದರೂ ತನ್ನ ಆ ಖಾಸಗಿ ವಿಮಾನಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ನಿಯತ್ತಾಗಿ ವೇತನವನ್ನು ನೀಡುತ್ತಾ ಬಂದಿದ್ದಾನೆ.

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಮಲ್ಯನ ಇಂತಹ ಉಡಾಫೆ ನಡವಳಿಕೆಯಿಂದಾಗಿ ಆತನ ಏರ್‌ಲೈನ್ಸ್ ಮಕಾಡೆ ಮಲಗಿದ್ದರೂ ಅದರಿಂದಾಗಿ ಆತನಿಗೆ ಒಂದು ನಯಾಪೈಸೆಯೂ ನಷ್ಟವಾಗುವುದಿಲ್ಲ. ಬದಲಾಗಿ ಆತನ ಅದಕ್ಷತೆಗೆ, ಬೇಜವಾಬ್ದಾರಿತನಕ್ಕೆ ಬೆಲೆ ತೆರುವಂಥವರು ಸಾಮಾನ್ಯ ಜನ. ಇಂಥವರೆಂದೂ ಆತನ ದುಬಾರಿ ವಿಮಾನಗಳಲ್ಲಿ ಹಾರಾಡದಿರುವವರು. ಈಗಾಗಲೇ ಈತನ ಕಿಂಗ್‌ಫಿಷರ್ ಏರ್‌ಲೈನ್ಸ್ ಕಂಪನಿಯು ಬ್ಯಾಂಕುಗಳಿಗೆ 7,000 ರೂಪಾಯಿಗಳಷ್ಟು ಹಣವನ್ನು ನೀಡಬೇಕಿದೆ. ಅದಲ್ಲದೆ ವಿಮಾನಯಾನ ಇಲಾಖೆಗೂ, ಇಂಧನ ಕಂಪನಿಗಳಿಗೂ, ವಿವಿಧ ವಿಮಾನ ನಿಲ್ದಾಣಗಳಿಗೂ ಸಾವಿರಾರು ಕೋಟಿ ರೂಪಾಯಿಗಳ ಬಾಕಿ ಹಣವನ್ನು ಕಟ್ಟಬೇಕಿದೆ. ಇದೆಲ್ಲದರ ಜೊತೆಗೆ 6,000 ನೌಕರರಿಗೆ ಎಂಟು ತಿಂಗಳ ಬಾಕಿ ಹಣವನ್ನು ಕೊಡಬೇಕಿದೆ.



ನಮ್ಮಂಥವರು ಲಕ್ಷಗಳ ಲೆಕ್ಕದಲ್ಲಿ ಸಾಲವನ್ನು ಮಾಡಿದ್ದರೆ ಅದೇ ನಮ್ಮ ನೆಮ್ಮದಿಯನ್ನು ಕೆಡಿಸುತ್ತಿರುತ್ತದೆ. ಆದರೆ ಹೀಗೆ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಮೈಮೇಲೆಳೆದುಕೊಂಡಿರುವ ಮಲ್ಯ ಅದು ಹೇಗೆ ಇಷ್ಟು ಆರಾಮಾಗಿ ಇದ್ದಾನೆ ಎಂದು ಆಶ್ಚರ್ಯವಾಗುತ್ತದೆ.

ಆದರೆ ವಾಸ್ತವವಾಗಿ ಆತ ಆರಾಮಾಗಿರುವುದಕ್ಕೆ ಕಾರಣ ಆತನ ರಕ್ಷಣೆಗೆ ಸರ್ಕಾರ ಮತ್ತು ಬ್ಯಾಂಕ್‌ಗಳು ನಿಂತಿರುವುದು. ಉದಾಹರಣೆಗೆ, ಕಳೆದ ವರ್ಷ ಹದಿಮೂರು ಪ್ರಮುಖ ಬ್ಯಾಂಕುಗಳು ಕಿಂಗ್‌ಫಿಷರ್ ಏರ್‌ಲೈನ್ಸ್ ಅನ್ನು ರಕ್ಷಿಸಲು ಆತ ಸಾಲದ ರೂಪದಲ್ಲಿ ಪಡೆದಿದ್ದ ಬರೋಬ್ಬರಿ 1,300 ಕೋಟಿ ರೂಪಾಯಿಗಳನ್ನು ಆ ಕಂಪನಿಯ 23 % ಶೇರ್‌ಗಳಾಗಿ ಪರಿವರ್ತಿಸಲಾಯಿತು. ಅಂದರೆ ಮಲ್ಯನ ನಿರ್ಲಕ್ಷ್ಯ ಮತ್ತು ಅದಕ್ಷತೆಯಿಂದಾಗಿ ಆಗಿದ್ದ ನಷ್ಟವನ್ನು ಬ್ಯಾಂಕುಗಳು ಸಾಮಾನ್ಯ ಜನರ ತಲೆಗೆ ಕಟ್ಟಿದವು. ಇವತ್ತು ಆ ಶೇರುಗಳಿಗೆ ರದ್ದಿ ಕಾಗದಕ್ಕೆ ಇರುವ ಬೆಲೆಯೂ ಇಲ್ಲ! ಇದರ ಅರ್ಥ ಮಲ್ಯನಿಂದಾಗಿ ಬ್ಯಾಂಕುಗಳು ಈಗಾಗಲೇ ಸಾವಿರಾರು ಕೋಟಿ ರೂಪಾಯಿಗಳ ನಷ್ಟ ಕಂಡಿವೆ!!

ಕಿಂಗ್‌ಫಿಷರ್ ಏರ್‌ಲೈನ್ಸ್ ಮುಚ್ಚಿದರೆ ವಿಜಯ್ ಮಲ್ಯ ದಿವಾಳಿ ಆಗುವುದಿಲ್ಲ. ಯಾಕೆಂದರೆ ಆತನ ಒಡೆತನದಲ್ಲಿ ಈಗಲೂ ಪ್ರತಿ ತಿಂಗಳೂ ಕೋಟ್ಯಾಂತರ ರೂಪಾಯಿಗಳ ಲಾಭ ತರುವ ಹೆಂಡದ ಕಂಪನಿಗಳಿವೆ. ಆದರೆ ಆ ಕಂಪನಿಗಳ ಖಾತೆಯಿಂದ ಈ ಏರ್‌ಲೈನ್ಸ್ ಕಂಡಿರುವ ನಷ್ಟವನ್ನು ಭರಿಸಲಾಗುವುದಿಲ್ಲ. ಅದು ನಮ್ಮ ದೇಶದಲ್ಲಿರುವ ಕಾನೂನು!!

ಕಳೆದ ಎಂಟು ತಿಂಗಳುಗಳಿಂದ ತಮಗೆ ನ್ಯಾಯಸಮ್ಮತವಾಗಿ ಕೊಡಬೇಕಿದ್ದ ಬಾಕಿ ಸಂಬಳವನ್ನು ಕೊಡಿ ಎಂದು ನೌಕರರು ಕೇಳಿದರೆ ಮಲ್ಯನ ಕಂಪನಿಯ ಅಧಿಕಾರಿಗಳು "ಇಷ್ಟು ದಿನ ಕೊಡಬೇಕಿದ್ದ ಸಂಬಳಕ್ಕೆ ಮಾಫಿ ಹೇಳಿದರೆ ಮುಂದಿನ ತಿಂಗಳಿಂದ ನಿಮಗೆ ಸಂಬಳ ಕೊಡುತ್ತೇವೆ" ಎನ್ನುತ್ತಿದ್ದಾರೆ. ಇಂತಹ ಭರವಸೆಯನ್ನು ನಂಬಲು ನೌಕರರು ಸಿದ್ಧರಿಲ್ಲ. ಆದ್ದರಿಂದ ಅವರು ತಮ್ಮ ಬಾಕಿ ಹಣಕ್ಕೆ ಮಲ್ಯನನ್ನೇ ಒತ್ತಾಯಿಸಲು ಇದೇ ತಿಂಗಳ 26ರಂದು ದೆಹಲಿಯ ಹೊರವಲಯದಲ್ಲಿ ಪ್ರಾರಂಭವಾಗಲಿರುವ ಫಾರ್ಮುಲಾ ಒನ್ ರೇಸಿನ ಸಮಯದಲ್ಲಿ ವಿಜಯ್ ಮಲ್ಯನಿಗೆ ಮುತ್ತಿಗೆ ಹಾಕಲು ನಿರ್ಧರಿಸಿದ್ದಾರೆ.

ಅಂದಹಾಗೆ ಈ ಫಾರ್ಮುಲಾ ಒನ್ ಕಂಪನಿಯನ್ನು ಮಲ್ಯ ಕೋಟ್ಯಾಂತರ ರೂಪಾಯಿ ಕೊಟ್ಟು ಖರೀದಿಸಿದ್ದಾನಲ್ಲದೆ ಇದಕ್ಕೆಂದು ಕೆಲಸ ಮಾಡುತ್ತಿರುವ 250 ಜನರ ಸಂಬಳಕ್ಕೆಂದು ಆತ ಪ್ರತಿವರ್ಷ ವೆಚ್ಚ ಮಾಡುತ್ತಿರುವ ಮೊತ್ತ 120 ಮಿಲಿಯನ್ ಡಾಲರ್‌ಗಳಿಗಿಂತಲೂ ಹೆಚ್ಚು!

ಮಲ್ಯನ ಹುಚ್ಚಾಟಕ್ಕೆ ಆತನ ಕಂಪನಿಯ ನೌಕರರು ಮಾತ್ರವಲ್ಲ, ಸಾಮಾನ್ಯ ಜನರೂ ಪೇಚಾಡುವಂತಾಗಿರುವುದು ನಮ್ಮ ದೇಶದಲ್ಲಿರುವ ವ್ಯವಸ್ಥೆಯ ಒಂದು ಪೈಶಾಚಿಕ ಮುಖವಷ್ಟೇ...


ಮ್ಯಾಂಗೋ ಪೀಪಲ್ ಮತ್ತು ಬನಾನ ರಿಪಬ್ಲಿಕ್

ನಮ್ಮೂರ ಅಳಿಯ ಅಂತಾರಲ್ಲಾ... ಹಾಗೆ ನಮ್ಮ ದೇಶದ ಅಳಿಯನಾದ ರಾಬರ್ಟ್ ವಾದ್ರಾನ ಅವಾಂತರದಿಂದ ಅತ್ತೆ ಸೋನಿಯಾ ಗಾಂಧಿ ಮಾತ್ರವಲ್ಲ ಇಡೀ ದೇಶದ ಜನರೇ ಸುಸ್ತಾಗಿದ್ದಾರೆ. ಒಂದು ಕಡೆ ದೇಶದ ಜನತೆಯ ಮೇಲೆ ಇನ್ನೊಂದೆಡೆ ತನ್ನ ಖಾಸಾ ಅತ್ತೆಯ ನಾಯಕತ್ವದ ಮೇಲೆ ಎರ್ರಾಬಿರ್ರಿ ಟೀಕೆ ಮಾಡಿದ ಅಳಿಯ ನಂತರ ನಾಪತ್ತೆಯಾಗಿರುವ ಪ್ರಸಂಗವನ್ನು ಇಡೀ ದೇಶವೇ ಗಂಭೀರ ಮೌನದಿಂದ ಗಮನಿಸುತ್ತಿದೆ.



ಬನಾನ ರಿಪಬ್ಲಿಕ್ ಎಂಬುದರ ಬಗ್ಗೆ ನನಗೆ ಒಂದಿಷ್ಟು ಮಾಹಿತಿ ಇತ್ತು. ಬೇಕಾದರೆ ಬಾಳೆ ಕಾಯಿ ಪ್ರಜಾಪ್ರಭುತ್ವವೆಂದು ಅನ್ನಿ (ಈ ತರ ಕಾಯಿ ಗೀಯಿ ಎಂಬ ಶಬ್ದದ ಪ್ರಯೋಗ ಒಂದಿಷ್ಟು ವಲ್ಗರ್ ಆಗಬಹುದೇನೋ ಎಂಬ ಅನುಮಾನ ನನಗಿದೆ. ಆದರೂ ಕೂಡಾ ಈ ಪದದ ಸೃಷ್ಟಿಯಲ್ಲಿ ಅಂತಹುದೇ ಧ್ವನಿ ಇದೆ ಎಂಬುದೂ ನನ್ನ ಇನ್ನೊಂದು ಅನುಮಾನ). ಒಂದು ದೇಶಕ್ಕೆ ಬೇರೆ ಯಾವ ಸಂಪನ್ಮೂಲಗಳು ಕೂಡ ಇಲ್ಲದೆ, ಆ ದೇಶವು ಕೃಷಿ ಮೂಲವಾದ ಸಂಪನ್ಮೂಲಗಳ ರಫ್ತಿನ ಆರ್ಥಿಕತೆಯ ಮೇಲೆ ಅವಲಂಬಿತವಾಗಿದ್ದು, ರಾಜಕೀಯವಾಗಿ ಅಸ್ಥಿರವಾಗಿರುವ ದೇಶವನ್ನು ಬನಾನ ರಿಪಬ್ಲಿಕ್ ಎಂದು ಹೇಳುತ್ತಾರೆ. ಹಾಗೂ ದುಡಿಯುವ ವರ್ಗವನ್ನು ನಿರಂತರವಾಗಿ ಶೋಷಣೆಗೆ ಒಳಪಡಿಸುವ ನಾಯಕತ್ವವು ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ತಮ್ಮ ರಾಜಕೀಯ ಮಹತ್ವಕಾಂಕ್ಷೆಗೆ ದುರ್ಬಳಕೆ ಮಾಡಿಕೊಂಡು ದೇಶವನ್ನು ದೋಚುವವರಾಗಿರುತ್ತಾರೆ. ರಿಪಬ್ಲಿಕ್ ಆಫ್ ಅನ್ಚುರಿಯಾ ಎಂಬ ಕಾಲ್ಪನಿಕ ದೇಶವನ್ನು ಸೃಷ್ಟಿಸುವುದರ ಮೂಲಕ ಬನಾನ ರಿಪಬ್ಲಿಕ್ ಎಂಬ ಪದವನ್ನು ಅಮೇರಿಕನ್ ಸಾಹಿತ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಚಲಾವಣೆಗೆ ತರಲಾಯಿತು. ಖ್ಯಾತ ಬರಹಗಾರನಾದ ಓ. ಹೆನ್ರಿ ೧೯೦೪ರಲ್ಲಿ ಬರೆದ 'ಕ್ಯಾಬೇಜಸ್ ಅಂಡ್ ಕಿಂಗ್ಸ್' ಎಂಬ ಕೃತಿಯ ಮೂಲಕ ಒಂದು ದೇಶದ ಪಜಾಪ್ರಭುತ್ವವನ್ನು ವ್ಯಂಗ್ಯವಾಗಿ ನಿರೂಪಿಸಿದ. ಆ ಕಾಲ್ಪನಿಕ ದೇಶದ ನಾಯಕತ್ವವು ಸರ್ವಾಧಿಕಾರಿ ಆಳ್ವಿಕೆಗೆ ಒಳಪಟ್ಟಿದ್ದು, ಭ್ರಷ್ಟಾಚಾರ ಮತ್ತು ಅಪಾರ ಕಿಕ್‌ಬ್ಯಾಕ್ ವ್ಯವಸ್ಥೆಯನ್ನು ಬೆಂಬಲಿಸಿದ್ದು, ಪ್ಲಾಂಟೇಷನ್ ಕಾರ್ಮಿಕರ – ಅದರಲ್ಲಿಯೂ ಬಾಳೆ ಹಣ್ಣಿನ ಕೃಷಿ ಕಾರ್ಮಿಕರ – ಶೋಷಣೆಯನ್ನು ಅವ್ಯಾಹತವಾಗಿ ನಡೆಸುವುದರ ಮೂಲಕ ಆ ದೇಶದ ಸರ್ವಾಧಿಕಾರಿಯು ತನ್ನ ಸ್ಥಾನವನ್ನು ಭದ್ರ ಪಡಿಸಿಕೊಂಡಿರುತ್ತಾನೆ. ಇಂತಹ ಶೋಷಕ ವ್ಯವಸ್ಥೆಯನ್ನು ಬನಾನ ರಿಪಬ್ಲಿಕ್ ಎಂದು ಬಣ್ಣಿಸಲಾಗಿದೆ. ಪ್ರಭುತ್ವ ಮತ್ತು ಕೆಲವೇ ವ್ಯಕ್ತಿಗಳ ಅಪವಿತ್ರ ಮೈತ್ರಿಯಿಂದ ಜನತೆಯನ್ನು ದರೋಡೆ ಮಾಡಿ ಖಾಸಗಿ ಒಡೆತನದ ಆಸ್ತಿಗಳನ್ನು ಗಳಿಸುವುದು ಹಾಗೂ ತಮ್ಮ ಅದಕ್ಷ ಮತ್ತು ಭ್ರಷ್ಟ ಆಳ್ವಿಕೆಯ ದೆಸೆಯಿಂದ ದೇಶದ ಮೇಲೆ ಹೊರೆಯಾಗುವ ಸಾಲಗಳನ್ನು ಜನತೆಯ ಮೇಲೆ ವರ್ಗಾಯಿಸುವುದು ಬನಾನ ರಿಪಬ್ಲಿಕ್‌ನ ಹೆಗ್ಗುರುತು. ಇಂತಹ ಭ್ರಷ್ಟ ಆರ್ಥಿಕ ಅವ್ಯವಸ್ಥೆಯ ಮೂಲಕ ರಾಷ್ಟ್ರದ ಕರೆನ್ಸಿಯನ್ನು ಅಪಮೌಲ್ಯಗೊಳಿಸಿ ಪೇಪರ್ ಕರೆನ್ಸಿಯಾಗಿ ಆರ್ಥಿಕತೆಯ ದಿವಾಳಿಯನ್ನೆಬ್ಬಿಸುವುದು ಈ ಬಾಳೆಕಾಯಿ ಪ್ರಜಾಪ್ರಭುತ್ವದ ಗುಣಲಕ್ಷಣಗಳು. ಆ ಮೂಲಕ ಆ ಪ್ರಜಾಪ್ರಭುತ್ವವು ಅಂತರರಾಷ್ಟ್ರೀಯ ಮಟ್ಟದ ಅಭಿವೃದ್ಧಿ-ಸಾಲ ಮೊದಲಾದ ಕ್ಷೇತ್ರಗಳಲ್ಲಿ ವಿಶ್ವಾಸಾರ್ಹತೆಯನ್ನು ಕಳೆದುಕೊಂಡು ತನ್ನ ನಗರ ಮತ್ತು ಹಳ್ಳಿಗಳ ಮಟ್ಟಕ್ಕೆ ಮಿತಿಯಾಗುವುದು; ಕಳ್ಳ-ಕಾಕರು ಸರ್ಕಾರವನ್ನು ನಿಯಂತ್ರಣದಲ್ಲಿ ಇರಿಸುವುದು; ನೌಕರಶಾಹಿಯು ತಮ್ಮ ಹುದ್ದೆಯ ದುರುಪಯೋಗ ಮಾಡಿಕೊಂಡು ಭ್ರಷ್ಟಾಚಾರದ ಮೂಲಕ ಜನಜೀವನವನ್ನು ಅಸಹನೀಯಗೊಳಿಸುವುದು... ಇವೇ ಮೊದಲಾದ ಕಾರ್ಯವೈಖರಿಯನ್ನು ಹೊಂದಿರುವ ಸದರಿ ಪ್ರಜಾಪ್ರಭುತ್ವಕ್ಕೆ ನಮ್ಮ ದೇಶದ ಹೋಲಿಕೆಯೇನಾದರೂ ಕಂಡು ಬಂದಲ್ಲಿ ಅದು ರಾಬರ್ಟ್ ವಾದ್ರಾನ ಹತ್ತಿರದ ಸಂಬಂಧಿಗಳ ದೋಷವೇ ಎಂಬುದನ್ನು ಮುಂಬರುವ ದಿನಗಳು ನಿರ್ಣಯಿಸಬೇಕು. ಈ ಪ್ರವರ ಇನ್ನೂ ಮುಂದುವರೆಯುತ್ತದೆ... ಅಂತರರಾಷ್ಟ್ರೀಯ ಒತ್ತಡಕ್ಕೆ ಮಣಿಯುವ ಪ್ರಭುತ್ವವು ತನ್ನ ಜನರಿಗೆ ಉತ್ತರದಾಯಿತ್ವವನ್ನು ಹೊಂದಿಲ್ಲದೆ ಇಡೀ ವ್ಯವಸ್ಥೆ ಭ್ರಷ್ಟಾಚಾರದ ಆಧಾರದ ಮೇಲೆ ನಿಂತಿರುವುದು. ಹೀಗಾಗಿ ಆ ಪ್ರಜಾಪ್ರಭುತ್ವ ವ್ಯವಸ್ಥೆಯ ಶಾಸಕಾಂಗವು ಬಿಕರಿಯಾಗಲು ಸದಾ ಸನ್ನದ್ಧವಾಗಿರುವುದು ಹಾಗೂ ನಾಮಕಾವಸ್ಥೆಯ ಸರ್ಕಾರ ಮಾತ್ರ ಆಡಳಿತ ನಡೆಸುವಂತಹ ವ್ಯವಸ್ಥೆಯನ್ನು ಬನಾನ ರಿಪಬ್ಲಿಕ್ ಎಂದು ಕರೆಯುತ್ತಾರೆ.

ಆದರೆ, ತನ್ನ ಖಾಸಾ ಅತ್ತೆಯೇ ಆಡಳಿತ ಪಕ್ಷದ ನಾಯಕಿಯಾಗಿರುವ ಪ್ರಜಾಪ್ರಭುತ್ವವನ್ನು ಆ ಅಳಿಯ ಬನಾನ ರಿಪಬ್ಲಿಕ್‌ಗೆ ಅಂದರೆ ಬಾಳೆಕಾಯಿ ಪ್ರಜಾಪ್ರಭುತ್ವಕ್ಕೆ ಹೋಲಿಸಿ ಘನಕಾರ್ಯವನ್ನು ಎಸಗಿದ. ನಂತರ ತನ್ನ ಅವಿವೇಕವನ್ನು



ತೀರಾ ಹಾಸ್ಯಾಸ್ಪದವಾಗಿ ಸರಿಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ. ಡಿಎಲ್‌ಎಫ್ ಮತ್ತು ರಾಬರ್ಟ್ ವಾದ್ರಾನ ಅನೈತಿಕ ಸಂಬಂಧ ಮತ್ತು ಆ ಮೂಲಕ ಆತನಿಗೆ ಗಳಿಕೆಯಾದ ಮುನ್ನೂರು ಕೋಟಿ ರೂಪಾಯಿಯ ಗಂಟಿನ ಬಗ್ಗೆ ಅರವಿಂದ ಕೇಜ್ರಿವಾಲ್ ಮಾಡಿದ ಆರೋಪದಿಂದ ಕೆರಳಿದ ರಾಬರ್ಟ್ ವಾದ್ರಾ "ಮ್ಯಾಂಗೋ ಪೀಪಲ್ ಇನ್ ಬನಾನ ರಿಪಬ್ಲಿಕ್" ಎಂದು ವಿಷಕಾರಿದ್ದಾನೆ. ಬನಾನ ರಿಪಬ್ಲಿಕ್ ಎಂದು ತನ್ನ ಅತ್ತೆ ಸೋನಿಯಾ ಗಾಂಧಿಯ ಮುಖಕ್ಕೆ ಸಾರ್ವಜನಿಕವಾಗಿ ಮಂಗಳಾರತಿ ಎತ್ತಿದ ಪ್ರಕರಣವನ್ನಂತೂ ಅಳಿಯ ಮತ್ತು ಅತ್ತೆಯ ಸರಸ ಎಂದು ಭಾವಿಸಿ ನೆಮ್ಮದಿಯಾಗಬಹುದಿತ್ತು. ಆದರೆ, ಆ ಮಹಾಶಯ ಅಮಾಯಕರಾದ ನಮ್ಮ ನಿಮ್ಮೆಲ್ಲರನ್ನು ಎಳೆ ತಂದು ಮ್ಯಾಂಗೋ ಪೀಪಲ್ ಎಂದು ಕಿಚಾಯಿಸಿದ್ದಾನೆ.

ಬಾಳೆಕಾಯಿ ಪ್ರಜಾಪ್ರಭುತ್ವದ ಸಕಲ ಗುಣಲಕ್ಷಣಗಳನ್ನು ವಿವರವಾಗಿ ಗ್ರಹಿಸಿದ ನನಗೆ ಮ್ಯಾಂಗೋ ಪೀಪಲ್‌ನ ವಿಶೇಷಣವನ್ನು ಅರಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೊನೆಗೂ ಈ ಬಗ್ಗೆ ಅನೇಕ ಬುದ್ಧಿವಂತರನ್ನು ಸಂಪರ್ಕಿಸಿ ತಿಳಿದುಕೊಂಡ ಸತ್ಯವೆಂದರೆ, ಅದರ ಅರ್ಥ ಜನಸಾಮಾನ್ಯ ಎಂದು. ಅದು ಹೇಗೆಂದರೆ ಹಿಂದಿಯಲ್ಲಿ ಜನಸಾಮಾನ್ಯನನ್ನು 'ಆಮ್ ಆದ್ಮಿ' ಎಂದೆನ್ನುತ್ತಾರೆ. ಈ ಆಮ್ ಎಂಬ ಶಬ್ದದ ಇನ್ನೊಂದು ಅರ್ಥವೆಂದರೆ ಮಾವಿನ ಹಣ್ಣು ಅರ್ಥಾತ್ ಮ್ಯಾಂಗೋ ಎಂದು. ಆಮ್ ಆದ್ಮಿಯ ಲಿಟರಲ್ ಟ್ರಾನ್ಸ್‌ಲೇಷನ್ ದೇಶ ಅಳಿಯನ ಶಬ್ದಕೋಶದಲ್ಲಿ ಮ್ಯಾಂಗೋ ಪೀಪ ಎಂಬುದಾಗಿದೆ. ಅಂತೂ ಇಂತಹ ವಿಚಿತ್ರ ವ್ಯಂಗ್ಯವ ಅರಗಿಸಿಕೊಳ್ಳಲಾರದೆ ಜನಸಾಮಾನ್ಯರು ಮಾವಿನ ಹಣ್ಣ ಆತನತ್ತ ಎಸೆದಾಗ ಇನ್ನು ಬಚಾವಾಗುವುದು ಕಷ್ಟ ಎಂದ ತನ್ನ ಫೇಸ್ ಬುಕ್ ಅಕೌಂಟನ್ನು ಬಂದ್ ಮಾಡಿ ಬಂದ್ ಮಾಡುವ ಮೊದಲು ಈ ಜನರಿಗೆ ಹಾಸ್ಯ ಪ್ರಜ್ಞೆ ಇಲ್ಲ ಎಂದು ಕಟಕಿಯನ್ನಾಡಿದ.

ಡಿಎಲ್‌ಎಫ್ ಕಂಪೆನಿಯು ರಾಬರ್ಟ್ ವಾದ್ರಾ ನೀಡಿದ ಕೋಟಗಟ್ಟಲೆ ಹಣವನ್ನು ತಾನು ಬಡ್ಡಿರಹಿ ಸಾಲವಾಗಿ ನೀಡಿಲ್ಲ ಬದಲಿಗೆ ಮುಂಗಡ ಹಣವಾ ನೀಡಿರುವುದಾಗಿ ಸ್ಪಷ್ಟೀಕರಣವನ್ನು ನೀಡಿದೆ. ಮೂರ ವರ್ಷಗಳಲ್ಲಿ ಐವತ್ತು ಲಕ್ಷ ರೂಪಾಯಿಗಳ ಬಂಡವಾಳದಿಂ ಮುನ್ನೂರು ಕೋಟಿ ರೂಪಾಯಿಗಳ ಲಾಭವನ್ನು ಗಳಿಸಿರು ರಾಬರ್ಟ್ ವಾದ್ರಾ ಯಾವ ವ್ಯವಹಾರಕ್ಕಾಗಿ ಯಾ ಮುಂಗಡಹಣವನ್ನು ಪಡೆದ ಅಥವಾ ಅತಿ ದೊ ಮನುಷ್ಯರಿಗೇ ಯಾಕೆ ಕೋಟ್ಯಾಂತರ ರೂಪಾಯಿಗಳ ಬ ರಹಿತ ಸಾಲ ದೊರಕುತ್ತದೆ ಎಂದು ನಿರ್ಧರಿಸಬೇಕಾದವ ಯಾರು? ಖಂಡಿತವಾಗಿಯೂ ಮ್ಯಾಂಗೋ ಪೀಪಲ್ ಅ ಜನಸಾಮಾನ್ಯರಂತೂ ಅಲ್ಲ. ಮತ್ತು ಮ್ಯಾಂಗೋ ಪೀಪಲ್ ಯಾಕೆ ಹತ್ತು ರೂಪಾಯಿಯ ಬಡ್ಡಿರಹಿತ ಸಾ ದೊರಕುವುದಿಲ್ಲ ಎಂಬ ಪ್ರಶ್ನೆ ಮೂಡಿದಲ್ಲಿ ಮತ್ತೆ ನಾ ಬನಾನಾ ರಿಪಬ್ಲಿಕ್‌ನ ಸಂವಿಧಾನದ ಅಪಭ್ರಂಶತೆಯನ ತಿರುವಿ ಹಾಕಬೇಕಾಗುತ್ತದೆ.

ಆದರೆ ಈ ಡಿಎಲ್‌ಎಫ್, ರಾಬರ್ಟ್ ವಾದ್ರಾ ಹಾಗ ಕಾಂಗ್ರೆಸ್ ಪಕ್ಷ ಅಧಿಕಾರವನ್ನು ಹೊಂದಿರುವ ಹರಿಯಾ ಸರ್ಕಾರದ ನಡುವಿನ ಪ್ರೇಮ್ ಕಹಾನಿಯಲ್ಲಿ ನಡೆದಿರು ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರದಲ್ಲಿ ಯಾವುದ ಕಾನೂನಿನ ಉಲ್ಲಂಘನೆಯಾಗಿರುವುದನ್ನು ಸಾಬೀತುಪಡಿಸಲ ಸಾಧ್ಯವಿಲ್ಲವೆಂಬುದು ಕಾನೂನು ತಜ್ಞರ ಅಭಿಪ್ರಾಯ ಏಕೆಂದರೆ, ಇಡೀ ಹಗರಣವನ್ನು ಆರಂಭದಿಂದಲ ಸಕ್ರಮಗೊಳಿಸಲು ಮಹಾನ್ ಕಾನೂನು ತಜ್ಞರು ಮತ ಆಡಿಟರ್‌ಗಳು ಅವಿರತವಾಗಿ ಶ್ರಮಿಸಿದ್ದಾರೆ. ಹೀಗಾ ಕೋಟಿಗಟ್ಟಲೆ ಹಣದ ಅವ್ಯವಹಾರವು ನೈತಿಕವಾಗಿ ರಾಷ್ಟ್ರ




ಮೊದಲ ಕುಟುಂಬಕ್ಕೆ ಕಳಂಕವಾ ಬಹುದಷ್ಟೇ ಹೊರತು ಅವರ್‍ಯಾರು ಕಾನೂನಿನ ಹಿಡಿತಕ್ಕೆ ಬರುವುದ ಅಸಾಧ್ಯ... ಅಬ್ಬಾ... ಬನಾನಾ ರಿಪಬ್ಲಿಕ್ ಅದೃಷ್ಟವೇ...

● ಬಾನು ಮುಷ್ತಾಕ

ಮಲಾಲ ಯೂಸುಫ್‌ಜಾಯಿ ಮತ್ತು ಮಾತೆ ಸಾವಿತ್ರಿಬಾ ಫುಲೆ

ಹದಿನಾಲ್ಕು ವರ್ಷದ ಹಾಲುಗಲ್ಲದ ಮಲಾಲ ಯೂಸುಫ್‌ಜಾಯಿ ಪಾಕಿಸ್ತಾನದ ಸ್ವಾತ್ ಪ್ರಾಂತ್ಯದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಪರ ದನಿ ಎತ್ತಿದ್ದಳು. ಆ ಮೂಲಕ ವಿಶ್ವದ ಗಮನ ಸೆಳೆದಿದ್ದಳು. ಆದರೆ ಕಳೆದ ಅಕ್ಟೋಬರ್ 8 ರಂದು ಆಕೆಯ ಮೇಲೆ ಅನಾಮಧೇಯನೊಬ್ಬ ಗುಂಡಿಕ್ಕಿ, ಆಕೆಯ ಹತ್ಯೆಗೆ ಯತ್ನಿಸಿದ. ತನ್ಮೂಲಕ ಆಕೆಯ ಮತ್ತು ಅಂತಹವರ ದನಿ ಉಡುಗಿಸಲು ಆತ ಪ್ರಯತ್ನಿಸಿದ. ನಿಜಕ್ಕೂ ಇದು ಖಂಡನೀಯ ಎನ್ನುವುದಕ್ಕೂ ಮೊದಲೆ ಇಡೀ ಪಾಕಿಸ್ತಾನವೇ ಮಲಾಲಳ ಪರ ನಿಂತಿದೆ.



ಆಕೆಯ ಹತ್ಯೆಗೆ ಯತ್ನಿಸಿದವನ ಪತ್ತೆಗೆ ಪಾಕ್ ಸರ್ಕಾರ 10 ಲಕ್ಷ ರೂ.ಗಳ ಬಹುಮಾನ ಘೋಷಿಸಿದೆ. ಮಲಾಲಳ ಹೋರಾಟಕ್ಕೆ ಪಾಕ್ ಸರ್ಕಾರ ಮತ್ತು ಜನತೆ ಸಾಥ್ ನೀಡಿದೆ. ಒಂದರ್ಥದಲ್ಲಿ ಹೇಳುವುದಾದರೆ ಈ ನಿಟ್ಟಿನಲ್ಲಿ ಮಲಾಲ ಗೆದ್ದಿದ್ದಾಳೆ.

ಇರಲಿ, ಸದ್ಯದ ಈ ಲೇಖನದ ಉದ್ದೇಶ ಮಲಾಲಳ ಪರ ದನಿ ಎತ್ತಿರುವ ಭಾರತದ ಹಿಂದೂತ್ವವಾದಿಗಳನ್ನು ಕುರಿತದ್ದು. ಪ್ರಶ್ನೆ ಏನೆಂದರೆ ಮಲಾಲಳ ಈ ಪ್ರಕರಣದಿಂದ ಭಾರತದ ಮತಾಂಧ ಹಿಂದೂಗಳಿಗೆ ದಕ್ಕುವುದಾದರೂ ಏನು? ಈ ಹಿಂದೂತ್ವವಾದಿಗಳು ಮಲಾಲಳ ಪರ ಈ ಪರಿ ಬೊಬ್ಬೆ ಹೊಡೆಯುತ್ತಿರುವುದು ಯಾಕೆ? ಅಂದಹಾಗೆ ಮಲಾಲಳ ಪರ ದನಿ ಎತ್ತಿರುವ ಈ ಹಿಂದೂತ್ವವಾದಿ ಸಂಘಟನೆಗಳು ಅದೇ ಮಲಾಲಳ ರೀತಿ 150 ವರ್ಷಗಳ ಹಿಂದೆ ಭಾರತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಪರ ದನಿ ಎತ್ತಿದ್ದ ಸಾವಿತ್ರಿಬಾಯಿ ಫುಲೆಯವರ ಹೆಸರು ಕೇಳಿದಾಕ್ಷಣ ಮೌನವಹಿಸುತ್ತಾರೆ!

ಹೌದು, ಇಲ್ಲಿನ ಹಿಂದೂತ್ವವಾದಿಗಳು ಪಾಕಿಸ್ತಾನದ ಮಲಾಲಳ ಪರ ದನಿಗೂಡಿಸುತ್ತಾರೆ ಆದರೆ ನಮ್ಮ ಭಾರತದ ಸಾವಿತ್ರಿಬಾಯಿ ಫುಲೆ ಅವರ ಸಾಧನೆಯನ್ನು ಕಡೆಗಣಿಸುತ್ತಾರೆ. ಯಾಕೆಂದರೆ ಸಾವಿತ್ರಿ ಬಾಯಿಯವರು ದನಿ ಎತ್ತಿದ್ದು ಮನುಧರ್ಮ ಶಾಸ್ತ್ರದ ವಿರುದ್ಧ! ಶೂದ್ರರಿಗೆ ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣ ನಿಷೇಧಿಸಿದ್ದ, ಸಂಸ್ಕೃತ ಕೇಳಿದ ಪುರೋಹಿತಶಾಹಿ ಅಲ್ಲದವರ ಕಿವಿಗಳಿಗೆ ಕಾದ ಸೀಸ ಸುರಿಯಬೇಕು ಎಂದು ವಿಧಿಸಿದ್ದ ಅದರ ಕರಾಳ ಕಟ್ಟಳೆಗಳ ವಿರುದ್ಧ!!

ಒಂದೂವರೆ ಶತಮಾನದ ಹಿಂದೆ ಮಹಾರಾಷ್ಟ್ರದ ಪೂನಾ ನಗರದಲ್ಲಿ ಸಾವಿತ್ರಿಬಾ ಫುಲೆ ಮತ್ತು ಅವರ ಪತಿ ಜ್ಯೋತಿಬಾ ಫುಲೆಯವರು ಸೇರಿ ಸ್ಥಾಪಿಸಿದ್ದು ಹೆಣ್ಣು ಮಕ್ಕಳ ಶಾಲೆ! ಆಗ ಅವರಿಗೆ ಅಂದಿನ ಹಿಂದೂತ್ವವಾದಿಗಳಿಂದ ಸಿಕ್ಕಿದ್ದು ಕೆಸರು ಎರಚುವಿಕೆ! ದಾರಿಯುದ್ದಕ್ಕೂ ನಿಂದನೆಯ ಸುರಿಮಳೆ! ಹಿಂದೂತ್ವವಾದಿಗಳ ಇಂತಹ ಕೆಸರಿನ ಸ್ನಾನದಿಂದ ತಪ್ಪಿಸಿಕೊಳ್ಳಲು ಸಾವಿತ್ರಿಬಾಯಿಯವರು ಶಾಲೆವರೆಗೆ ಒಂದು ಸೀರೆ, ನಂತರ ಗಲೀಜು ಸೀರೆ ಬದಲಿಸಲು ತಮ್ಮ ಜೊತೆ ಮತ್ತೊಂದು ಸೀರೆ ಒಯ್ಯುತ್ತಿದ್ದರು! ತನ್ಮೂಲಕ ಹಿಂದೂತ್ವವಾದಿಗಳು ನೀಡುತ್ತಿದ್ದ ಅಂತಹ ನೋವುಗಳನ್ನು ಆ ಮಹಾಮಾತೆ ಸಹಿಸಿಕೊಂಡರು. ದೇಶದ ಹೆಣ್ಣು ಮಕ್ಕಳಲ್ಲಿ (ಬ್ರಾಹ್ಮಣರ ಹೆಣ್ಣು ಮಕ್ಕಳನ್ನೂ ಒಳಗೊಂಡಂತೆ!) ಹಾಗೂ ಶೂದ್ರರಲ್ಲಿ ಮಾತೆ ಸಾವಿತ್ರಿ ಬಾಫುಲೆ ಮತ್ತು ಅವರ ಪತಿ ಜ್ಯೋತಿ ಬಾಫುಲೆ ಶಿಕ್ಷಣದ ಜ್ಯೋತಿ ಹಚ್ಚಿದರು. ಪ್ರಶ್ನೆ ಏನೆಂದರೆ ಯಾಕೆ ಅಂದಿನ ಹಿಂದೂತ್ವವಾದಿ ಬ್ರಾಹ್ಮಣರು ಮಾತೆ ಸಾವಿತ್ರಿ ಬಾಫುಲೆಯವರು ಶಾಲೆಗೆ ಹೊರಟಾಗ ಕೆಸರು ಎರಚುತ್ತಿದ್ದದ್ದು? ನಿಂದನೆ ಗೈಯುತ್ತಿದ್ದದ್ದು? ಮೊನ್ನೆ ಮಲಾಲಳನ್ನು ಹತ್ಯೆಗೈಯಲು ಯತ್ನಿಸಿದವನ ಮನಸ್ಥಿತಿ ಅಂದಿನ ಹಿಂದೂತ್ವವಾದಿಗಳಲ್ಲೂ ಇತ್ತೆಂದರ್ಥವಲ್ಲವೆ?

ಮನುಧರ್ಮ ಶಾಸ್ತ್ರದ ಪ್ರಕಾರ ಬ್ರಾಹ್ಮಣರ ಹೆಣ್ಣು ಮಕ್ಕಳನ್ನೂ ಒಳಗೊಂಡಂತೆ ಇಡೀ ಮಹಿಳಾ ಸಮುದಾಯಕ್ಕೆ ಆ ಕಾಲದಲ್ಲಿ ಶಿಕ್ಷಣ ನಿಷೇಧಿಸಲ್ಪಟ್ಟಿತ್ತು. ಇನ್ನು ಶೂದ್ರ ಮತ್ತು ಅತಿ ಶೂದ್ರರಿಗೆ ಶಿಕ್ಷಣ ನಿಷೇಧಿಸಿದ್ದು ಎಲ್ಲರಿಗೂ ತಿಳಿದದ್ದೆ.




ಸಾವಿತ್ರಿಬಾ ಫುಲೆ ಮತ್ತು ಜ್ಯೋತಿಬಾ ಫುಲೆ ಮಾಡಿದ್ದಿಷ್ಟೆ: ಅಂದಿನ ಮನುಧರ್ಮಶಾಸ್ತ್ರದ ವಿಧಿಗಳನ್ನು ಧಿಕ್ಕರಿಸಿ ಹೆಣುಮಕ್ಕಳಿಗೆ ಶಾಲೆ ತೆರೆದದ್ದು; ಶೂದ್ರ ಅತಿಶೂದ್ರರಿಗೆ ಶಿಕ್ಷಣದ ಕದ ತೆರೆದದ್ದು. ಅಂದಹಾಗೆ ತಮ್ಮ ಈ ಪವಿತ್ರ ಕಾರ್ಯದ ಕಾರಣಕ್ಕೆ ಮಾತೆ ಸಾವಿತ್ರಿಬಾ ಫುಲೆಯವರು "ಭಾರತದ ಪ್ರಪ್ರಥಮ ಮಹಿಳಾ ಶಿಕ್ಷಕಿ" ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. "ಸತ್ಯ ಶೋಧಕ ಸಮಾಜ"ದ ಮೂಲಕ ಹಿಂದೂತ್ವದ ಮೌಢ್ಯಗಳ ವಿರುದ್ಧ ದನಿ ಎತ್ತಿ ಸಾಮಾಜಿಕ ಪರಿವರ್ತನಾ ಚಳವಳಿಗೆ ಚಾಲನೆ ನೀಡಿದ್ದ ಅವರ ಪತಿ ಜ್ಯೋತಿಬಾ ಫುಲೆಯವರು ಈ ದೇಶದ "ಪ್ರಥಮ ಮಹಾತ್ಮ" ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಮತ್ತೆ ಮತ್ತೆ ಕೇಳುವುದೇನೆಂದರೆ ಫುಲೆ ದಂಪತಿಗಳ ಇಂತಹ ಶ್ರೇಷ್ಠ ಕಾರ್ಯದ ಪರ ಈ ದೇಶದ ಸದ್ಯದ ಹಿಂದೂತ್ವವಾದಿಗಳ ನಿಲುವೇನು? ಯಾಕೆ ಯಾವುದೇ ಹಿಂದೂತ್ವವಾದಿ ಸಂಘಟನೆ ಫುಲೆ ದಂಪತಿಗಳನ್ನು ಗೌರವಿಸುತ್ತಿಲ್ಲ ಅಥವಾ ಅವರ ಸಿದ್ಧಾಂತದ ಪ್ರಚಾರದಲ್ಲಿ ತೊಡಗಿಲ್ಲ?

ಅಂದರೆ 'ನಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದ್ದರೂ ಅದರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ, ಆದರೆ 'ಬೇರೆಯವರ ತಟ್ಟೆಯಲ್ಲಿ ಇರುವೆ ಬಿದ್ದಿದ್ದರೆ ನಾವು ಅದ ಬಗ್ಗೆ ತಲೆಕೆಡಿಸಿಕೊಳ್ಳಬೇಕು! ಇದು ಶುದ ಆತ್ಮವಂಚನೆಯಲ್ಲವೆ? ಸಾವಿತ್ರಿಬಾ ಫುಲೆಯವ ಪರವಿರಲ ಹಿಂದೂ ಧರ್ಮದ ಮಹಿಳೆಯರ ಬಗ್ಗೆ ಕಾಳಜಿ ವ್ಯಕ್ತಪಡಿ ಅವರ ಹಕ್ಕುಗಳ ಪರ "ಹಿಂದೂ ಕೋಡ್ ಬಿಲ್" ಎಂ ಮಸೂದೆ ತಯಾರಿಸಿ ಅದರ ಮಂಜೂರಾತಿಗಾಗಿ ತಮ ಮಂತ್ರಿ ಪದವಿಯನ್ನೇ ಬಲಿಕೊಟ್ಟ ಅಂಬೇಡ್ಕರರ ಪ ಕೂಡ ಹಿಂದೂತ್ವವಾದಿಗಳ ವಹಿಸುವುದಿಲ್ಲ! ಬದಲಿಗೆ ದೂರ ಮಲಾಲಳ ಬಗ್ಗೆ ಇವರಿಗೆ ಇನ್ನಿಲ್ಲ ವ್ಯಾಮೋಹ!!

ಪಾಕಿಸ್ತಾನ ಹೇಗಿದ್ದರೂ ನಮ್ಮ ಶ (?) ರಾಷ್ಟ್ರ ಆದ್ದರಿಂದ ಅದ ಹುಳುಕುಗಳನ್ನು ಎತ್ತಿ ತೋರಿಸೋಣ ನಮ್ಮ ಹುಳುಕುಗಳ ಬಗ ಕಣ್ಣುಮುಚ್ಚಿಕೊಳ್ಳೋಣ ಎಂಬಂತಿದೆ ಹಿಂದೂತ್ವವಾದಿಗ ವರ್ತನೆ. ಬೇಡ, ಇಂತಹ ಶುದ್ಧ ಆತ್ಮವಂಚನೆ ಖಂಡಿತ ಬೇಡ. ಮಲಾಲಳ ಪರ ದನಿ ಎತ್ತಬೇಕೆಂದರೆ ಹೆ ಮಕ್ಕಳಿಗೆ ಮತ್ತು ಶೂದ್ರರಿಗೆ ಶಿಕ್ಷಣ ನಿಷೇಧಿಸಿ ಮನುಸ್ಮೃತಿಯ ವಿರುದ್ಧವೂ ಹಿಂದೂತ್ವವಾದಿಗಳು ದ ಎತ್ತಬೇಕು. ಹಾಗೆಯೇ ಅಂಬೇಡ್ಕರರನ್ನು ಗೌರವಿಸದಿದ್ದರ ಪರವಾಗಿಲ್ಲ ಅವರನ್ನು ಆಗಾಗ ಅವಹೇಳನ ಮಾಡು ಕ್ಷುಲ್ಲಕ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು. ಆಗ ಮಾ ಹಿಂದೂತ್ವವಾದಿಗಳಿಗೆ ಮಲಾಲಳ ಪರ ಮಾತನಾಡು ನೈತಿಕತೆ ಒದಗಿಬರುತ್ತದೆ. ಇಲ್ಲದಿದ್ದರೆ ಮಲಾ ಯೂಸುಫ್‌ಜಾಯಿ ಪರ ಹಿಂದೂತ್ವವಾದಿಗಳು ಅದೆಷ್ಟೆ ದನಿ ಎತ್ತಲಿ, ಅದು ಶುದ್ಧ ಬೂಟಾಟಿಕೆ ಆಗುತ್ತದಷ್ಟೆ.

● ರಘೋತ್ತಮ ಹೊ.ಬ, ಚಾಮರಾಜನ




ದೆಹಲಿ ನಾಯಕರ 'ಧ್ವನಿ'ಯಾಗಲು ಶೆಟ್ಟರ್ ಹಿಂಜರಿಯುತ್ತಿರು ವುದರಿಂದ ದೆಹಲಿ ನಾಯಕರ ಮತ್ತು ಯಡಿಯೂರಪ್ಪ ನಡುವಿನ ಕದನ ಮುಂದೆ ಹೋಗುತ್ತಿಲ್ಲ. ಬಿಜೆಪಿ ವಿರುದ್ಧ ಯಡ್ಡಿ ಪ್ರತಿ ದಿನ ಕೆಂಡಕಾರುತ್ತಿದ್ದರೂ ಯಾರೂ ಆತನ ವಿರುದ್ಧ ಕ್ರಮ ಕೈಗೊಳ್ಳುವ ಧೈರ್ಯ ತೋರಿಸುತ್ತಿಲ್ಲ. ಅಷ್ಟೇ ಅಲ್ಲ, ಅವರ ಹೇಳಿಕೆಗಳಿಗೆ ಪ್ರತ್ಯುತ್ತರ ನೀಡುವ ದುಸ್ಸಾಹಸಕ್ಕೂ ಯಾರೂ ಮುಂದೆ ಬರುತ್ತಿಲ್ಲ. ಇದನ್ನು 'ಒನ್ ವೇ ಟ್ರಾಫಿಕ್' ಎಂದು ಕರೆದರೆ ತಪ್ಪಾಗಲಾರದು. ಆದರೆ ಬಿಜೆಪಿಯ ದೆಹಲಿ ನಾಯಕರ ಶಿಷ್ಯಂದಿರು ಹೇಳುವ ಪ್ರಕಾರ "ದೀಪಾವಳಿ ತನಕ ಯಡ್ಡಿಗೆ ಈ 'ಒನ್ ವೇ ಟ್ರಾಫಿಕ್'ನಲ್ಲಿ ಹೋಗಲು ಅವಕಾಶ ಮಾಡಿಕೊಡುತ್ತಾರೆ.

ಯಡ್ಡಿ ಅಫೆನ್ಸ್ ಶೆಟ್ಟರ್ ಡಿಫೆನ್ಸ್

ಯಡಿಯೂರಪ್ಪ ಮತ್ತು ಬಿಜೆಪಿ ಹೈಕಮಾಂಡ್ ...ವಿನ ರಾಜಕೀಯ ಹಗ್ಗಜಗ್ಗಾಟ ದಿನದಿಂದ ದಿನಕ್ಕೆ ...ಸ್ಪದವಾಗುತ್ತಿದೆ. ಇತ್ತ ಮಾಜಿ ಮುಖ್ಯಮಂತ್ರಿ ...ಯೂರಪ್ಪ ಬಿಜೆಪಿ ವಿರುದ್ಧ ದಿನಕ್ಕೊಂದು ಹೇಳಿಕೆ "ನಿಮಗೆ ತಾಕತ್ತಿದ್ದರೆ ನನ್ನನ್ನು ಪಕ್ಷದಿಂದ ಓಡಿಸಿ ...ಡೋಣ" ಎಂಬಂತೆ ಸವಾಲು ಹಾಕುತ್ತಿದ್ದರೆ, ಅತ್ತ ...ಯ ದೆಹಲಿ ನಾಯಕರು "ಇವನನ್ನು ಇಟ್ಟುಕೊಳ್ಳಲೂ ...ತ್ತಿಲ್ಲ, ಇವನ ಕಾಟವನ್ನು ಸಹಿಸಲೂ ಆಗುತ್ತಿಲ್ಲ" ...ಬಂತೆ ಒಂದೇ ಕಣ್ಣಿನಲ್ಲಿ ಕಣ್ಣೀರಿಡುತ್ತಿದ್ದಾರೆ.

ಯಡ್ಡಿಯನ್ನು ಪಕ್ಷದಿಂದ ಉಚ್ಚಾಟಿಸಿದರೆ ಆತ "ನಾನು ...ತ್ತು ವರ್ಷಗಳ ಕಾಲ ಬೆವರು ...ಿ ಕಟ್ಟಿದ ಪಕ್ಷ ನನಗೆ ದ್ರೋಹ ...ದೆ" ಎಂದು ಬರುವ ಚುನಾವಣೆ ...ಲ್ಲಿ ಜನರ ಸಿಂಪಥಿ ಗಳಿಸಲು ...ತ್ನಿಸುತ್ತಾರೆ ಎಂಬುದರ ಬಗ್ಗೆ ...ರಿಗೂ ಅನುಮಾನವಿಲ್ಲ. ...ದಲೇ ಆತನಿಗೆ ಆ ಅಡ್ವಾಂಟೇಜ್ ...ಲು ಚಿಡ್ಡಿ ನಾಯಕರು ಸಿದ್ಧರಿಲ್ಲ. ...ಅದೇ ಹೊತ್ತಿಗೆ ತಾನೇ ಬಿಜೆಪಿ ...ಮ ಹೊರಬಂದರೆ ರಾಜಕೀಯ ... ತನಗೆ ಏನೂ ಗಿಟ್ಟುವುದಿಲ್ಲ ...ದು ಯಡ್ಡಿಗೂ ಗೊತ್ತಿದೆ. ಪಕ್ಷವೇ ...ನ್ನು ಹೊರ ಹಾಕಿದರೆ, ಅದು ...ಾಯತರಿಗೆ ಮಾಡಿದ ಅವಮಾನ ಎಂದು ...ಟಿಸುತ್ತಾ ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ... ಮಾಡುತ್ತಾ ಲಿಂಗಾಯತರ ಬೆಂಬಲ ದೊಂದಿಗೆ ... ಹೊಸ ಪಕ್ಷದ ಹೆಚ್ಚಿನ ಸದಸ್ಯರನ್ನು ಗೆಲ್ಲಿಸಬಹುದು ... ಲೆಕ್ಕಾಚಾರ ಯಡ್ಡಿಯದ್ದು.

...ಈಗ ಸ್ಪಷ್ಟವಾಗಿ ಯಡ್ಡಿ ವರ್ಸಸ್ ಬಿಜೆಪಿ ಯುದ್ಧ ...ಷಿಸಲ್ಪಟ್ಟಿದೆ. ಆದರೆ ಎರಡೂ ಕಡೆ ಆಯುಧಗಳು ... ಆಗಿಲ್ಲವಾದ್ದರಿಂದ ಯುದ್ಧ ಇನ್ನೂ ಪ್ರಾರಂಭ ...ಲ್ಲವಷ್ಟೇ.



ಶೆಟ್ಟರ್ ಸೇಫ್

...ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ... ಮಾತು ನಮ್ಮಲ್ಲಿದೆ. ಆದರೆ ಯಡ್ಡಿ ಮತ್ತು ಬಿಜೆಪಿ ...ಕಮಾಂಡ್ ನಡುವಿನ ಜಗಳದಲ್ಲಿ 'ಕೂಸು' ಜಗದೀಶ್ ...ರ್ ಮಾತ್ರ ಬಡವಾಗದೆ ಸುರಕ್ಷಿತವಾಗಿದ್ದಾರೆ!


...ಸದಾನಂದ ಗೌಡರನ್ನು ಪದಚ್ಯುತಿ ಮಾಡಿಸಿದ ...ಯಲ್ಲೇ ಜಗದೀಶ್ ಶೆಟ್ಟರ್‌ರನ್ನು ಮುಖ್ಯಮಂತ್ರಿ ...ಯಿಂದ ಇಳಿಸಿ ಬಿಜೆಪಿ ಹೈಕಮಾಂಡ್‌ಗೆ ಮುಖಭಂಗ ...ಡಬೇಕೆನ್ನುವ ಯಡ್ಡಿಯ ತಂತ್ರ ಈಗ ಕೈಕೊಟ್ಟಿದೆ. ...ದರೆ ಯಡ್ಡಿ ವಿರುದ್ಧ ಶೆಟ್ಟರ್ ಯಾವ ಮಾತನ್ನೂ ...ದೆ ಮೌನವಾಗಿರುತ್ತಾರೆ! ಯಡ್ಡಿಯ ಟೀಕಾಪ್ರಹಾರಗಳಿಗೆ ...ತ್ತರ ನೀಡಿದರೆ ಸದಾನಂದ ಗೌಡರ ತರಹ ತಾನೂ ...ಖ್ಯಮಂತ್ರಿ ಗಾದಿಯಿಂದ ಕೆಳಗಿಳಿಯುವ ಪರಿಸ್ಥಿತಿ ಒದಗಿ ...ತ್ತದೆ ಎಂಬ ಸತ್ಯ ಶೆಟ್ಟರ್‌ಗೆ ಚೆನ್ನಾಗಿ ಗೊತ್ತು. ಅದಕ್ಕೆ ...ಖ್ಯಮಂತ್ರಿಯಾಗಿ ಇದ್ದಷ್ಟು ದಿನ 'ವೆಯ್ಟ್ ಅಂಡ್ ...ಚ್' ಥಿಯರಿಗೆ ಶೆಟ್ಟರ್ ಶರಣಾಗಿದ್ದಾರೆ.

...ಶೆಟ್ಟರ್ ಅವರನ್ನು ಚಿಡ್ಡಿಗಳು 'ಪುಣ್ಯಕೋಟಿ'ಗೆ ...ಲಿಸುತ್ತಾರೆ. ಮುಂದೆ ಬಂದರೆ ಹಾಯದ, ಹಿಂದೆ ...ದರೆ ಒದೆಯದ 'ಪುಣ್ಯಕೋಟಿ'ಯಂತೆ ಜಗದೀಶ್ ...ರ್ ಯಡ್ಡಿಯ ಟೀಕೆಗಳಿಗೆ ಮಾತ್ರವಲ್ಲ, ಯಾರ ಮಾತಿಗೂ ...ತ್ತರ ನೀಡುವುದಿಲ್ಲ. ಇದನ್ನು ಕ್ರಿಕೆಟ್ ಭಾಷೆಯಲ್ಲಿ ...ವುದಾದರೆ 'ಗುಡ್ ಡಿಫೆನ್ಸ್ ಬ್ಯಾಟಿಂಗ್' ಎನ್ನಬಹುದು. ... ಸಾಧಾರಣವಾಗಿ ಒಬ್ಬ ಬ್ಯಾಟ್ಸ್‌ಮ್ಯಾನ್ ಆಡುತ್ತಿರುವಾಗ ...ದ ಬೌಲರ್ ಬೌನ್ಸರ್‌ಗಳನ್ನು ಎಸೆಯುತ್ತ ಆತನನ್ನು ...ಸಲು ಪ್ರಯತ್ನಿಸುತ್ತಾನೆ. ಬ್ಯಾಟ್ಸ್‌ಮ್ಯಾನ್ ತನ್ನ ...ಚಿತ್ತವನ್ನು ಕಳೆದುಕೊಂಡು ಯದ್ವಾತದ್ವಾ ಹೊಡೆಯಲು ...ದರೆ ಕ್ಲೀನ್‌ಬೋಲ್ಡ್ ಆಗಿ ತನ್ನ ವಿಕೆಟ್‌ಅನ್ನು ಒಪ್ಪಿಸಿ ...ಲಿಯನ್‌ಗೆ ಮರಳುತ್ತಾನೆ. ಇದೇ ತಂತ್ರಗಾರಿಕೆಯನ್ನು ...ಡಿಯೂರಪ್ಪ ಸದಾನಂದ ಗೌಡರ ವಿರುದ್ಧ ಪ್ರಯೋಗಿಸಿ ...ಶಸ್ವಿಯಾದರು. ಆದರೆ, ಶೆಟ್ಟರ್ ಮಾತ್ರ ಯಡ್ಡಿ ಎಸೆಯುತ್ತಿರುವ ಬೌನ್ಸರ್‌ಗಳಿಂದ ತನಗೇನೂ ಆಗಿಲ್ಲವೆಂಬಂತೆ ಮೌನವಾಗಿದ್ದಾರೆ. ತಾವು ಮಾಡಬೇಕಾದ್ದನ್ನು ಮಾಡಿಕೊಂಡು ಮುಂದೆ ಹೋಗುತ್ತಿದ್ದಾರೆ.

ಶೆಟ್ಟರ್ ಅವರನ್ನು ದಬಾಯಿಸಿ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಬಹುದು ಎಂಬುದು ಯಡ್ಡಿಯ ಲೆಕ್ಕಾಚಾರ ವಾಗಿತ್ತು. ಆ ಕಾರಣದಿಂದಲೇ ಶೆಟ್ಟರ್ ಮುಖ್ಯಮಂತ್ರಿಯಾದ ಕೂಡಲೇ ನಡೆದ ವಿಧಾನಸಭಾ ಅಧಿವೇಶನದಲ್ಲಿ "ಈ ಸರ್ಕಾರ ರೈತರಿಗೆ ಏನೂ ಮಾಡಿಲ್ಲ. ಕೂಡಲೇ ೨,೫೦೦ ಕೋಟಿ ರೂಪಾಯಿ ಗಳ ಸಾಲ ಮನ್ನಾ ಮಾಡಿ" ಎಂದು ಪ್ರತಿಪಕ್ಷದ ನಾಯಕನ ತರಹ ಯಡ್ಡಿ ಹೌಹಾರಿದ್ದರು. ಇದನ್ನು ನೋಡಿದ ಪಕ್ಷದವರು ಯಡ್ಡಿ ಮತ್ತು ಶೆಟ್ಟರ್ ನಡುವೆ ವೈಮನಸ್ಸು ಆರಂಭವಾಯಿತು ಎಂದೇ ಲೆಕ್ಕಹಾಕಿದ್ದರು.


ಆದರೆ ನಡೆದದ್ದೇ ಬೇರೆ. ಶೆಟ್ಟರ್ ಕೂಡಲೇ ರೈತರ ಸಾಲವನ್ನು ಮನ್ನಾ ಮಾಡಿದರು. ಅದಕ್ಕೆ ಕಾರಣ: ಅದರ ಸಂಪೂರ್ಣ ಕ್ರೆಡಿಟ್ ತನಗೆ ಬರುತ್ತದೆಯೇ ಹೊರತು ಯಡ್ಡಿಗಲ್ಲ ಎಂಬುದು ಶೆಟ್ಟರ್‌ಗೆ ಚೆನ್ನಾಗಿ ಗೊತ್ತಿದ್ದದ್ದು! ಭಂಡ ಭೂಪ ಯಡ್ಡಿ ಮಾತ್ರ ಶೆಟ್ಟರ್ ತಾನು ಹೇಳಿದ ಹಾಗೆ ನಡೆಯುತ್ತಾನೆ ಎಂದು ನಂಬಿದ.

ಇತ್ತೀಚೆಗೆ ಯಡ್ಡಿಯ ಎಡಗೈ ಮತ್ತು ಬಲಗೈಗಳಂತಿರುವ ಧನಂಜಯ್‌ಕುಮಾರ್ ಮತ್ತು ಆಯನೂರ್ ಮಂಜುನಾಥ್‌ರನ್ನು ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ ಬಿಜೆಪಿಯಿಂದ ಉಚ್ಚಾಟಿಸಿದರು. ಆಗ ಯಡ್ಡಿ "ಮಂತ್ರಿಮಂಡಲದಲ್ಲಿರುವ ನನ್ನ ಹಿಂಬಾಲಕರನ್ನು ಮುಟ್ಟಿದರೆ ಜೋಕೆ, ಈ ಸರ್ಕಾರವೇ ಪತನವಾದೀತು ಹುಷಾರ್!" ಎಂದು ಶೆಟ್ಟರ್ ವಿರುದ್ಧ ಗುಡುಗಿದರು. ಆದರೆ ಇದಕ್ಕೂ ಯಾವ ರೀತಿಯ ಪ್ರತಿಕ್ರಿಯೆ ನೀಡದ ಶೆಟ್ಟರ್ ಯಡ್ಡಿಯ ವಿರೋಧಿ ಬಣದ ಪ್ರಮುಖ ಸಚಿವ ಬಾಲಚಂದ್ರ ಜಾರಕಿಹೊಳಿಗೆ ಹೆಚ್ಚುವರಿ ಖಾತೆಯನ್ನು ನೀಡಿದರು. ಇದನ್ನು ಕಂಡು ಕೆಂಗಣ್ಣಾದ ಯಡ್ಡಿ "ನಾನೇ ಮುಖ್ಯಮಂತ್ರಿ ಮಾಡಿದ ಜಗದೀಶ್ ಶೆಟ್ಟರ್ ಇಷ್ಟು ಬೇಗ ಸದಾನಂದ ಗೌಡರ ಹಾದಿಯನ್ನೇ ತುಳಿಯುತ್ತಾರೆ ಎಂದು ಭಾವಿಸಿರಲಿಲ್ಲ" ಎಂದು ಹತಾಶರಾಗಿ ನುಡಿದರೇ ಹೊರತು ಅವರಿಗೆ ಬೇರೆ ಏನನ್ನೂ ಮಾಡಲಾಗಲಿಲ್ಲ.



ವಾಸ್ತವವಾಗಿ ಬಾಲಚಂದ್ರ ಜಾರಕೀಹೊಳಿಗೆ ಹೆಚ್ಚುವರಿ ಖಾತೆಯನ್ನು ನೀಡುವ ಮೂಲಕ ಯಡ್ಡಿಗೆ ಟಾಂಗ್ ನೀಡಿದ್ದು ಬಿಜೆಪಿ ಹೈಕಮಾಂಡ್‌ನ ಒಂದು ತಂತ್ರವಾಗಿತ್ತು. ಯಡ್ಡಿ ಇನ್ನೂ ಬಿಜೆಪಿಯಲ್ಲೇ ಇದ್ದು ಪ್ರತಿ ದಿನ ಹೊಸ ಪಕ್ಷವನ್ನು ಹುಟ್ಟುಹಾಕುವ ಹೇಳಿಕೆಯನ್ನು ನೀಡುತ್ತಿದ್ದರೂ ಆತ ಯಾವ ಕಾರಣಕ್ಕೂ ಪಕ್ಷಕ್ಕೆ ಮುಖ್ಯವಲ್ಲ ಎಂಬಂತೆ ಬಿಜೆಪಿ ಹೈಕಮಾಂಡ್ ವರ್ತಿಸುತ್ತಿದೆ. ಇದೇ ಹೊತ್ತಿಗೆ ರಾಜ್ಯದ ಚಿಡ್ಡಿ ನಾಯಕರಾದ ಶೆಟ್ಟರ್, ಈಶ್ವರಪ್ಪ, ಸದಾನಂದ ಗೌಡ ಮೊದಲಾದವರು ಯಡ್ಡಿ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸದೆ ಸುಮ್ಮನಿದ್ದಾರೆ. ಇದು ಒಂದು ರೀತಿಯಲ್ಲಿ ಯಡ್ಡಿಯ ತಾಳ್ಮೆಯನ್ನು ಪರೀಕ್ಷಿಸುವ ತಂತ್ರ.

ಇದೆಲ್ಲದರ ಮಧ್ಯೆಯೇ ಆರೆಸ್ಸೆಸ್ಸಿನ ಸಂಘಟನಾ ಕಾರ್ಯದರ್ಶಿ ಸಂತೋಷ್, ಸದಾನಂದ ಗೌಡ, ಜಗದೀಶ್ ಶೆಟ್ಟರ್, ಈಶ್ವರಪ್ಪ ಮತ್ತು ಆಶೋಕ್ ಸೋಮವಾರ ಸಭೆ ನಡೆಸಿದರು. ಯಡಿಯೂರಪ್ಪನವರನ್ನು ಹೊರತುಪಡಿಸಿ ಇತರೆ ನಾಯಕರು ಹೀಗೆ ಸಭೆ ಸೇರಿದ್ದು ಇತ್ತೀಚೆಗೆ ಇದೇ ಮೊದಲು. ಯಡಿಯೂರಪ್ಪ ನೀಡುತ್ತಿರುವ ಹೇಳಿಕೆಗಳಿಂದ ಪಕ್ಷಕ್ಕೆ ಆಗುತ್ತಿರುವ ಅನಾಹುತ ಮತ್ತು ನಾಯಕರಿಗಾಗುತ್ತಿರುವ ಅವಮಾನದ ಬಗ್ಗೆ ಈ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಕೊನೆಗೆ ಅವರೆಲ್ಲರೂ "ಯಡಿಯೂರಪ್ಪನವರಿಗೆ ಪಕ್ಷದಲ್ಲಿ ಏನಾದರೊಂದು ಹುದ್ದೆ ಕೊಟ್ಟು ಅವರನ್ನು ಸುಮ್ಮನಾಗಿಸಿ, ಇಲ್ಲವಾದರೆ ಅವರನ್ನು ಆದಷ್ಟು ಬೇಗ ಪಕ್ಷದಿಂದ ಉಚ್ಚಾಟಿಸಿ" ಎಂಬ ಮನವಿಯನ್ನು ಹೈಕಮಾಂಡ್‌ಗೆ ನೀಡಲು ನಿರ್ಧರಿಸಿದರು ಎಂಬ ಮಾತು ಕೇಳಿಬರುತ್ತಿದೆ.



ಒಂದೆಡೆ ಯಡಿಯೂರಪ್ಪನವರೇ ಪಕ್ಷ ಬಿಡಲಿ ಎಂದು ಹೈಕಮಾಂಡ್ ಕಾದು ಕುಳಿತಿದೆ; ಇನ್ನೊಂದೆಡೆ ಹೈಕಮಾಂಡೇ ತನ್ನನ್ನು ಪಕ್ಷದಿಂದ ಉಚ್ಚಾಟಿಸಲಿ ಎಂದು ಯಡ್ಡಿ ನಿತ್ಯವೂ ಪ್ರಚೋದನಕಾರಿ ಹೇಳಿಕೆಯನ್ನು ನೀಡುತ್ತಿದ್ದಾರೆ. ಪಕ್ಷದಿಂದ ಉಚ್ಚಾಟಿಸಿದಲ್ಲಿ ಯಡ್ಡಿಗೆ ಲಾಭ, ನಮಗೆ ನಷ್ಟ, ಎಂಬ ಹೈಕಮಾಂಡ್‌ನ ಲೆಕ್ಕಾಚಾರದಿಂದಾಗಿಯೇ ಕರ್ನಾಟಕದ ಬಿಜೆಪಿಯ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ.

ಕೆಲ ತಿಂಗಳ ಹಿಂದೆ ಕನಿಷ್ಠ ಸದಾನಂದ ಗೌಡರು ಬಿಜೆಪಿ ಹೈಕಮಾಂಡ್‌ನ 'ಧ್ವನಿ'ಯಾಗಿ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಹೀಗಾಗಿ ಆಗಾಗ ಯಡಿಯೂರಪ್ಪನವರನ್ನು ಹಿಯಾಳಿಸುವ, ತಮಾಷೆ ಮಾಡುವ, ಪ್ರಚೋದಿಸುವ ಹೇಳಿಕೆಗಳನ್ನು ಗೌಡರ ಮುಖಾಂತರ ದೆಹಲಿ ನಾಯಕರು ಬಿತ್ತರಿಸುತ್ತಿದ್ದರು. ಆದರೆ ದೆಹಲಿ ನಾಯಕರ 'ಧ್ವನಿ'ಯಾಗಲು ಶೆಟ್ಟರ್ ಹಿಂಜರಿಯುತ್ತಿರು ವುದರಿಂದ ದೆಹಲಿ ನಾಯಕರ ಮತ್ತು ಯಡಿಯೂರಪ್ಪ ನಡುವಿನ ಕದನ ಮುಂದೆ ಹೋಗುತ್ತಿಲ್ಲ.

ಬಿಜೆಪಿ ವಿರುದ್ಧ ಯಡ್ಡಿ ಪ್ರತಿ ದಿನ ಕೆಂಡಕಾರುತ್ತಿದ್ದರೂ ಯಾರೂ ಆತನ ವಿರುದ್ಧ ಕ್ರಮ ಕೈಗೊಳ್ಳುವ ಧೈರ್ಯ ತೋರಿಸುತ್ತಿಲ್ಲ. ಅಷ್ಟೇ ಅಲ್ಲ, ಅವರ ಹೇಳಿಕೆಗಳಿಗೆ ಪ್ರತ್ಯುತ್ತರ ನೀಡುವ ದುಸ್ಸಾಹಸಕ್ಕೂ ಯಾರೂ ಮುಂದೆ ಬರುತ್ತಿಲ್ಲ. ಇದನ್ನು 'ಒನ್ ವೇ ಟ್ರಾಫಿಕ್' ಎಂದು ಕರೆದರೆ ತಪ್ಪಾಗಲಾರದು. ಆದರೆ ಬಿಜೆಪಿಯ ದೆಹಲಿ ನಾಯಕರ ಶಿಷ್ಯಂದಿರು ಹೇಳುವ ಪ್ರಕಾರ "ದೀಪಾವಳಿ ತನಕ ಯಡ್ಡಿಗೆ ಈ 'ಒನ್ ವೇ ಟ್ರಾಫಿಕ್' ನಲ್ಲಿ ಹೋಗಲು ಅವಕಾಶ ಮಾಡಿಕೊಡುತ್ತಾರೆ. ದೀಪಾವಳಿ ಹೊತ್ತಿಗೆ ಬಿಜೆಪಿಯಲ್ಲಿ ಅನೇಕ ಹೊಸ ಬೆಳವಣಿಗೆಗಳು ನಡೆಯುವ ಸಾಧ್ಯತೆ ಯಿದೆ."


ಯಡಿಯೂರಪ್ಪ ಬಿಜೆಪಿಯನ್ನು ತೊರೆದರೆ ತಾವು ಮತ್ತೆ ಅಧಿಕಾರಕ್ಕೆ ಬರುವುದು ಕಷ್ಟ ಎಂದು ಕೆಲವು ರಾಜ್ಯ ನಾಯಕರು ಹೈಕಮಾಂಡಿಗೆ ಹೇಳಿದ್ದಾರಂತೆ. ಆದರೆ ಹೈಕಮಾಂಡ್ "ಪಕ್ಷ ಮುಖ್ಯವೇ ಹೊರತು ಯಾವುದೇ ವ್ಯಕ್ತಿ ಅಲ್ಲ" ಎಂಬ ಹಳಸಲು ವಾದವನ್ನು ಮುಂದೆ ಮಾಡುತ್ತಿದೆ. ಉತ್ತರ ಭಾರತದಲ್ಲಿ ಕಲ್ಯಾಣ್ ಸಿಂಗ್, ಉಮಾ ಭಾರತಿ, ಕೇಶುಭಾಯಿ ಪಟೇಲ್ ಮೊದಲಾದ ಪ್ರಭಾವಿ ನಾಯಕರನ್ನೇ ಬಲಿಕೊಟ್ಟ ಉದಾಹರಣೆಗಳನ್ನು ಹೈಕಮಾಂಡ್ ನೀಡುತ್ತಿದೆ. ಆದರೆ ಅವರಿಗೇ ಅದರ ಬಗ್ಗೆ ನಂಬಿಕೆ ಇಲ್ಲದಂತಾಗಿದೆ ಎನ್ನುವವರೂ ಬಿಜೆಪಿ ಯಲ್ಲಿದ್ದಾರೆ.

ಯಡಿಯೂರಪ್ಪನವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಅವರನ್ನು ಉಚ್ಚಾಟಿಸುವ ಧೈರ್ಯವೂ ಹೈಕಮಾಂಡಿಗಿಲ್ಲ. ಯಡ್ಡಿಯನ್ನು ಪ್ರಚೋದಿಸಲು ಸದಾನಂದ ಗೌಡರು ಮತ್ತು ಅನಂತ್‌ಕುಮಾರ್‌ರವರ ಹಿಂಬಾಲಕರಿಗೆ ಒಳ್ಳೊಳ್ಳೆಯ ಹುದ್ದೆಗಳನ್ನು ಕೊಡುವ ಶಕ್ತಿಯನ್ನೂ ಹೈಕಮಾಂಡ್ ಪ್ರದರ್ಶಿಸುತ್ತಿಲ್ಲ. ಅಷ್ಟೇ ಯಾಕೆ? ಯಡ್ಡಿಯನ್ನು ಪ್ರಚೋದಿಸಬಾರದೆಂಬ ಏಕೈಕ ಕಾರಣದಿಂದ ಹೊಸ ರಾಜ್ಯಾಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನೇ ಹೈಕಮಾಂಡ್ ಕೈಬಿಟ್ಟಿದೆ. ಹಾಗೆ ಮಾಡುವ ಮೂಲಕ ಇದೇ ಮೊದಲ ಬಾರಿಗೆ 'ಒಬ್ಬ ವ್ಯಕ್ತಿಗೆ ಎರಡು ಹುದ್ದೆ ಇಲ್ಲ' ಎಂಬ ಪಕ್ಷದ ನೀತಿಯನ್ನೇ ಬಲಿಕೊಟ್ಟಿದೆ.


ಹೀಗೆ ಒಮ್ಮೆ ಯಡ್ಡಿಗೆ ಬಿಜೆಪಿಯ ಹೈಕಮಾಂಡ್ ಹೆದರುತ್ತಿದ್ದರೆ ಇನ್ನೊಮ್ಮೆ ಆತನನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿದೆ. ಇದು ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ತೋರುತ್ತಿರುವ ಎಡವಟ್ಟುತನವೂ ಹೌದು, ಅದರ ದಿವಾಳಿಕೋರ ನೀತಿಯೂ ಹೌದು. ಆ ಪಕ್ಷದ ಒಳಗೆ ಇಂತಹ ಅರಾಜಕತೆ ಇರುವಾಗ ಬಿಜೆಪಿಯಾಗಲಿ, ಅದು ಆಳುತ್ತಿರುವ ಕರ್ನಾಟಕ ರಾಜ್ಯವಾಗಲಿ ಉದ್ಧಾರವಾಗುವುದಾದರೂ ಯಾವಾಗ?

● ಶೆಣೈ

ತಮಾಷೆ ಫೋಟೋ




ನಕಲಿ ಸಿಕ್ಸ್ ಪ್ಯಾಕ್



ಅಸಲಿ ಸಿಕ್ಸ್ ಪ್ಯಾಕ್



ಜೈಲು ಹಾದಿಯಲ್ಲಿ... ಜಿ.ಟಿ.ದೇವೇಗೌಡ



ಕರ್ನಾಟಕದಲ್ಲಿ ಮತ್ತೊಮ್ಮೆ ಸಿಬಿಐ ದಾಳಿಗಳಾಗುವ ಸಂಭವವಿದೆ. ಆದರೆ ಈ ಸಂಭವನೀಯ ದಾಳಿಯ ಗುರಿ ಯಡ್ಡಿಯೂ ಅಲ್ಲ, ರೆಡ್ಡಿಯೂ ಅಲ್ಲ, ಬದಲಾಗಿ ಗೃಹ ಮಂಡಳಿಯ ಚೇರ್ಮನ್ ಜಿ.ಟಿ.ದೇವೇಗೌಡ.


ನಡೆದಿರುವುದು ಇಷ್ಟೆ. ಆಪರೇಷನ್ ಕ-ಮಲ ಮೂಲಕ ಬಿಜೆಪಿಗೆ ಜಿಗಿದಿದ್ದ ಜಿ.ಟಿ.ದೇವೇಗೌಡನಿಗೆ ರಾಜ್ಯ ಸರ್ಕಾರ ಕರ್ನಾಟಕ ಹೌಸಿಂಗ್ ಬೋರ್ಡ್ ಎಂಬ ಹುಲ್ಲುಗಾವಲನ್ನು ದಯಪಾಲಿಸಿತು. ಹೀಗೆ 2008ರ ಜುಲೈ ಒಂದನೇ ತಾರೀಕಿನಂದು ಕರ್ನಾಟಕ ಗೃಹ ಮಂಡಳಿಗೆ ಕಾಲಿಟ್ಟಾಗಿನಿಂದ ಈ ಮಹಾನುಭಾವ ಮನಸೋ ಇಚ್ಛೆ ಮೇಯಲು ಶುರುವಿಟ್ಟುಕೊಂಡಿದ್ದಾನೆ. ಈತ ಸದ್ದುಗದ್ದಲವಿಲ್ಲದೆ ಮೇಯುತ್ತಿದ್ದ ಸುಳಿವು ಅರಿತ ಕೆಲವರು ಬೆನ್ನುಹತ್ತಲಾಗಿ ಜೋರು ಹಗರಣವೇ ಹೊರಬಿದ್ದಿದೆ.

ಮೈಸೂರಿನ ಯುವ ವಕೀಲ ಗೋಪಿನಾಥ್ ಎಂಬುವವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿ ಜಿ.ಟಿ.ದೇವೇಗೌಡ ಮತ್ತು ಅವರ ಭ್ರಷ್ಟ ಕೂಟದ ವಿರುದ್ಧ ಸಿಬಿಐ ತನಿಖೆಗೆ ಆದೇಶಿಸುವಂತೆ ಕೋರಿದ್ದಾರೆ. ಹಿರಿಯ ವಕೀಲರು, ಜನಪರ ಚಿಂತಕರೂ ಆಗಿರುವ ಎ.ಕೆ.ಸುಬ್ಬಯ್ಯನವರು ಈ ಮೊಕದ್ದಮೆಯನ್ನು ನಡೆಸುತ್ತಿದ್ದಾರೆ. ಹೈಕೋರ್ಟ್ ನ್ಯಾಯಮೂರ್ತಿ ವಿಕ್ರಮಜಿತ್‌ಸೇನ್ ಅವರು ಅಕ್ಟೋಬರ್ 6ರಂದು, 1) ಸರ್ಕಾರದ ಮುಖ್ಯ ಕಾರ್ಯದರ್ಶಿ 2) ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ 3) ಕರ್ನಾಟಕ ಗೃಹ ಮಂಡಳಿಯ ಚೇರ್ಮನ್ (ಜಿಟಿ ದೇವೇಗೌಡ) 4) ಗೃಹ ಮಂಡಳಿಯ ಕಮಿಷನರ್ 5) ಗೃಹ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿ - ಈ 5 ಮಂದಿಗೆ ನೋಟೀಸ್ ಜಾರಿ ಮಾಡಿದ್ದಾರೆ. ನ್ಯಾಯ ವಿಚಾರಣೆ ಹೀಗೇ ಸರಿ ದಿಕ್ಕಿನಲ್ಲಿ ನಡೆದರೆ ಹೌಸಿಂಗ್ ಬೋರ್ಡ್ ಚೇರ್ಮನ್‌ಗಿರಿ ನಡೆಸುತ್ತಿರುವ ಜಿ.ಟಿ.ದೇವೇಗೌಡ ಮತ್ತಿತರರು ಜೈಲು ಸೇರೋದು ಗ್ಯಾರಂಟಿ.

ಈ ಘನಂದಾರಿ ಮನುಷ್ಯನ ಹಗಲು ದರೋಡೆಯ ವಿವರಗಳನ್ನು ನೋಡಿ.

ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962ರ ಪ್ರಕಾರ ಸದರಿ ಮಂಡಳಿಯನ್ನು ರಚಿಸಲಾಗಿದೆ. ಕಾಯ್ದೆಯ ಪ್ರಕಾರ ಮಂಡಳಿಯ ಮೂಲ ಉದ್ದೇಶ ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ವಾಸದ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡುವುದು. ನಾಡಿನ ವಸತಿ ಸಮಸ್ಯೆಯನ್ನು ಪರಿಹರಿಸುವಲ್ಲಿ ಈ ಮಂಡಳಿ ಒಂದು ಪ್ರಮುಖವಾದ ಸರ್ಕಾರಿ ಏಜೆನ್ಸಿಯಾಗಿದೆ. ಆದರೆ ಜಿ.ಟಿ.ದೇವೇಗೌಡನಂಥವರಿಗೆ ಇದು ದಂಧೆ ನಡೆಸಲು ಒಂದು ಆಶ್ರಯತಾಣವಷ್ಟೆ. ಅದಕ್ಕಾಗಿಯೇ ಈತ "ಬಿಜೆಪಿ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿ" ಕೇಸರಿಕೂಟಕ್ಕೆ ಸೇರ್ಪಡೆಯಾಗಿದ್ದು!

ಗೃಹ ಮಂಡಳಿ 2008ರಲ್ಲಿ ಮೈಸೂರು ತಾಲ್ಲೋಕಿನ ಕಲ್ಲೂರು ನಾಗನಹಳ್ಳಿ ಮತ್ತು ಯಲಚನಹಳ್ಳಿ ಗುಂಗ್ರಾಳ ಛತ್ರಗಳಲ್ಲಿ 250ರಿಂದ 300 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿ, ಭೂಮಿಗೆ ದರ ನಿಗದಿ ಪಡಿಸುವುದು ಮೊದಲಾದ ಪ್ರಕ್ರಿಯೆಗಳನ್ನು ನಡೆಸುವಂತೆ ಅಂದಿನ ಜಿಲ್ಲಾಧಿಕಾರಿಯನ್ನು ಕೋರಿತು. ಅದರಂತೆ ತಾರೀಕು 26.09.2008ರಂದು ಜಿಲ್ಲಾಧಿಕಾರಿಯ ನೇತೃತ್ವದಲ್ಲಿ ಭೂಮಿಯ ದರ ನಿಗದಿ ಮಾಡಲೆಂದು ಜಿಲ್ಲಾ ನೋಂದಣಾಧಿಕಾರಿ ಮತ್ತಿತರ ಅಧಿಕಾರಿಗಳು ಸಭೆ ಸೇರಿದರು. ಆ ಸಭೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರಿ ಮಾರ್ಗದರ್ಶಿ ದರಗಳ ಪ್ರಕಾರ ಆ ಪ್ರದೇಶದಲ್ಲಿ ಒಂದು ಎಕರೆಗೆ ಒಂದು ಲಕ್ಷದಿಂದ ಮೂರು ಲಕ್ಷದವರೆಗೆ ನಿಗದಿ ಮಾಡಬಹುದು ಎಂಬ ಅಂಶ ಚರ್ಚೆಗೆ ಬಂದಿತು. ಆದರೆ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳದೇ ಸಭೆ ಅಂತ್ಯಗೊಂಡಿತು.



ಡಿಸಿ ವಸ್ತ್ರದ್

ಇದಾದ ನಂತರ ಕೆಲ ದಿನಗಳಲ್ಲಿ ಮೈಸೂರು ಡಿಸಿ ನಿಗದಿ ಮಾಡಿದ ಬೆಲೆ ಒಂದು ಎಕರೆಗೆ ಬರೋಬ್ಬರಿ 36.5 ಲಕ್ಷ ರೂಪಾಯಿಗಳು! ರಿಯಲ್ ಎಸ್ಟೇಟ್ ರಾಕೇಟ್‌ನಂತೆ ಏರುತ್ತಿರುವ ಬೆಂಗಳೂರು ಮಹಾನಗರದಲ್ಲಿ ಭೂಸ್ವಾಧೀನ ಪಡಿಸಿಕೊಂಡಿರುವ ಸರ್ಕಾರದ ಯಾವ ಸಂಸ್ಥೆಯೂ ಇಷ್ಟೊಂದು ದರ ಕೊಟ್ಟಿಲ್ಲ. ಹೀಗಿರುವಾಗ ಮಾರ್ಗದರ್ಶಿ ಬೆಲೆಯ ಹತ್ತಾರು ಪಟ್ಟು ಅಧಿಕವಾಗಿ ಬೆಲೆ ನಿಗದಿ ಮಾಡುತ್ತಾರೆಂದರೆ ನಾಗನಹಳ್ಳಿ ರೈತರ ಮೇಲೆ ಜಿ.ಟಿ.ದೇವೇಗೌಡರಿಗೆ ಪ್ರೇಮ ಉಕ್ಕಿ ಹರಿದಿದೆ ಎಂದು ಭಾವಿಸುವಂತಿಲ್ಲ. ಇದರ ಅಸಲಿ ಹಕೀಕತ್ತು ಬೇರೆಯೇ ಇದೆ.

ಜಿ.ಟಿ.ದೇವೇಗೌಡ ರೂಪಿಸಿದ್ದ ಷಡ್ಯಂತ್ರ ಆತ ಎಂಥಾ ಹಗಲುಗಳ್ಳ ಎಂಬುದನ್ನು ಜಗಜ್ಜಾಹೀರು ಮಾಡುತ್ತದೆ. ಒಂದೆಡೆ ಗೃಹ ಮಂಡಳಿಯ ವತಿಯಿಂದ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿದ ಜಿ.ಟಿ ಮತ್ತೊಂದು ಕಡೆಯಿಂದ ತನ್ನ ಚೇಲಾಗಳನ್ನು ಸದರಿ ಗ್ರಾಮಗಳಿಗೆ ಕಳಿಸಿದ್ದ. ಹೀಗೆ ಆತನ ಹಿಂಬಾಲಕರಾಗಿರುವ ಬಿಜೆಪಿ ಕಾರ್ಯಕರ್ತರು ಕಂ ರಿಯಲ್ ಎಸ್ಟೇಟ್ ಏಜೆಂಟ್‌ಗಳು ಭೂಮಿ ಕಳೆದುಕೊಳ್ಳುವ ರೈತರ ಕಡೆಯಿಂದ ಭೂಮಿಯನ್ನು ಖರೀದಿ ಮಾಡಿಕೊಳ್ಳುವ ನೆಪದಲ್ಲಿ ಎಂಟ್ರಿ ಕೊಟ್ಟು, ಅಲ್ಪ ಸ್ವಲ್ಪ ಅಡ್ವಾನ್ಸ್ ಕೊಟ್ಟು ರೈತರಿಂದ ಜಿಪಿಎ ಪತ್ರಗಳನ್ನು ಪಡೆದುಕೊಂಡರು. ಅಂದರೆ ಸದರಿ ರೈತರ ಪರವಾಗಿ ಸರ್ಕಾರದಿಂದ ಪರಿಹಾರ ಪಡೆದುಕೊಳ್ಳಲು ಅರ್ಹ ಪ್ರತಿನಿಧಿಗಳೆಂಬ ಅಧಿಕಾರ ಪತ್ರ. ಈ ಎಲ್ಲಾ ಮಸಲತ್ತಿನ ಯಾವ ಮರ್ಮವನ್ನೂ ಅರಿಯದ ಅಮಾಯಕ ರೈತರು ಈ ಏಜೆಂಟ್‌ಗಳನ್ನು ನಂಬಿ ಸಹಿ ಹಾಕಿಕೊಟ್ಟಿದ್ದರು.

ಇದಾದ ನಂತರವೇ ಮಂಡಳಿಯ ಅಧ್ಯಕ್ಷರ ಚಿತಾವಣೆಯಂತೆ ಮೈಸೂರು ಡಿಸಿ ಎಕರೆಗೆ 36.5 ಲಕ್ಷ ಬೆಲೆ ನಿಗದಿ ಮಾಡಿದ್ದು. ಆ ಪ್ರಕ್ರಿಯೆಯಲ್ಲಿ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ನಡೆದ ರೈತರ ಸಮಾಲೋಚನಾ ಸಭೆಗಳಲ್ಲಿ ಅಸಲಿಗೆ ಭೂಮಿ ಕಳೆದುಕೊಳ್ಳುವ ಯಾವ ರೈತರೂ ಭಾಗವಹಿಸಿರಲಿಲ್ಲ; ಈ ಏಜೆಂಟ್‌ಗಳೇ ರೈತರ ಹೆಸರಿನಲ್ಲಿ ಭಾಗವಹಿಸಿದ್ದರು ಎಂಬ ಸತ್ಯ ಮಾಹಿತಿ ಹಕ್ಕಿನಡಿ ಪಡೆದುಕೊಂಡ ದಾಖಲೆಗಳಿಂದ ಬಹಿರಂಗವಾಗಿದೆ.

ಹೀಗೆ ಸರ್ಕಾರದಿಂದ ರೈತರ ಹೆಸರಿನಲ್ಲಿ ಬಿಡುಗಡೆಯಾದ ಮೊತ್ತದಲ್ಲಿ ಕಾಲು ಭಾಗವೂ ತಮಗೆ ದಕ್ಕಿಲ್ಲ ಎಂಬುದು ಭೂಮಿ ಕಳೆದುಕೊಂಡ ರೈತರ ಅಳಲು. ಆದರೆ ಜಿ.ಟಿ.ದೇವೇಗೌಡನ ಏಜೆಂಟರು ಒಂದು ಎಕರೆಗೆ 20ರಿಂದ 25 ಲಕ್ಷಗಳವರೆಗೂ ಲಪಟಾಯಿಸಿದ್ದಾರೆ. ಇದು ಗೃಹ ಮಂಡಳಿ ಅಧ್ಯಕ್ಷರ ಅಸಲಿ ಮರ್ಮ. ಇದೂ ಅಲ್ಲದೆ ಇದೇ ಕ್ರಿಮಿನಲ್ ಕೂಟ ಸರ್ವೆ ನಂಬರ್ 99/37, 99/33, 51 ಮತ್ತು 54 ಕ್ಕೆ ಸಂಬಂಧಿಸಿದ ಪರಿಹಾರವನ್ನು ಪಾವತಿ ಮಾಡಿರುವುದಾಗಿ ಖೊಟ್ಟಿ ದಾಖಲೆಗಳನ್ನೂ ಸೃಷ್ಟಿ ಮಾಡಿ ಕಾನೂನುಬಾಹಿರವಾಗಿ ಗಂಟು ಹೊಡೆದಿದ್ದಾರೆ. ಆದರೆ ಈ ಯಾವುದೇ ವ್ಯವಹಾರದಲ್ಲಿ ಜಿ.ಟಿ. ನೇರವಾಗಿ ಪಾಲ್ಗೊಳ್ಳದೆ ತನ್ನ ಹಿಂಬಾಲಕರ ಮೂಲಕವೇ ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿ ಮುಗಿಸಿದ್ದಾನೆ.



ಈ ಗಂಟುಕಳ್ಳರ ಕೂಟ ಸರ್ಕಾರಿ ಬೊಕ್ಕಸಕ್ಕೆ ತೂತು ಕೊರೆದಿದ್ದು ಮಾತ್ರವಲ್ಲ ಹೌಸಿಂಗ್ ಬೋರ್ಡ್‌ನಿಂದ ಮನೆ ಬಯಸುವ ನಾಗರಿಕರಿಗೂ ಬರೆ ಎಳೆದಿದೆ. ಹೇಗೆಂದರೆ ಮೈಸೂರು ರೈಲ್ವೆ ನಿಲ್ದಾಣದಿಂದ ಕೇವಲ 9 ಕಿ.ಮೀ ದೂರದಲ್ಲಿ ಅಂದರೆ

ಜೈಲಿಗೆ ಹೋಗಿಬಂದಿರುವ ಕೃಷ್ಣಯ್ಯಶೆಟ್ಟಿ ಕಂಡ ಕಂಡ ದೇವರಿಗೆ ಕೈ ಮುಗಿಯುತ್ತಿದ್ದಾನೆ. ಇದೇ ಸಂದರ್ಭದಲ್ಲಿ ಇಂಥದೇ ಹಗರಣದಲ್ಲಿ ಜಿ.ಟಿ. ದೇವೇಗೌಡ ಸಿಕ್ಕಿ ಬಿದ್ದಿದ್ದಾನೆ. ಲೋಕಾಯುಕ್ತ ಕೇಸನ್ನು ಮುಚ್ಚಿ ಹಾಕಿದಷ್ಟು ಸಲೀಸಾಗಿ ಈಗ ದಾಖಲಾಗಿರುವ ಹೈಕೋರ್ಟ್ ಕೇಸನ್ನು ನಿಭಾಯಿಸುವುದು ಸಾಧ್ಯವಿಲ್ಲ. ಎಲ್ಲವೂ ಸರಿದಾರಿಯಲ್ಲಿ ನಡೆದರೆ ಜಿ.ಟಿ. ದೇವೇಗೌಡ ಕೂಡ ಜೈಲು ಪಟ್ಟಿಗೆ ಸೇರಲಿದ್ದಾರೆ.

ಹೆಗ್ಗಣಗಳೇ ಎಲ್ಲಾ ಕಡೆ!

ಇದು ಮೈಸೂರಿನ ಕತೆ ಮಾತ್ರವಲ್ಲ, ರಾಜ್ಯದ ಇತರೆ ಜಿಲ್ಲೆಗಳಿಂದಲೂ ಇಂಥದೇ ಗಬ್ಬು ವಾಸನೆ ಬರುತ್ತಿದೆ. ಹುಬ್ಬಳ್ಳಿ-ಧಾರವಾಡದಲ್ಲಿ ಹೌಸಿಂಗ್ ಬೋರ್ಡ್‌ನವರು ನಡೆಸಿದ 206 ಎಕರೆ ಭೂಸ್ವಾಧೀನದಲ್ಲೂ ಇಂಥದೇ ಹಗರಣ ನಡೆದಿದೆ. ಇದು ಲೋಕಾಯುಕ್ತ ಹಾಗೂ ಸಿಐಡಿ ತನಿಖೆಗೆ ಒಳಗಾಗಿ ಮಂಡಳಿಯ ಇಂಜಿನಿಯರ್ ವಿಜಯಕುಮಾರ್ ಚಕ್ಕಯ್ಯನ ಕೈವಾಡ ಸಾಬೀತಾಗಿತ್ತು.

ಶಿವಮೊಗ್ಗ ಜಿಲ್ಲೆಯಲ್ಲಿ ಯಡಿಯೂರಪ್ಪನ ಮಗಳು ಅರುಣಾದೇವಿಯ ಕೈವಾಡದಿಂದ ಆಕೆಯ ಬೆಂಬಲಿಗರಿಗೆ ನಿವೇಶನಗಳನ್ನು ಮಂಜೂರು ಮಾಡಿರುವ ಪ್ರಕರಣ ಲೋಕಾಯುಕ್ತ ಮೆಟ್ಟಿಲೇರಿದೆ.


KARNATAKA HOUSING BOARD
BUILDING COMMUNITIES

ಭೂಸ್ವಾಧೀನದ ಕತೆ ಹೀಗಾದರೆ ಇನ್ನು ಮನೆ ವಿತರಣೆಯದು ಮತ್ತೊಂದು ಕತೆ. ಇದುವರೆಗೆ ವಸತಿ ಇಲಾಖೆ ವಿತರಿಸಿದ 20 ಲಕ್ಷ ಮನೆಗಳಲ್ಲಿ ಕೇವಲ 4.5 ಲಕ್ಷ ಮಂದಿ ಮಾತ್ರ ನಿಜವಾದ ಫಲಾನುಭವಿಗಳು. ಉಳಿದ 15.5 ಲಕ್ಷ ಮಂದಿ ಭ್ರಷ್ಟಾಚಾರದ ಫಲಾನುಭವಿಗಳು. ಅಂದರೆ ರಾಜಕೀಯ ಪುಡಾರಿಗಳು ಹಾಗೂ ಅಧಿಕಾರಿಗಳಿಗೆ ಕಾಣಿಕೆ ಸಲ್ಲಿಸಿದವರು ಸಲೀಸಾಗಿ ಮನೆ ಪಡೆದುಕೊಂಡಿದ್ದಾರೆ. ಇಂಥವರಲ್ಲಿ ಹಲವರಿಗೆ ಬೇರೆ ಕಡೆಗಳಲ್ಲಿ ಮನೆಗಳಿದ್ದು, ಈ ಮನೆಗಳನ್ನು ಬಡವರಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಹಲವರು ಬೇನಾಮಿ ಹೆಸರುಗಳಲ್ಲಿ ಮನೆ ಪಡೆದುಕೊಂಡಿದ್ದು ಅಂಥಾ ಎಷ್ಟೋ ಮಂದಿಯ ವಿಳಾಸಗಳೇ ಪತ್ತೆಯಾಗಿಲ್ಲ. ಅಂದಹಾಗೆ ಕೆಲವು ತಿಂಗಳ ಹಿಂದೆ ಈ ಮೇಲಿನ ಮಾಹಿತಿ ನೀಡಿದವರು ಸಾಕ್ಷಾತ್ ವಸತಿ ಸಚಿವ ಸೋಮಣ್ಣ ಆಗಿರುವುದು ಮತ್ತೊಂದು ವಿಶೇಷ.

ಮಂಡಳಿ ನಿರ್ಮಿಸಿದ ಮನೆಗಳಿಗೆ ದುಬಾರಿ ಬೆಲೆ ನಿಗದಿಪಡಿಸಿರುವುದನ್ನು ವಿರೋಧಿಸಿ ಹಲವಾರು ಕಡೆ ಪ್ರತಿಭಟನೆಗಳು ನಡೆದಿವೆ. ಹೀಗೆ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಕೈಗೆಟುಕುವ ಬೆಲೆಯಲ್ಲಿ ಒಂದು ಸೂರು ಒದಗಿಸಬೇಕೆಂಬ ಕಾಯ್ದೆಯ ಉದ್ದೇಶವೇ ಹಳ್ಳ ಹಿಡಿದಿದೆ.

ಲೋಕಾಯುಕ್ತ ಹಾಗೂ ಗುಜರಾತ್ ಮಾದರಿ

ಮೈಸೂರಿನ ಹೌಸಿಂಗ್ ಬೋರ್ಡ್ ಹಗರಣದ ಬಗ್ಗೆ ತನಿಖೆ ನಡೆಸುವಂತೆ ಕೇದಾರಲಿಂಗಯ್ಯ ಹಿರೇಮಠ್ ಎಂಬುವವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದಾರೆ (ಕೇಸ್ ನಂ.ಎಲ್‌ಒಕೆ/ಬಿಸಿಡಿ/287/2009/ಎಆರ್‌ಇ-2). ಪರಿಣಾಮವಾಗಿ ತಾರೀಕು 22.07.2011ರಲ್ಲಿ ಇದೇ ಕಳ್ಳರ ಕೂಟಕ್ಕೆ ಲೋಕಾಯುಕ್ತ ನೋಟೀಸ್ ಜಾರಿ ಮಾಡಿತ್ತು, ಆದರೆ ನೋಟೀಸ್ ಜಾರಿಯಾದರೂ ಜಿಟಿ ದೇವೇಗೌಡನಾಗಲಿ ಅಥವಾ ಇತರೆ ಸಂಬಂಧಿತ ಅಧಿಕಾರಿಗಳಾಗಲಿ ಆ ನೋಟೀಸ್‌ಗೆ ಕನಿಷ್ಟ ಉತ್ತರಿಸುವ ಗೋಜಿಗೂ ಹೋಗಲಿಲ್ಲ. ಈ ಭ್ರಷ್ಟರಿಗೆ ಅಂಥಾ ಧಾರ್ಷ್ಟ್ಯ ಎಲ್ಲಿಂದ ಬಂತು?



ಇದಕ್ಕೂ ಕಾರಣವಿದೆ. ನಾವು ಇಲ್ಲಿ ಗಮನಿಸಬೇಕಾದ ಬಹಳ ಮುಖ್ಯ ಅಂಶವೇನೆಂದರೆ ಎಷ್ಟೇ ಒತ್ತಡ ಬಂದರೂ ರಾಜ್ಯ ಸರ್ಕಾರ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರನ್ನು ನೇಮಕ ಮಾಡದೆ ಲಜ್ಜೆಗೆಟ್ಟು ವ್ಯವಹರಿಸಿದೆ. ಉತ್ತಮ ಹಿನ್ನೆಲೆಯುಳ್ಳ ನಿವೃತ್ತ ನ್ಯಾಯಾಧೀಶರನ್ನೇ ಈ ಹುದ್ದೆಗಳಿಗೆ ನೇಮಕ ಮಾಡಬೇಕೆಂಬುದು ಕಡ್ಡಾಯವಾಗಿದ್ದು, ಅವರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಅಧಿಕಾರ ಹೊಂದಿರುತ್ತಾರೆ. ಆದರೆ ಈಗ ಹಾಲಿ ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳು ಒಂದಲ್ಲಾ ಒಂದು ರೀತಿಯಲ್ಲಿ ಸರ್ಕಾರದ ಹಿಡಿತದಲ್ಲಿದ್ದು, ಆಳುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಹೀಗಾಗಿ ಸದರಿ ಪ್ರಕರಣ ಒಂದಿಂಚೂ ಕದಲಿಲ್ಲ. ಅಷ್ಟು ಮಾತ್ರವಲ್ಲ, ಈ ಭ್ರಷ್ಟರ ಕೂಟ ಸ್ವಲ್ಪವೂ ಅಳುಕಿಲ್ಲದೆ ತಮ್ಮ ಹಗಲು ದರೋಡೆಯನ್ನು ನಿರಾತಂಕವಾಗಿ ಮುಂದುವರೆಸಿದ್ದಾರೆ.

ಲೋಕಾಯುಕ್ತದಲ್ಲಿದ್ದ ಕೆಲವು ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳನ್ನು ಎತ್ತಂಗಡಿ ಮಾಡಿದ ಸರ್ಕಾರಕ್ಕೆ ನಾಡಿನಾದ್ಯಂತ ಜನರು ಕ್ಯಾಕರಿಸಿ ಉಗಿದಿದ್ದರು ಎಂಬುದನ್ನು ನಾವು ಇಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದು. ಈಗ ಲೋಕಾಯುಕ್ತ ಸಂಸ್ಥೆ ಹಲ್ಲುಕಿತ್ತ ಹಾವಿನಂತಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಕರ್ನಾಟಕದ ಬಿಜೆಪಿ ಮಂದಿ ಗುಜರಾತ್‌ನ ನರೇಂದ್ರ ಮೋದಿಯೇ ನಮಗೆ ಮಾದರಿಯೆಂದು ಹಲವು ಬಾರಿ ಬಹಿರಂಗವಾಗಿಯೇ ಘೋಷಿಸಿದ್ದಾರೆ. ಮೋದಿ ತನ್ನ ರಾಜ್ಯದಲ್ಲಿ ಲೋಕಾಯುಕ್ತರನ್ನು ನೇಮಿಸಿಲ್ಲ. ಲೋಕಾಯುಕ್ತ ನೇಮಕ ವಿಷಯದಲ್ಲೂ ಮೋದಿ ಮಾದರಿಯನ್ನು ಚಾಚೂ ತಪ್ಪದೆ ಅನುಸರಿಸಿದ್ದಾರೆ. ಹಾಗೆಯೇ ತಮ್ಮ ಭ್ರಷ್ಟಾಚಾರವನ್ನು ಎಲ್ಲೆಮೀರಿ ವಿಸ್ತರಿಸುತ್ತಲೇ ಇದ್ದಾರೆ.

ನಗರದ ಹೊರವಲಯದಲ್ಲಿ ನಿರ್ಮಾಣವಾಗಬೇಕಿದ್ದ ಬಡಾವಣೆಯನ್ನು ನಗರದಿಂದ 22 ಕಿಲೋಮೀಟರ್ ದೂರಕ್ಕೆ ಸಾಗಹಾಕಿದೆ. ಇದು ಈ ಕೂಟದ ಮತ್ತೊಂದು ಘನ ಸಾಧನೆ.

2005-06ರಲ್ಲಿ ಮೈಸೂರಿನ ಹೊರವಲಯದಲ್ಲಿರುವ ಕೆಂಚಲಗೂಡು ಎಂಬ ಹಳ್ಳಿಯಲ್ಲಿ ಬಡಾವಣೆ ನಿರ್ಮಿಸುವ ಉದ್ದೇಶದಿಂದ ಒಂದಷ್ಟು ಭೂಮಿಯನ್ನು ವಶಪಡಿಸಿಕೊಂಡಿತ್ತು. ರೈತರಿಗೆ ಎಕರೆಗೆ 16.5 ಲಕ್ಷ ಪರಿಹಾರ ನೀಡಿದ ನಂತರ ಆ ಭೂಮಿಗಳಿಗೆ ಸಂಬಂಧಿಸಿ ಕ್ರಯಪತ್ರ ಕೂಡ ರಿಜಿಸ್ಟರ್ ಆಗಿತ್ತು. ಆದರೆ ನಿವಾರಿಸಿಕೊಳ್ಳಲು ಸಾಧ್ಯವಿದ್ದ ಕೆಲ ಸಣ್ಣಪುಟ್ಟ ತೊಡಕುಗಳನ್ನು ಮುಂದುಮಾಡಿ, ಆ ಪ್ರದೇಶದ ಯೋಜನೆಯನ್ನೇ ಕೈಬಿಟ್ಟು 22 ಕಿ.ಮೀ.ಗಳಿಗೂ ಹೆಚ್ಚು ದೂರವಿರುವ ನಾಗನಹಳ್ಳಿ ಪ್ರದೇಶಕ್ಕೆ ಈ ಯೋಜನೆಯನ್ನು ಸ್ಥಳಾಂತರಿಸಿತು. ನಗರದ ಮಿತಿಯಲ್ಲೇ ಇರುವ ಪ್ರದೇಶಕ್ಕೆ 16.5 ಲಕ್ಷ ಬೆಲೆಯಾದರೆ ದೂರದ ಪ್ರದೇಶಕ್ಕೆ 36 ಲಕ್ಷ ಬೆಲೆ. ಇದರ ಹಿಂದಿನ ಕಾರಣಗಳನ್ನು ವಿವರಿಸುವ ಅಗತ್ಯವೇ ಇಲ್ಲ ಬಿಡಿ.

ಇಷ್ಟೆಲ್ಲಾ ಹೀನಸುಳಿ ದಂಧೆ ನಡೆಯುತ್ತಿದ್ದಾಗ ಮಂಡಳಿಯ ಕೆಲವು ಅಧಿಕಾರಿಗಳು ದುಬಾರಿ ಬೆಲೆ ನಿಗದಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ಒಂದು ಸರ್ವೆ ನಡೆಸಿ ಸರ್ಕಾರಕ್ಕಾದ ಭಾರೀ ನಷ್ಟದ ಬಗ್ಗೆ 22.12.2011ರಲ್ಲಿ ಸರ್ಕಾರಕ್ಕೆ ವರದಿ ನೀಡಿದರು. ಆದರೆ ಪರಿಣಾಮ ಮಾತ್ರ ಶೂನ್ಯ.

ಅವಧಿ ಮುಗಿದರೂ ಅಧಿಕಾರ ಬಿಡಲ್ಲ!

ಇದೆಲ್ಲ ಇರಲಿ; ಈ ಜೆ.ಟಿ.ದೇವೇಗೌಡ ಮತ್ತು ಈತನಿಗೆ ಆಶ್ರಯದಾತರಾದ ಬಿಜೆಪಿಯವರು ಕಾನೂನಿಗೆ ಕೊಡುವ ಗೌರವ ಎಂಥದ್ದೆಂದು ನೋಡೋಣ. ಜನತಾದಳದಿಂದ ಜಿಗಿದ ಜೆ.ಟಿ.ಯನ್ನು 2008ರ ಜುಲೈ ಒಂದರಂದು ಸದರಿ ಮಂಡಳಿಯ ಅಧ್ಯಕ್ಷರಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿತು. ನಿಯಮದ ಅನುಸಾರ ಇವರ ಅಧಿಕಾರಾವಧಿ 2011ರ ಜೂನ್ 30ಕ್ಕೆ ಕೊನೆಗೊಳ್ಳಬೇಕು. ಆದರೆ ಗದ್ದುಗೆಯಲ್ಲಿದ್ದ ಎಲ್ಲರೊಂದಿಗೂ ಹೊಂದಾಣಿಕೆಯಲ್ಲಿದ್ದ ಈ ಆಸಾಮಿಯ ಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸುವ ಯೋಚನೆಯೇ ಸರ್ಕಾರಕ್ಕೆ ಬರಲಿಲ್ಲ. ಆದ್ದರಿಂದ ಜೆ.ಟಿ. ಅಧಿಕಾರದಲ್ಲಿ ಅನಧಿಕೃತವಾಗಿ ಮುಂದುವರೆದರು.

ಅವಧಿ ಮುಗಿದರೂ ಸೀಟು ಬಿಡದ ಈ ಆಸಾಮಿಯ ಬಗ್ಗೆ ಪ್ರಶ್ನಿಸಿ ಈ ಕೇಸಿನ ಫಿರ್ಯಾದುದಾರರಾದ ಗೋಪಿನಾಥ್ ಅವರು ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದ ನಂತರವೇ ಈ ಸರ್ಕಾರಕ್ಕೆ ಕಾನೂನಿನ ಬಗ್ಗೆ ನೆನಪಾಗಿದ್ದು. ಹಾಗಾಗಿ ಏನೆಲ್ಲಾ ಹಡಾವುಡಿ ಮಾಡಿ ತಾರೀಕು 27.03.2012ರಂದು ಒಂದು ಆದೇಶ ಹೊರಡಿಸಿದ ಸರ್ಕಾರ ಇದೇ ಜೆ.ಟಿ.ಯನ್ನು ಮತ್ತೆ ಮೂರು ವರ್ಷದ ಅವಧಿಗೆ ಮಂಡಳಿಯ ಚೇರ್ಮನ್ ಆಗಿ ನೇಮಿಸಿದೆ. ಆದರೆ ಕರ್ನಾಟಕ ಹೌಸಿಂಗ್ ಬೋರ್ಡ್ ಕಾಯ್ದೆಯ 6ನೇ ರೂಲ್‌ನ ಎಂ-63ನೇ ಅಂಶದ ಪ್ರಕಾರ ಈ ರೀತಿ ನೇಮಕ ಮಾಡುವುದು ಕಾನೂನು ಬಾಹಿರ. ಇಂಥಾ ನೇಮಕ ಕಾನೂನುಬಾಹಿರ ಎಂದು ವಸತಿ ಕಮಿಷನರ್ 21.03.2012ರಂದೇ ಒಂದು ಪತ್ರ ಬರೆದು ಸರ್ಕಾರವನ್ನು ಮೊದಲೇ ಎಚ್ಚರಿಸಿದ್ದರು. ಇಡೀ ದೇಶವನ್ನೇ ತಮ್ಮ ಖಾಸಗಿ ಆಸ್ತಿಯೆಂದು ಭಾವಿಸಿರುವ ಮಂದಿ ಕಾನೂನು ಪಾಲಿಸುತ್ತಾರೆಂದು ನಾವು ನಿರೀಕ್ಷಿಸಲು ಸಾಧ್ಯವೇ?


ಈ ಮರುನೇಮಕವೇ ಕಾನೂನುಬಾಹಿರ; ಅದು ಹಾಗಿರಲಿ. 2011 ಜುಲೈನಿಂದ 2012ರ ಮಾರ್ಚ್ ನಡುವೆ ಮಾನ್ಯ ದೇವೇಗೌಡರು ತನ್ನ ಚೇರ್ಮನ್‌ಗಿರಿಯಲ್ಲಿ ಹಲವಾರು ಅಧಿಕೃತ ಸಭೆಗಳನ್ನು ಅನಧಿಕೃತವಾಗಿ ನಡೆಸಿದ್ದಾರೆ. ಹಲವಾರು ನಿರ್ಣಯಗಳನ್ನು ತೆಗೆದುಕೊಂಡು, ನಾನಾ ಆದೇಶಗಳನ್ನು ಹೊರಡಿಸಿದ್ದಾರೆ. ಇವೆಲ್ಲವೂ ಕಾನೂನು ಬಾಹಿರವಾಗಿದ್ದು ಅವುಗಳನ್ನು ಅಸಿಂಧುಗೊಳಿಸಬೇಕೆಂದು ಗೋಪಿನಾಥ್ ಹೈಕೋರ್ಟ್‌ನಲ್ಲಿ ಕೇಳಿಕೊಂಡಿದ್ದಾರೆ.

ಜೆ.ಟಿ.ದೇವೇಗೌಡನ ರಾದಿ ರಗಳೆಯನ್ನೆಲ್ಲಾ ಕೇಳಿದ ನಂತರ ತೀರಾ ಇತ್ತೀಚಿನ ಇತಿಹಾಸವನ್ನು ನಾವು ನೆನಪಿಸಿಕೊಳ್ಳುವುದು ಉಚಿತ. ಸಚಿವನಾಗಿದ್ದ ಕೃಷ್ಣಯ್ಯ ಶೆಟ್ಟಿ ಕೋಲಾರ ಮತ್ತು ಚಿಕ್ಕಬಳ್ಳಾಪುರಗಳಲ್ಲಿ ರೈತರ ಭೂಮಿಯನ್ನು ಸ್ವಾಧೀನಕ್ಕೊಳಪಡಿಸಿದ್ದ, ಇದೇ ತಂತ್ರವನ್ನು ಅನುಸರಿಸಿ ಎಕರೆಗೆ 55 ಲಕ್ಷ ಪರಿಹಾರ ನೀಡಿ, ಆತನ ತಮ್ಮ ಶ್ರೀನಿವಾಸ್ ಶೆಟ್ಟಿ ರೈತರ ಹಣ ಲಪಟಾಯಿಸಿದ್ದ. ನಂತರ ಏನಾಯ್ತು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಜೈಲಿಗೆ ಹೋಗಿಬಂದ ಶೆಟ್ಟಿ ಕಂಡಕಂಡ ದೇವರುಗಳಿಗೆಲ್ಲಾ ಕೈಮುಗಿದು 'ದೇವರೇ, ಹೇಗಾದ್ರೂ ಮಾಡಿ ಈ ಕೇಸಿನಿಂದ ಕಾಪಾಡಪ್ಪಾ' ಅಂತಾ ಬೇಡಿಕೊಳ್ಳುತ್ತಿದ್ದಾನೆ. ಇಂಥಾ ಹೊತ್ತಿನಲ್ಲೇ ಅಂಥದೇ ಹಗರಣದಲ್ಲಿ ಜೆ.ಟಿ.ದೇವೇಗೌಡ ಸಿಕ್ಕಿಕೊಂಡಿದ್ದಾರೆ. ಅದಷ್ಟು ಬೇಗ ತನಿಖೆ ನಡೆದು ಇವರಿಗೂ ಕೃಷ್ಣಯ್ಯನಿಗೆ ಸಿಕ್ಕ ಬಹುಮಾನವೇ ಸಿಗಲಿ ಎಂಬುದು ಬಹುಜನರ ಹಾರೈಕೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಸದಾನಂದಗೌಡರ ನಗೆ ಸೊರಗಿದರೆ

ಆಹಾರ ಸಚಿವರ ಜೀವವೇ ಹೋದ ಹಾಗಾಗಿದೆ




ಕರ್ನಾಟಕದ ಇಬ್ಬರು ಪ್ರತಿಷ್ಠಿತ ವ್ಯಕ್ತಿಗಳು ಹಾಗೂ ಪ್ರಭಾವಿ ರಾಜಕಾರಣಿಗಳಿಬ್ಬರ ವಿರುದ್ಧ ಮಹಿಳೆಯೊಬ್ಬರು ಮುಡಿಗೆದರಿ ನಿಂತಿದ್ದು ಇದೇ ಮೊದಲಿರಬೇಕು. ಕರ್ನಾಟಕ ಉಚ್ಚ ನ್ಯಾಯಾಲಯ ಈಕೆಯ ಕಾಳಜಿಯನ್ನು ಮನ್ನಿಸಿ ಆ ಇಬ್ಬರೂ ಪ್ರಭಾವಿಗಳ ಮೂತಿಗೆ ತಮಾಚ ಗುದ್ದಿದೆ. ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಹಾಗೂ ಆಹಾರ ಸಚಿವ ಡಿ.ಎನ್.ಜೀವರಾಜ್ ಇಬ್ಬರೂ ಸೇರಿ ಕಟ್ಟಿಕೊಂಡಿರುವ ಕಮರ್ಷಿಯಲ್ ಕಾಂಪ್ಲೆಕ್ಸಿನ ಕರ್ಮ ಇದು. ಈ ಇಬ್ಬರೂ ಬಿಜೆಪಿಯ ರಾಜಕಾರಣಿಗಳು ಅಕ್ಕಪಕ್ಕದಲ್ಲಿದ್ದ ತಮ್ಮ ಸೈಟುಗಳನ್ನು ಒಂದು ಮಾಡಿಕೊಂಡು ಒಂದಾಗಿ ಒಂದು ಬೃಹತ್ತಾದ ವಾಣಿಜ್ಯ ಕಟ್ಟಡ ಕಟ್ಟಿಕೊಂಡಿದ್ದಾರೆ. ಇದು ಎಚ್‌ಎಸ್‌ಆರ್ ಬಡಾವಣೆಯಲ್ಲಿ ತಲೆಯೆತ್ತಿ ನಿಂತಿದೆ. ಬಿಡಿಎಯಿಂದ ಜೆ- ಕೆಟಗರಿಯಲ್ಲಿ ಮಂಜೂರಾಗಿರುವ ನಿವೇಶನಗಳಲ್ಲಿ ಈ ಕಟ್ಟಡ ನಿರ್ಮಾಣಗೊಂಡಿದೆ. ಇದು ಅಕ್ರಮ, ಅಕ್ಷಮ್ಯ. ಈ ಕುರಿತು ಹೈಕೋರ್ಟ್‌ನಲ್ಲಿ PIL ಸಲ್ಲಿಸಿದ್ದ ಪತ್ರಕರ್ತೆ ನಾಗಲಕ್ಷ್ಮಿ ಬಾಯಿಯವರ ಹೋರಾಟ ಸಾರ್ಥಕ ಅಂತ್ಯ ಕಂಡಿದೆ.

ಪತ್ರಕರ್ತೆ ನಾಗಲಕ್ಷ್ಮಿ ಬಾಯಿಯವರು ಈ ಅಕ್ರಮದ ಕುರಿತು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಮಾಜಿ ಮುಖ್ಯಮಂತ್ರಿ ಮತ್ತು ಹಾಲಿ ಮಂತ್ರಿಗಳಿಬ್ಬರೂ ಸೇರಿ ನಿಯಮ ಮೀರಿ ಕಟ್ಟಡ ನಿರ್ಮಿಸಿದ್ದಾರೆ ಎಂದು ದೂರಲಾಗಿತ್ತು. ಈ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿ ಡಿ.ವಿ.ಶೈಲೇಂದ್ರಕುಮಾರ್ ನೇತೃತ್ವದ ವಿಭಾಗೀಯ ಪೀಠ ನಡೆಸಿತು. ಹದಿನಾಲ್ಕು ತಿಂಗಳುಗಳ ಕಾಲ ಸತತ ವಾದ - ಪ್ರತಿವಾದಗಳು ನಡೆದು ಮೊನ್ನೆ ಅಕ್ಟೋಬರ್ 19ರಂದು ತೀರ್ಪು ಹೊರಬಿದ್ದಿದೆ. ತೀರ್ಪಿನಲ್ಲಿ ನ್ಯಾಯಪೀಠ ಗಮನಾರ್ಹ ವಿಷಯಗಳನ್ನು ಉಲ್ಲೇಖಿಸಿದೆ. ಅದರಲ್ಲಿ ಉನ್ನತ ಸ್ಥಾನಗಳಲ್ಲಿರುವವರು ಅಕ್ರಮ ಎಸಗಿದಾಗ ಸಂಬಂಧಪಟ್ಟವರು ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುತ್ತಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳಿಂದ ನಿಯಮಗಳು ಉಲ್ಲಂಘನೆಯಾದಾಗ, ಜನರಿಗೆ ವ್ಯವಸ್ಥೆಯಲ್ಲಿ ನಂಬಿಕೆ ಹೊರಟುಹೋಗುತ್ತದೆ. ಈ ಸಂದರ್ಭದಲ್ಲಿ ನಾವು ಸೂಕ್ತ ಕ್ರಮ ಜರುಗಿಸಬೇಕಾಗಿದೆ... ಎಂದು ನ್ಯಾಯಪೀಠ ಕಟುವಾದ ಅರ್ಥದಲ್ಲಿ ಮನವರಿಕೆ ಮಾಡಿಕೊಟ್ಟಿದೆ.

ಪ್ರಕರಣದ ಹಿನ್ನೆಲೆ:


ಜೆ- ಕೆಟಗರಿಯಲ್ಲಿ ಬಿಡಿಎ ನಿವೇಶನ ಮಂಜೂರಾಗಿದ್ದರೆ, ಅಲ್ಲಿ ಒಂದು ಅಡುಗೆ ಕೋಣೆಯಿರುವಂತಹ ವಾಸಗೃಹವನ್ನಷ್ಟೆ ನಿರ್ಮಿಸಬೇಕು ಎಂಬ ನಿಯಮವಿದೆ. ಅಂತಹ ನಿವೇಶನವನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಚಟುವಟಿಕೆ ಅಥವಾ ವಾಣಿಜ್ಯ ಕಟ್ಟಡ ನಿರ್ಮಾಣದಂತಹ ಕೆಲಸಗಳಿಗೆ ಬಳಸಿಕೊಳ್ಳುವಂತಿಲ್ಲ. 50/80 ಅಡಿ ಅಳತೆಯ ನಿವೇಶನ ಪಡೆಯುವಾಗ ನೀಡುವ ಪ್ರಮಾಣ ಪತ್ರದ ಅಂಶಗಳಲ್ಲಿ ಇದೂ ಸೇರಿರುತ್ತದೆ. ಅಂತೆಯೇ ಕಟ್ಟಡ ನಿರ್ಮಿಸುವಾಗ ತಯಾರಿಸಲಾಗುವ ನಕ್ಷೆಗಳನ್ನು ಸಹಾ ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳು ಕಾನೂನು ರೀತ್ಯಾ ಅನುಮತಿ ನೀಡಬೇಕಾಗಿರುತ್ತದೆ. ಈ ಎಲ್ಲಾ ಹಿನ್ನೆಲೆಗಳಿಂದ ಡಿವಿಎಸ್ ಹಾಗೂ ಜೀವರಾಜ್‌ರವರು ನಿರ್ಮಿಸಿರುವ ಬಹುಮಹಡಿ ಕಟ್ಟಡ ಕಾನೂನು ಬಾಹಿರವಾದದ್ದು ಎಂಬುದು ಮೇಲ್ನೋಟಕ್ಕೆ ಸ್ಪಷ್ಟ.



ಸದಾನಂದಗೌಡ ಹಾಗೂ ಜೀವರಾಜ್ ಅವರಿಬ್ಬರೂ ನಿವೇಶನಗಳನ್ನು ಪಡೆದಿರುವುದು ಜೆ-ಕೆಟಗರಿಯಲ್ಲೇ. ವಸತಿ ಉದ್ದೇಶಕ್ಕೆಂದೇ ಇರುವ ಜೆ- ಕೆಟಗರಿಯ ಬಿಡಿಎ ನಿವೇಶನದಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿರುವುದು ಅಪರಾಧ. ಜತೆಗೆ, ಅಕ್ಕ ಪಕ್ಕದ ತಮ್ಮ ಎರಡೂ ನಿವೇಶನಗಳನ್ನು ಸೇರಿಸಿ ಬಹುಮಹಡಿ ಕಟ್ಟಡ ನಿರ್ಮಿಸಿರುವುದು ಕಾನೂನು ಬಾಹಿರ. ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಈ ಕಟ್ಟಡ ನಿರ್ಮಾಣದ ವಿರುದ್ಧ ಮೂರು ತಿಂಗಳಲ್ಲಿ ಕಾನೂನು ಕ್ರಮ ಜರುಗಿಸಬೇಕು ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಈಗಾಗಲೇ ನಿರ್ಮಾಣಗೊಂಡು ನಿಂತಿರುವ ಈ ಕಟ್ಟಡ ನಿಯಮ ಮೀರಿರುವುದನ್ನು ಗಮನಿಸಿಯೂ ಬಿಬಿಎಂಪಿ ಹಾಗೂ ಬಿಡಿಎ ಕಾನೂನು ಕ್ರಮ ಜರುಗಿಸಿಲ್ಲದಿರುವುದನ್ನು ಗಮನಿಸಿ ನ್ಯಾಯಪೀಠ ತನ್ನ ಅಸಮಾಧಾನವನ್ನು ಹೊರಹಾಕಿದೆ. ನ್ಯಾಯಾಲಯವು ಕಟ್ಟಡ ನಿರ್ಮಿಸುವ ಆರಂಭಿಕ ನಕ್ಷೆ, ಬದಲಾವಣೆ ಮಾಡಿದ ನಕ್ಷೆ ಹಾಗೂ ಅನುಮತಿ ದೊರೆತ ನಕ್ಷೆಯನ್ನು ರದ್ದು ಮಾಡಿದೆ. ಇನ್ನು ನಿವೇಶನ ಪಡೆಯುವಾಗ ನೀಡುವ ಪ್ರಮಾಣಪತ್ರದ ಅಂಶಗಳಲ್ಲಿ ಯಾವುದು ಉಲ್ಲಂಘನೆ ಆಗಿದೆ ಎಂಬುದನ್ನು ಪರಿಶೀಲಿಸಿ ಕ್ರಮ ಜರುಗಿಸಬೇಕು ಎಂದು ಪೀಠ ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶಿಸಿದೆ.

ಡಿವಿಎಸ್ ಹಾಗೂ ಜೀವರಾಜ್‌ರಿಬ್ಬರೂ ಯಡಿಯೂರಪ್ಪನ ಆರ್ಭಟದಿಂದ ಪಕ್ಷ ಮತ್ತು ಸರ್ಕಾರ ಎರಡೂ ಅಧೋಗತಿಗೆ ಬಂದಿರುವುದನ್ನು ಕಂಡು ಬಿಕ್ಕುತ್ತಿದ್ದರು. ಇದೀಗ ತಮ್ಮ ಕುಟಿಲೋಪಾಯದ ಕಟ್ಟಡ ನಿರ್ಮಾಣವೇ ತಮಗೆ ಕಂಟಕವಾಗಿ ಕಟ್ಟಡವೂ ಇಲ್ಲ ನಿವೇಶನವೂ ಇಲ್ಲ ಎಂಬಂತಾದೀತು ಎಂದೆಣಿಸಿ ಅಳುಮೋರೆ ಹಾಕಿಕೊಂಡು ಮನೆ ಸೇರಿದ್ದಾರೆ. ಪತ್ರಕರ್ತೆ ನಾಗಲಕ್ಷ್ಮಿ ಬಾಯಿಯವರ ಸಾಮಾಜಿಕ ಕಳಕಳಿಗೆ ಸೂಕ್ತವಾದ ನ್ಯಾಯ ನ್ಯಾಯಾಲಯದಿಂದ ಸಿಕ್ಕಿದೆ.

ಹೋರಾಟಗಾರ್ತಿ ನಾಗಲಕ್ಷ್ಮಿ ಬಾಯಿ



ಕನ್ನಡ ಸುದ್ದಿಸಂಸ್ಥೆಯಲ್ಲಿ ವಿಶೇಷ ವರದಿಗಾರ್ತಿಯಾಗಿರುವ ನಾಗಲಕ್ಷ್ಮಿ ಬಾಯಿಯವರು ತಮ್ಮ ಸಾಮಾಜಿಕ ಕಾರ್ಯಚಟುವಟಿಕೆಗಳಿಂದ ವಿಶಿಷ್ಟವಾಗಿ ಗುರ್ತಿಸಿಕೊಂಡಿರುವವರು. ಇವರು ಡಿವಿಎಸ್ ಹಾಗೂ ಡಿ.ಎನ್.ಜೀವರಾಜ್‌ರವರ ಅಕ್ರಮ ಕಟ್ಟಡದ ವಿರುದ್ಧ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ, ತೀರ್ಪು ಹೊರಬೀಳುವವರೆಗೂ ಹೋರಾಡಿರುವ ದಿಟ್ಟೆ. ಹಾಗೇ ಇದೇ ಸದಾನಂದಗೌಡರ ವಿರುದ್ಧ ಇವರು ಮತ್ತೊಂದು PIL ಕೂಡಾ ಸಲ್ಲಿಸಿದ್ದಾರೆ. ಅದು, ಸದಾನಂದಗೌಡರು ಪುತ್ತೂರಿನಲ್ಲಿ ಹೊಂದಿರುವ ಸರ್ಕಾರಿ ಗ್ರಾಂಟ್‌ನ ಜಾಗಕ್ಕೆ ಸಂಬಂಧಿಸಿದ್ದು. ಬಿಡಿಎ ಸರ್ಕಾರಿ ಕೋಟಾದಡಿಯಲ್ಲಿ ಒಮ್ಮೆ ನಿವೇಶನ ಪಡೆದುಕೊಂಡರೆ ಮತ್ತೆ ದೇಶದಲ್ಲೇ ಆಗಲಿ ಅಥವಾ ರಾಜ್ಯದ ಯಾವುದೇ ಮೂಲೆಯಲ್ಲಾಗಲಿ ಸರ್ಕಾರಿ ಜಾಗ ಪಡೆದುಕೊಳ್ಳುವಂತಿಲ್ಲ. ಈ ರೀತಿಯ ಅಫಿಡವಿಟ್ ಸಲ್ಲಿಸಿದ ಮೇಲೆ ಜಾಗ ಮಂಜೂರಾಗಿರುತ್ತದೆ.

ಆದರೆ, ಸದಾನಂದಗೌಡರು ಈ ನಿಯಮವನ್ನೂ ಉಲ್ಲಂಘಿಸಿ, ಬೆಂಗಳೂರಿನಲ್ಲಿ ಮತ್ತು ಪುತ್ತೂರಿನಲ್ಲಿ ಸರ್ಕಾರದ ಜಾಗಗಳನ್ನೇ ಹೊಂದಿದ್ದಾರೆ. ಇದೂ ಕೂಡಾ ಕಾನೂನುಬಾಹಿರವೇ. ಇದರೊಂದಿಗೆ, ಸದಾನಂದಗೌಡರು ಚುನಾವಣಾ ಆಯೋಗಕ್ಕೆ ತಪ್ಪು ಹಾಗೂ ಸುಳ್ಳು ಮಾಹಿತಿ ನೀಡಿದ್ದಾರೆಂದು ಆರೋಪಿಸಿ ಇದೇ ನಾಗಲಕ್ಷ್ಮಿಯವರು ಲೋಕಾಯುಕ್ತಕ್ಕೂ ದೂರು ನೀಡಿದ್ದಾರೆ. ಇವು ವಿಚಾರಣೆಯ ಹಂತಗಳಲ್ಲಿವೆ. ಸೆಂಟ್ರಲ್ ಸೋಶಿಯಲ್ ವೆಲ್‌ಫೇರ್ ಕೌನ್ಸಿಲ್‌ನ ಮೆಂಬರ್ ಕೂಡಾ ಆಗಿರುವ ನಾಗಲಕ್ಷ್ಮಿ ಬಾಯಿಯವರು ಗುಲ್ಬರ್ಗಾದಲ್ಲಿ ಹೆಣ್ಣು ಮಕ್ಕಳ ಮಾರಾಟ ನಡೆಯುತ್ತಿದೆ ಎಂಬ ವರದಿಯನ್ನಾಧರಿಸಿ, ಆ ಭಾಗದಲ್ಲಿ ಓಡಾಡಿ, ಅದರ ಸಮಗ್ರ ಅಧ್ಯಯನ ನಡೆಸಿ ಅದರ ಕುರಿತು 'ಮಕ್ಕಳಿಲ್ಲಿ ಮಾರಾಟಕ್ಕಿವೆ' ಎಂಬ ಕೃತಿಯನ್ನು ಬರೆದರು. ಈತನಕ ಐದು ಕೃತಿಗಳನ್ನ ನಾಗಲಕ್ಷ್ಮಿ ಬಾಯಿಯವರು ರಚಿಸಿದ್ದಾರೆ.

ಹಲವು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ಇವರು ರಾಜ್ಯದ ಇಬ್ಬರು ಪ್ರಭಾವಿ ರಾಜಕಾರಣಿಗಳ ವಿರುದ್ಧ PIL ಸಲ್ಲಿಸಿ, ನ್ಯಾಯಾಲಯದಿಂದ ನ್ಯಾಯಸಮ್ಮತವಾದ ತೀರ್ಪು ಹೊರಬೀಳುವಂತೆ ಮಾಡಿದ ಕರ್ನಾಟಕದ ಪ್ರಪ್ರಥಮ ಮಹಿಳೆ.


ಕಾಲೇಜು ಉದ್ಘಾಟನೆಗೆ ಬಂದ ಅಡ್ವಾಣಿಗೆ ಸನ್ಮಾನ...


ಅನಂತಕುಮಾರ್‌ಗೆ ಸಿದ್ದೇಶ್ವರ ದಂಪತಿಗಳ ಉಡುಗೊರೆ...


ಜಿಎಂಐಟಿ ಇಂಜನಿಯರಿಂಗ್ ಕಾಲೇಜ್....

ದಾವಣಗೆರೆ: ಸರ್ಕಾರಿ ಭೂಮಾಫಿಯಾ

ಏನೇ ಆಗಲಿ ಇದು ಅಭಿವೃದ್ಧಿ ಪರವಾದ ಯುಗ. ಅದರಲ್ಲೂ ಬಿಜೆಪಿ ಸರ್ಕಾರ ಬಂದಮೇಲೆ ಈ ಅಭಿವೃದ್ಧಿ ನಾಗಾಲೋಟದಲ್ಲಿ ಸಾಗುತ್ತಿದೆ. ಇದರ ಪ್ರಮುಖ ಪರಿಣಾಮವೇ ರೈತರನ್ನು ಒಕ್ಕಲೆಬ್ಬಿಸಿ, ಬೀದಿಪಾಲು ಮಾಡುವುದು. ರೈತರ ಭೂಮಿಯನ್ನು ಎಂಪಿ ಸಿದ್ದೇಶ್ವರನಂಥಾ ಭೂಗಳ್ಳರ ಪಾಲುಮಾಡುವುದು. ಅಂಥಾದ್ದೊಂದು ಯೋಜನೆಯೇ ದಾವಣಗೆರೆ ಜವಳಿ ಪಾರ್ಕ್.


2002ರಲ್ಲಿ ಎಸ್.ಎಂ.ಕೃಷ್ಣ ಸರ್ಕಾರ ದಾವಣಗೆರೆ ನಗರಕ್ಕೆ ಅಂಟಿಕೊಂಡಿರುವ ಕರೂರು ಪ್ರದೇಶದಲ್ಲಿ 143 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಇದರಲ್ಲಿ ಸುಮಾರು 103 ಎಕರೆ ಭೂಮಿ ಕೃಷಿ ಭೂಮಿಯಾದರೆ, ಇನ್ನುಳಿದ ಸುಮಾರು 40 ಎಕರೆ ಜಾಗದಲ್ಲಿ ಖಾಲಿ ನಿವೇಶನಗಳಿದ್ದವು. ಆದರೆ ಅವು ಯಾವುದೇ ಪ್ರಾಧಿಕಾರ ನಿರ್ಮಿಸಿದ ನಿವೇಶನಗಳಾಗಿರಲಿಲ್ಲ, ಮಾಮೂಲಿಯಂತೆ ರೈತರಿಂದ ನೇರವಾಗಿ ಕೊಂಡುಕೊಂಡ ಅನಧಿಕೃತ ನಿವೇಶನಗಳು. ಇಲ್ಲಿದ್ದವರೆಲ್ಲಾ ಬಡಬಗ್ಗರೇ ಹೊರತು ಯಾವ ಪ್ರಭಾವಿ ವ್ಯಕ್ತಿಗಳ ಆಸ್ತಿಯೂ ಇರಲಿಲ್ಲ.

ಸರ್ಕಾರದ ಈ ಅರಣ್ಯ ನೀತಿಯನ್ನು ರೈತರು ಹಾಗೂ ನಿವೇಶನದ ಮಾಲೀಕರು ವಿರೋಧಿಸಿದರು. ಕೋರ್ಟ್ ಮೆಟ್ಟಲು ಹತ್ತಿದರು. ಆದರೆ ಸಿಕ್ಕಿದ್ದು ನಿರೀಕ್ಷಿತ ಫಲಿತಾಂಶ. ಕೆಲವರು ಸರ್ಕಾರ ನೀಡಿದ ಪರಿಹಾರವನ್ನು ತಿರಸ್ಕರಿಸಿ ಹೋರಾಟ ಮುಂದುವರೆಸಿದರು. ಇನ್ನು ಈ ಯೋಜನೆಯ ಕತೆ ಏನೆಂದು ನೋಡೋಣ.


ಭೂಮಿಯನ್ನು ರೈತರಿಂದ ವಶಪಡಿಸಿಕೊಂಡು ಇಲ್ಲಿಗೆ ಸರಿಯಾಗಿ ಹತ್ತು ವರ್ಷ ಆಯ್ತು, ಹೋಗಲಿ, ಇಲ್ಲಿ ಯಾವುದಾದರೂ ಕೈಗಾರಿಕೆ ಬಂದಿದೆಯೆ ಅಂತಾ ನೋಡಿದರೆ ಕೈಗಾರಿಕೆ ಹಾಳಾಗಲಿ, ಕನಿಷ್ಠ ಒಂದು ಖಾರ ಕುಟ್ಟೋ ಮಿಷಿನ್ ಕೂಡಾ ಬಂದಿಲ್ಲ. ಹಾಗಾದರೆ ಈ ಘನಂದಾರಿ "ಕೈಗಾರಿಕಾ" ಯೋಜನೆ ಏನಾಯಿತು? ರೈತರಿಂದ, ಬಡಬಗ್ಗರಿಂದ ಕಿತ್ತುಕೊಂಡ 143 ಎಕರೆ ಭೂಮಿ ಯಾರ ಪಾಲಾಯಿತು? ಆ ಪಟ್ಟಿಯನ್ನು ನೀವೇ ನೋಡಿ.

ಮೊದಲನೆಯದಾಗಿ ಈ ಭೂಮಿಯ ಸಿಂಹಪಾಲು ಗೌಡರ ಮಲ್ಲಿಕಾರ್ಜುನಪ್ಪ ಸಿದ್ದೇಶ್ವರ್ ಎಂಬ ಆಸಾಮಿಯ ಪಾಲಾಗಿದೆ. ಈತ ಬೇರೆ ಯಾರೂ ಅಲ್ಲ, ಆಳುವ ಬಿಜೆಪಿ ಪಕ್ಷದ ಹಾಲಿ ಎಂಪಿ. ಆತನ ಕುಟುಂಬಕ್ಕೆ ಸೇರಿದ ಶ್ರೀಶೈಲ ಎಜುಕೇಷನ್ ಟ್ರಸ್ಟ್‌ಗೆ ಬರೋಬ್ಬರಿ 38 ಎಕರೆ 36 ಗುಂಟೆ ಜಮೀನು ಮಂಜೂರಾಗಿದೆ. ಅದರ ಪಕ್ಕದಲ್ಲೇ ಜಿಲ್ಲಾಧಿಕಾರಿ ಭವನಕ್ಕೆಂದು 10 ಎಕರೆ ಮುಂಜೂರಾಗಿದೆ. ಇನ್ನು ಡಿಐಸಿ ಕಚೇರಿಗೆ ಒಂದಿಷ್ಟು, ಸಣ್ಣ ಕೈಗಾರಿಕಾ ನಿಗಮದ ಕಚೇರಿಗೆ ಮತ್ತೊಂದಿಷ್ಟು ಭೂಮಿ ನೀಡಲಾಗಿದೆ. ಇವೆಲ್ಲಾ ಹಾಗಿರಲಿ. ಇನ್ನೂ ಕುಚೋದ್ಯದ ಸಂಗತಿಯೆಂದರೆ ಈ ಮಾನಗೇಡಿ ಸರ್ಕಾರಕ್ಕೆ ಕಾವಿಧಾರಿಯೂ ಕೂಡ ಕೈಗಾರಿಕೋದ್ಯಮಿಯಂತೆ ಕಂಡುಬಂದಿದ್ದಾನೆ. ಕಾವಿಧಾರಿ ಸ್ವಾಮಿಯೊಬ್ಬನಿಗೆ 2 ಎಕರೆ ಭೂಮಿ ಮುಂಜೂರಾಗಿದೆ. ಈತನ ನಾಮಧೇಯ ಶ್ರೀ ಬಾಲಯೋಗಿ ಮಧು ಮಾಯಾನಂದ ಸ್ವಾಮಿ! ಈ ಮೂಲಕ ಕಾವಿಯೂ ಲಾಭದಾಯಕ ಉದ್ದಿಮೆಯಾಗಿದೆ ಎಂಬುದನ್ನು ಸರ್ಕಾರವೇ ಜಗತ್ತಿಗೆ ಸಾರಿ ಹೇಳಿದೆ.

ಒಟ್ಟು 143 ಎಕರೆಯಲ್ಲಿ ಟೆಕ್ಸ್‌ಟೈಲ್ ಪಾರ್ಕ್‌ಗಾಗಿ 64 ಎಕರೆಯನ್ನು ಮೀಸಲಿರಿಸಲಾಗಿತ್ತು, ಜವಳಿ ಪಾರ್ಕ್ ನಿರ್ಮಿಸಿ ಸಂಕಷ್ಟದಲ್ಲಿರುವ ನೇಕಾರರನ್ನು ಉದ್ಧಾರ ಮಾಡುತ್ತೇವೆಂದು ಬೊಗಳೆ ಬಿಡಲಾಗಿತ್ತು, ಆದರೆ ತೀರಾ ಇತ್ತೀಚಿನವರೆಗೂ ಜವಳಿ ಉದ್ಯಮಕ್ಕೆ ಸಂಬಂಧಿಸಿದ ಯಾವೊಂದು ಚಟುವಟಿಕೆಯೂ ನಡೆದಿಲ್ಲ, ರೈತರ ಕೈಯಿಂದ


ಬಿಜೆಪಿ ಎಂ.ಪಿ. ಸಿದ್ದೇಶ್ವರ

ಕಸಿದುಕೊಂಡ ಭೂಮಿ ಹಾಗೇ ವ್ಯರ್ಥವಾಗಿ ಬಿದ್ದಿತ್ತು, ಹೀಗಿರುವಾಗ ರೈತರು ತಮ್ಮ ಭೂಮಿಯನ್ನು ತಮಗೆ ವಾಪಸ್ ಕೊಡಬೇಕೆಂದು ಪಟ್ಟು ಹಿಡಿದು ಹೋರಾಟ ತೀವ್ರಗೊಳಿಸಿದರು. ಇನ್ನು ತಡಮಾಡಿದರೆ ಕೋಟ್ಯಾಂತರ



ನ್ಯಾಯಕ್ಕಾಗಿ ಒತ್ತಾಯಿಸಿ ರೈತರ ಪ್ರತಿಭಟನೆ....

ಬೆಲೆಬಾಳುವ ಈ ಭೂಮಿ ತಮ್ಮ ಕೈತಪ್ಪಿ ಹೋಗುತ್ತದೆಂದು ಲೆಕ್ಕಹಾಕಿದ ಭ್ರಷ್ಟ ಅಧಿಕಾರಿಗಳು ಹಾಗೂ ರಾಜಕೀಯ ಪುಢಾರಿಗಳ ದುಷ್ಟಕೂಟ ಚುರುಕಾಗಿ ಕಾರ್ಯಪ್ರವೃತ್ತವಾಯಿತು. ತಮ್ಮ ಬೆಂಬಲಿಗರಿಗೆ ಒಂದಷ್ಟು, ಕಾಣಿಕೆ ಸಲ್ಲಿಸಿದವರಿಗೆ ಮತ್ತೊಂದಷ್ಟು ನಿವೇಶನಗಳನ್ನು ಮಂಜೂರು ಮಾಡಿಕೊಟ್ಟು ಕೈತೊಳೆದುಕೊಂಡರು.

ಹೀಗೆ ಕೈಗಾರಿಕಾ ಭೂಮಿ ಪಡೆದುಕೊಂಡವರಲ್ಲಿ ಬಹುತೇಕರಿಗೆ ಟೆಕ್ಸ್‌ಟೈಲ್ಸ್ ಜೊತೆಗೆ ಯಾವ ಸಂಬಂಧವೂ ಇಲ್ಲ, ಕೆಲವು ಉದಾಹರಣೆ ನೋಡಿ. ಶಾಹಿ ಇನ್‌ಫ್ರಾಟೆಲ್ ಟವರ್ ಪ್ರೈ ಲಿಮಿಟೆಡ್ ಎಂಬ ಕಂಪನಿಗೆ ಸುಮಾರು 5 ಎಕರೆ ಪ್ರದೇಶದಲ್ಲಿರುವ 10 ಕೈಗಾರಿಕಾ ನಿವೇಶನಗಳನ್ನು ನೀಡಲಾಗಿದೆ. ಅದರ ಕೆಲಸ ಮೊಬೈಲ್ ಟವರ್‌ಗಳನ್ನು ನಿರ್ಮಿಸುವುದು. ಕರೂರು ಚಿರಂಜೀವಿ ಇಂಟರ್‌ನ್ಯಾಷನಲ್ ಹೋಟೆಲ್‌ಗೆ ಎರಡು ಎಕರೆ ಭೂಮಿ ಕೊಡಲಾಗಿದೆ. ಇನ್ನು ವೆಲ್ಡಿಂಗ್ ಶಾಪ್, ಗ್ರಿಲ್‌ವರ್ಕ್ಸ್, ಆಟೋ ವರ್ಕ್ಸ್, ಇಂಜಿನಿಯರಿಂಗ್ ವರ್ಕ್ಸ್, ವುಡ್ ವರ್ಕ್ಸ್ - ಹೀಗೆ ನಾನಾ ಹೆಸರುಗಳಲ್ಲಿ ಸೈಟುಗಳು ಮುಂಜೂರಾಗಿವೆ. ಟೆಕ್ಸ್‌ಟೈಲ್ ಎಂಬ ಹೆಸರಿನಲ್ಲಿ ಕೆಲವು ಅರ್ಜಿದಾರರು ಸೈಟು ಪಡೆದಿದ್ದರೂ ಅವರಲ್ಲಿ ಬಹುತೇಕರಿಗೆ ಟೆಕ್ಸ್‌ಟೈಲ್ ಜೊತೆ ಯಾವ ಸಂಬಂಧವೂ ಇಲ್ಲ, ಇತ್ತೀಚೆಗೆ ಆ ಜಾಗದಲ್ಲಿ ಕೆಲವು ಕಟ್ಟಡ ನಿರ್ಮಾಣಕಾರ್ಯ ನಡೆಯುತ್ತಿದ್ದರೂ ಅವು ಯಾವ ಕೈಗಾರಿಕೆಗೆ ಎಂಬುದೇ ನಿಗೂಢ.

ಇಲ್ಲಿ ನಾವು ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ 2010ರ ಆಗಸ್ಟ್ 15ರಿಂದ ರೈತ ಸಂಘ ಹಾಗೂ ಹಸಿರುಸೇನೆಗಳ ನಾಯಕತ್ವದಲ್ಲಿ ಭೂಮಿ ವಾಪಸ್ ಪಡೆದುಕೊಳ್ಳುವ ಹೋರಾಟವನ್ನು ರೈತರು ಹಮ್ಮಿಕೊಂಡ ಸಂದರ್ಭದಲ್ಲಿ ಸುಮಾರು 50 ಎಕರೆ ಭೂಮಿ ಹಾಗೇ ಪಾಳುಬಿದ್ದಿತ್ತು, ಹೋರಾಟ ಚುರುಕಾದ ನಂತರವಷ್ಟೆ ತರಾತುರಿಯಲ್ಲಿ ಇದ್ದಬದ್ದ ನಿವೇಶನಗಳನ್ನೆಲ್ಲಾ ಸಿಕ್ಕಸಿಕ್ಕ ಪುಢಾರಿಗಳಿಗೆ, ಅವರ ಹಿಂಬಾಲಕರಿಗೆ ಜಿಲ್ಲಾಧಿಕಾರಿ ಅಮರನಾರಾಯಣನ ನೇತೃತ್ವದ ಅಧಿಕಾರಿಗಳ ಕೂಟ ಹಂಚಿಬಿಟ್ಟಿತು. ಬಹುತೇಕ ಈ ಎಲ್ಲಾ ಹಂಚಿಕೆಗಳು 2010 ಮತ್ತು 2011ರಲ್ಲೇ ನಡೆದಿವೆ.

ರೈತರ ಪರವಾಗಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ತೇಜಸ್ವಿ ಪಟೇಲ್, ಉಪಾಧ್ಯಕ್ಷ ವಸನದ ಓಂಕಾರಪ್ಪ, ಹಸಿರು ಸೇನೆಯ ಮುಖಂಡರಾದ ಪೂಜಾರ್ ಆಂಜನಪ್ಪ, ಮಂಡಿ ನಂಜಪ್ಪ, ನಯಾಜ್ ಅಹಮ್ಮದ್, ಸಾವಿತ್ರಮ್ಮ, ಸೈಯದ್ ಅಹಮ್ಮದ್, ಶಾವಗಿ ಬಸಣ್ಣ, ಪ್ರಭುಗೌಡ, ಶಂಬಣ್ಣ ಮುರುಗೇಂದ್ರ ಮತ್ತಿತರರು ದೃಢವಾಗಿ ನಿಂತಿದ್ದಾರೆ. ಕಳೆದ ಗಣೇಶ ಚತುರ್ಥಿಯಂದು ಒಂದು ವಿನೂತನ ಹೋರಾಟದ ಮಾದರಿಯನ್ನು ಹಮ್ಮಿಕೊಂಡಿದ್ದಾರೆ. ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ತಿಲಕ್ ರೂಪಿಸಿದ್ದ ಹೋರಾಟ ಮಾದರಿಯಿಂದ ಪ್ರೇರಣೆ ಪಡೆದು ಹೋರಾಟದ ಟೆಂಟ್‌ನಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಿದ್ದಾರೆ. ರೈತರಿಗೆ ನ್ಯಾಯ ಸಿಗುವವರೆಗೂ ಗಣೇಶನನ್ನು ವಿಸರ್ಜಿಸುವುದಿಲ್ಲವೆಂಬ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ.

ಇದಕ್ಕೆ ಪ್ರತಿಯಾಗಿ ದಾವಣಗೆರೆ ಡಿಸಿ ಪಟ್ಟಣಶೆಟ್ಟಿ ಭೂಗಳ್ಳರ ಪರವಾಗಿ ದೃಢವಾಗಿ ನಿಂತಿದ್ದಾನೆ. ಸ್ವಾಧೀನಪಡಿಸಿಕೊಂಡ ಜಾಗದಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡಲು ಸಾಧ್ಯವಾಗದಿದ್ದರೂ, ಯಾವುದೇ ಕಾರಣಕ್ಕೂ ಭೂಮಿಯನ್ನು ವಾಪಸ್ ಕೊಡಲಾಗುವುದಿಲ್ಲ, ಬದಲಿಗೆ ಕೆಐಎಡಿಬಿ ಸದ್ಯದಲ್ಲೇ ಬೆಂಗಳೂರಿನಲ್ಲಿ ಸಭೆ ಸೇರಿ, ರೈತರಿಗೆ ಕೊಡಬೇಕಾದ ಪರಿಹಾರ ಮುಂತಾದ ವಿಷಯಗಳನ್ನು ಚರ್ಚಿಸಲಿದೆ ಎಂದಿದ್ದಾನೆ. ಬೇಲಿಯೇ ಎದ್ದು ಹೊಲ ಮೇಯುವ ಪರಿಸ್ಥಿತಿ ದಾವಣಗೆರೆಯಲ್ಲಿದೆ.

ಭ್ರಷ್ಟ ಅಧಿಕಾರಿಗಳಿಗೆ ಬೆನ್ನೆಲುಬಾಗಿ ಭ್ರಷ್ಟ ರಾಜಕಾರಣಿಗಳು ನಿಂತಿದ್ದಾರೆ. ಉದಾಹರಣೆಗೆ ಇದೇ ಎಂಪಿ ಸಿದ್ದೇಶ್ವರನನ್ನೇ ತೆಗೆದುಕೊಳ್ಳಿ. ಈತ ಎಂಪಿ ಫಂಡ್‌ನ್ನು ದುರುಪಯೋಗಪಡಿಸಿಕೊಂಡ ಆರೋಪ ಎದುರಿಸುತ್ತಿದ್ದಾನೆ. 77.5 ಲಕ್ಷ ರೂಪಾಯಿಗಳ ಮೊತ್ತದ ಕಾಮಗಾರಿ ಗುತ್ತಿಗೆಯನ್ನು ತನ್ನದೇ ಜಿಎಂಐಟಿ ಸಂಸ್ಥೆಗೆ ಮುಂಜೂರು ಮಾಡಿಸಿಕೊಂಡು ಸಿಕ್ಕಿಬಿದ್ದು ಕೇಸು ಎದುರಿಸುತ್ತಿದ್ದಾನೆ.

ಇಂಥಾ ಸಿದ್ದೇಶ್ವರನ ಕುಟುಂಬದ ಇಂಜಿನಿಯರಿಂಗ್ ಕಾಲೇಜು ಕಟ್ಟಡವನ್ನು ಉದ್ಘಾಟಿಸಲು 2008ರಲ್ಲಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಮಾನ್ಯ ಅಡ್ವಾಣಿಯವರೇ ಬಂದಿದ್ದರು. ಅಡ್ವಾಣಿಯವರು ಆ ಸಮಾರಂಭದಲ್ಲಿ ಸಿದ್ದೇಶ್ವರ ಮತ್ತು ಅವರ ತಂದೆಯ ಸಮಾಜ ಸೇವೆಯನ್ನು ಹೊಗಳಿದ್ದೇ ಹೊಗಳಿದ್ದು. ಅವರ ಅಭಿವೃದ್ಧಿ ಕಾರ್ಯಗಳನ್ನು ಕೊಂಡಾಡಿದ್ದೇ ಕೊಂಡಾಡಿದ್ದು. ಆದರೆ ಇವರ ಒಳಹೂರಣ ನೋಡಿದರೆ ಹತ್ತಿಯ ಹಣ್ಣನ್ನು ಬಿಚ್ಚಿನೋಡಿದಂತೆ ಎಂಬುದು ಈಗ ಬಟಾಬಯಲಾಗಿದೆ. ಒಟ್ಟಾರೆ ಇಡೀ ಪ್ರಕರಣವನ್ನು ಗಮನಿಸಿದರೆ ಕರೂರು ಪ್ರದೇಶದ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿರುವುದೇ ಸಿದ್ದೇಶ್ವರನ ಕುಟುಂಬಕ್ಕೆ ಲಾಭ ಮಾಡಿಕೊಳ್ಳಲಿಕ್ಕಾಗಿ ಎನ್ನಲು ಯಾವುದೇ ಅಡ್ಡಿಯಿಲ್ಲ.

ಹೇಗೂ ಚುನಾವಣೆಗಳು ಹತ್ತಿರ ಬರುತ್ತಿರುವುದರಿಂದ ದಾವಣಗೆರೆಯ ಪ್ರಜ್ಞಾವಂತ ಜನತೆ ಇಂಥಾ ಭ್ರಷ್ಟರಿಗೆ ತಕ್ಕ ಪಾಠ ಕಲಿಸಲು ಸಜ್ಜಾಗುತ್ತಿದ್ದಾರೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅಡಿಗೆ 27 ರೂಪಾಯಿ


ಈ ಕರೂರು ಕೈಗಾರಿಕಾ ಪ್ರದೇಶವೆಂಬುದು ನಗರಕ್ಕೆ ಅಂಟಿಕೊಂಡಿರುವ, ಪುಣೆ -ಬೆಂಗಳೂರು ಹೈವೇಯಲ್ಲಿರುವ ಹಾಟ್‌ಸ್ಪಾಟ್. ಆ ಪ್ರದೇಶದಲ್ಲಿ ಒಂದು ಚದರ ಅಡಿಯ ಬೆಲೆ 1000 ರೂ.ಗಳಿಂದ 1200 ರೂ.ಗಳವರೆಗೂ ಇದೆ. ಅಂದರೆ ಒಂದು 30 X 40 ನಿವೇಶನದ ಬೆಲೆ ಅಂದಾಜು 12 ರಿಂದ 15 ಲಕ್ಷಕ್ಕೂ ಹೆಚ್ಚು. ಇಂಥಾ ಭೂಮಿಯನ್ನು ಸಿದ್ದೇಶ್ವರ ಅಂಡ್ ಗ್ಯಾಂಗ್ ಎಷ್ಟು ಬೆಲೆಗೆ ಹೊಡೆದಿರಬಹುದು? ನೀವು ಊಹಿಸಲೂ ಸಾಧ್ಯವಿಲ್ಲ.

2006 ಮೇನಲ್ಲೇ ಎಂಪಿ ಸಿದ್ದೇಶ್ವರ ನಾಯಕತ್ವದಲ್ಲಿ ಕೆಲವು ವ್ಯಾಪಾರಿಗಳ ಗುಂಪೊಂದು ಲಾಬಿ ನಡೆಸಿತ್ತು, ಈ ಲಾಬಿಕೋರರು ಮೊದಲು ಉಪಮುಖ್ಯಮಂತ್ರಿ ಯಡ್ಡಿ ಹಾಗೂ ಕೈಗಾರಿಕಾ ಸಚಿವ ಕಟ್ಟಾನನ್ನು ಬುಕ್ ಮಾಡಿಕೊಂಡು ಸಿಎಂ ಕುಮಾರಸ್ವಾಮಿಯ ಮನವೊಲಿಸಲು ಕಸರತ್ತು ನಡೆಸಿದ್ದರು.


2007ರ ಫೆಬ್ರವರಿಯಲ್ಲಿ ಇದೇ ಲಾಬಿಕೋರ ಗುಂಪು ಕೈಗಾರಿಕಾ ಮಂತ್ರಿ, ಕಟ್ಟಾ ಮತ್ತು ಅಪ್ಪು ಪಟ್ಟಣಶೆಟ್ಟಿಯವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಆ ಮಾತುಕತೆಯಲ್ಲಿ ಏನೇನು ಡೀಲ್ ನಡೆಯಿತೋ ದೇವರೇ ಬಲ್ಲ, ಮಾತುಕತೆಯ ನಂತರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಿದ್ದೇಶ್ವರ ತಮ್ಮ ಭೇಟಿ ಫಲಪ್ರದವಾಗಿತ್ತೆಂದೂ, ಸರ್ಕಾರ ಉದ್ದಿಮೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕೈಗಾರಿಕಾ ನಿವೇಶನದ ಬೆಲೆಯನ್ನು ಒಂದು ಚದರ ಅಡಿಗೆ 35 ರಿಂದ 27ಕ್ಕೆ ಇಳಿಸಲು ಒಪ್ಪಿಕೊಂಡಿದೆಯೆಂದೂ ಹೇಳಿದ್ದರು. ಆದರೆ ನೆನಪಿಡಿ. 2007ರಲ್ಲಿ ಈ ಪ್ರದೇಶದಲ್ಲಿ ಸೈಟಿನ ಮಾರುಕಟ್ಟೆ ಬೆಲೆ ಏನಿಲ್ಲವೆಂದರೂ 800ರಿಂದ 1000 ರೂಪಾಯಿಗಳಷ್ಟಿತ್ತು. ಹಾಗಾದರೆ ಪಡೆದ ಗೋಲ್‌ಮಾಲ್‌ನ ಪ್ರಮಾಣವೆಷ್ಟು ಎಂಬುದನ್ನು ನೀವೇ ಊಹಿಸಿ.

ಇನ್ನೂ ಒಂದು ಸ್ವಾರಸ್ಯಕರ ಸಂಗತಿಯೇನೆಂದರೆ ತನ್ನ ಕಾವಿ ಕೈಗಾರಿಕೆಗಾಗಿ 2 ಎಕರೆ ಭೂಮಿ ಅಲಾಟ್ ಮಾಡಿಸಿಕೊಂಡಿದ್ದ ಸ್ವಾಮಿ ಆ ಜಾಗವನ್ನು ಕೋಟಿಗಟ್ಟಲೆ ಬೆಲೆಗೆ ಮಾರಿಕೊಂಡಿದ್ದಾನೆ ಎಂದು ಇದೇ ಸಂತ್ರಸ್ತ ರೈತರು ಆರೋಪಿಸುತ್ತಿದ್ದಾರೆ. ಹೇಗಿದೆ ಅಭಿವೃದ್ಧಿಯ ವರಸೆ?

ಹೊನ್ನಾವರ: ಮುನ್ಸಿಪಾಲ್ಟಿ ಅಧ್ಯಕ್ಷನ 'ಅಡ್ಡೆ' ಆರ್ಭಟ!



ರವಿನಾಯ್ಕನ ಗ್ರಹಚಾರ ಕೆಡವುದುಕ್ಕೂ, ಆತನಿಗೆ ಸಹಕರಿಸುತ್ತಿದ್ದ ಡಿಎಸ್‌ಪಿ, ಸಿಪಿಐ, ಪಿಎಸ್‌ಐಗಳು ವರ್ಗವಾಗಿ ಹೋಗುವುದಕ್ಕೂ ಸರಿಯಾಗಿದೆ, ಪಾಪ!! ಹೊಸದಾಗಿ ಬಂದ ಪಿಎಸ್‌ಐ ಅಂತೋನಿ ಜೋಯ್ ರವಿ ನಾಯ್ಕ ಮುನ್ಸಿಪಾಲ್ಟಿ ಅಧ್ಯಕ್ಷನೆಂದಾಗಲಿ, ಆತನ ಹಣದ ಚೀಲಕ್ಕಾಗಲಿ ಮರುಳಾಗಲಿಲ್ಲ. ಇದಕ್ಕೆ ಕಾರಣ ಅಣ್ಣನಿಗಿಂತ ತಮ್ಮನ ತೂಕವೇ ಜಾಸ್ತಿಯಾಗಿತ್ತು. ಹೊನ್ನಾವರದಲ್ಲಿ ಇನ್ನೂ ಮೂರ್‍ನಾಲ್ಕು ಜುಗಾರಿ ಕ್ಲಬ್‌ಗಳು ಅಹೋರಾತ್ರಿ ನಡೆಯುತ್ತಿವೆ; ಅದೆಲ್ಲ ಕಂಡೂ ಕಾಣದಂತೆ ರವಿನಾಯ್ಕನ ಅಡ್ಡೆ ಮೇಲಷ್ಟೇ ಏಕೆ ಪಿಎಸ್‌ಐ ಅಂತೋನಿ ಜೋಯ್ ಮುಗಿಬಿದ್ದರು? ಇದು ಅಸ್ನೋಟಿಕರ್‌ನ ಮಂತ್ರಿಗಿರಿ ಮಸಲತ್ತಾ? ಸುದೇಶನ ಹಣದ ಹಿಕಮತ್ತಾ?



ಶರಾವತಿ ನದಿ-ಅರಬ್ಬೀ ಸಮುದ್ರ ...ನಿವೆ" ನಗರಿ ಹೊನ್ನಾವರ ಕಂಗಾ...ಗಿ ಕೂತಿದೆ! ಮೂಗರ್ಜಿಗಳ ...ದರ ತಾಲ್ಲೂಕು ಎನಿಸಿದ್ದ ಈ ...ಹೊನ್ನಾವರ ಈಗ ತರಹೇವಾರಿ ...ಡರ ಆಡಂಬೋಲದಂತಾಗಿದೆ. ...ಯಂಡ್ ಮಾಫಿಯಾ, ಸ್ಯಾಂಡ್ ...ಮಾಫಿಯಾ, ಸಿಲಿಕಾ ಮರಳು ...ಫಿಯಾ, ಹೈಟೆಕ್ ದೇಹೋದ್ಯಮ ...ಫಿಯಾ, ಇಸ್ಪೀಟ್-ಮಟ್ಕಾ-ಕೋಳಿ ...ಕ ಮಾಫಿಯಾ, ಹಿಂದೂತ್ವ ...ಮಾಫಿಯಾ.... ಒಂದೊಂದು ...ಯಿಂದ ಹೊನ್ನಾವರವನ್ನು ಹಿಡಿದು ...ಕುಕ್ಕುತ್ತಿವೆ. ಈ ಶನಿ ಸಂತಾನವನ್ನು ...ಟ್ಟಿಹಾಕಬೇಕಿದ್ದ ಅಧಿಕಾರಿಗಳು ಪಾಲಿಗೆ ...ಬಿದ್ದೇ ಪಂಚಾಮೃತ ಅನ್ನುತ್ತ ದೋ ನಂಬರಿಗಳು ...ಚ್ಚಿಪ್ಪಕ್ಕೆ ನಾಲಿಗೆಯೊಡ್ಡಿ ಕೃತಾರ್ಥರಾಗುತ್ತಿದ್ದಾರೆ!

ಸದ್ಯಕ್ಕೆ ಹೊನ್ನಾವರವನ್ನು ಬೆಚ್ಚಿ ಬೀಳಿಸಿರುವಾತ ನಗರದ ...ತೆವೆತ್ತ ಪ್ರಥಮ ಪ್ರಜೆ; ಅರ್ಥಾತ್ ಪಟ್ಟಣ ಪಂಚಾಯತ್ ...ಕ್ಷ ರವೀಂದ್ರ ಶಿವಪ್ಪನಾಯ್ಕ್ ಎಂಬ ಅಡ್ಡಕಸುಬಿ. ಈ ...ನಾಯ್ಕನ "ಫ್ರೆಂಡ್ಸ್ ಕ್ಲಬ್" ಎಂಬ ಇಸ್ಪೀಟು ಅಡ್ಡೆ ...ಲೆ ಪೊಲೀಸರು ರೇಡು ಹಾಕುತ್ತಿದ್ದಂತೆಯೇ ಆತನ ...ಳಿ ಅವತಾರ, ಕೌಟುಂಬಿಕ ಕಲಹವನ್ನೆಲ್ಲ ಬೀದಿಗೆ ...ದು ನಿಲ್ಲಿಸಿದೆ. ಅಷ್ಟೇ ಅಲ್ಲ, ತಾಲ್ಲೂಕಿನ ಅಷ್ಟೂ ...ದಲ್ಲಿನ ಮಾಫಿಯಾ ಮುಖಂಡರ ಬಣ್ಣ ಬಯಲಾಗಿಸಿದೆ!

ರವಿನಾಯ್ಕ ಪ್ರಸಿದ್ಧಿಗೆ ಬಂದಿದ್ದೇ ಮೀಟರ್ ಬಡ್ಡಿ ...ನಾನ್ಸ್- ಇಸ್ಪೀಟ್ ಕ್ಲಬ್- ಬಾರ್ ಎಂಬ ತ್ರಿವಿಧ ಸಮಾಜ ...ವೆಯ ಮೂಲಕ. ಮೊದಲು ಈ ಬಡ ಪ್ರಾಥಮಿಕ ...ಲೆ ಮಾಸ್ತರನ ಮಗ ಶುರು ಮಾಡಿದ್ದು "ಪೂಜಾ ...ನಾನ್ಸ್" ಎಂಬ ಬಡ್ಡಿ ದಂಧೆ. ಈತನಿಗೆ ಸಾಥ್ ...ಟ್ಟವನು ಸದಾನಂದ ಭಟ್ಟನೆಂಬ ಪುರೋಹಿತ ಮಾಣಿ. ...ನಾಯ್ಕನ ಖಾಸಾ ತಮ್ಮ ಸುದೇಶ್ ನಾಯ್ಕ ಎಂಬ ...ತಂಡ ಕುಳ್ಳನೂ ಈ ಉದ್ಯಮದ ಪಾಲುದಾರನಾಗಿದ್ದ. ...ದೇಶನ 'ಮತ್ತೊಂದು' ಉದ್ಯಮವೂ ಕಿಂತಾಲಕೇರಿಯ ...ನಾನ್ಸ್ ಕಚೇರಿಯಲ್ಲೇ ನಡೆಯುತ್ತಿತ್ತು.

ಫೈನಾನ್ಸ್ ವ್ಯವಹಾರದ ಕಪ್ಪು ಕಾಸಿಂದ ರವಿನಾಯ್ಕ, ...ನಂದ ಭಟ್ಟ ಮತ್ತು ಸುದೇಶ್ ನಾಯ್ಕಗೆ ಒಂಥರಾ ...ಮಾನಕ ಗಣ್ಯತ್ವ ಬಂದು ಬಿಟ್ಟಿತು! ಸಣ್ಣ ಸೈಜಿನ ...ಂಡಾಗಳಂತಾಡುತ್ತ ಯಾರ್‍ಯಾರದೋ ಖಾಸಗಿ ವ್ಯಾಜ್ಯಗಳಲ್ಲಿ ...ಚುರಾಗಿ ಭಾಗವಹಿಸತೊಡಗಿದರು; ಪೊಲೀಸ್ ಠಾಣೆಗಳಲ್ಲಿ ...ಧ್ಯವರ್ತಿಯಾದರು. ನಿಧಾನಕ್ಕೆ ರವಿ- ಸದಾ ಜೋಡಿ ...ಜಕಾರಣಕ್ಕೆ ಹೊರಳಿದರೆ, ಸುದೇಶನಿಗೆ ದೇಹ ದಾಹದ ...ಧೆ ಆಕರ್ಷಕವಾಗಿ ಕಾಣಿಸಿತು. ಈ ಸುದೇಶ್ 'ಮಿಸ್ ...ವಳಿ' ಎಂಬ ವಿಕೃತ ಇವೆಂಟ್ ನಡೆಸುವ ಮೂಲಕ ...ಮಾಯಕ ಹುಡುಗಿಯರ, ಅವರ ತಾಯಂದಿರ ಕಾಂಟೆಕ್ಟ್‌ಗೆ ...ಣಿಸಿದ. ಸಿನೆಮಾರಂಗದ ಬೋಳು ತಲೆಯ ರಸಿಕ ...ಗೀತ ನಿರ್ದೇಶಕನೊಬ್ಬನ ಸಹವಾಸಕ್ಕೆ ಬಿದ್ದ ಸುದೇಶನ ...ಗ್ಗೆ ರಂಗುರಂಗಿನ ಕತೆಗಳು ಹರಿದಾಡತೊಡಗಿತು.

ಯಲ್ಲಾಪುರ ಕಡೆಯ ಶ್ರೀಮಂತ ಬ್ರಾಹ್ಮಣ ...ಹುಡುಗಿಯೊಬ್ಬಳನ್ನು 'ಹಠ ವಿವಾಹ'ವಾದ ಸುದೇಶನಿಗೆ ಆಕೆಯ ಅಪಾರ ಹಣ ಮತ್ತು ನಿಗೂಢ ದಂಧೆ ಲಿಂಕುಗಳು 'ಡಾನ್' ಇಮೇಜ್ ನೀಡಿತು. ಇದಕ್ಕೆ ತಕ್ಕಂತೆ ವಿಚಿತ್ರ ವೇಷ- ಭೂಷಣ- ಶೇಂಕಾರದ ನಡೆ-ನುಡಿ ರೂಢಿಸಿ ಕೊಂಡುಬಿಟ್ಟ ಬರ್ಮುಡಾ ಸುದೇಶ್. ಇತ್ತ ರವಿ ಮತ್ತು ಸದಾ ಫೈನಾನ್ಸ್ ಪೈಸಾ ಬಲದಿಂದ ಮುನ್ಸಿಪಾಲ್ಟಿ ಇಲೆಕ್ಷನ್‌ಗೆ ನಿಂತು ಗೆದ್ದೂ ಬಿಟ್ಟರು. ಭಟ್ಟ ಸಹಜವಾಗೇ ಜನಿವಾರಿಗಳ ಬಿಜೆಪಿ ಸೇರಿದರೆ, ರವಿ ಕಾಂಗ್ರೆಸ್ಸಿನ ಗೆಟಪ್‌ನಿಂದ ಅಂಡಲೆಯಲಾರಂಭಿಸಿದ.

ಪಟ್ಟಣ ಪಂಚಾಯ್ತಿ ಅಧ್ಯಕ್ಷ ಆಯ್ಕೆ ಪ್ರಕ್ರಿಯೆ ಆರಂಭವಾದಾಗ ಈ ದೋಸ್ತಿಗಳ ನಡುವೆ ಸಣ್ಣಗೆ ಮನಸ್ತಾಪ ಹೊಗೆಯಾಡಲು ಶುರುವಾಯ್ತು. ಸ್ಪಷ್ಟ ಬಹುಮತ ಯಾವ ಪಕ್ಷಕ್ಕೂ ಪ.ಪಂ.ನಲ್ಲಿ ಸಿಕ್ಕಿರಲಿಲ್ಲ. ಈ ದುರಂತ ಪರಿಸ್ಥಿತಿಯಲ್ಲಿ ಕಾಸಿದ್ದವನೇ ಬಾಸು ಆಗುವಂತಾಗಿತ್ತು. ಬಿಜೆಪಿ ಮಾಜಿ ಶಾಸಕ ಡಾ. ಎಂ.ಪಿ.ಕರ್ಕಿಯಂಥ ಮರ್ಯಾದಸ್ತರೇ ಕಳ್ಳ ಹಣದ ಸದಾನಂದ ಭಟ್ಟನ ಪರ-ವಕಾಲತ್ತಿಗಿಳಿದರು. ಆತ ಹಣ ಹರಿಸಿ ಬಿಜೆಪಿಯ ಹಿರಿಯ ಸದಸ್ಯರನ್ನೆಲ್ಲ ಮೂಲೆಗೊತ್ತಿ ಅಧ್ಯಕ್ಷನಾದ. ಜತೆಗೆ ಗೆಳೆಯನ 'ಆಟ' ಕಾಂಗ್ರೆಸಲ್ಲಿ ನಡೆಯದಂತೆಯೂ ಮಾಡಿದ. ಸದಾನಂದ ಭಟ್ಟನ ಅಧ್ಯಕ್ಷ ಅವಧಿ ಮುಗಿಯುವ ಹೊತ್ತಿಗೆ ರವಿ ನಾಯ್ಕ ಆತನಿಂದ ದೂರಾಗಿದ್ದ. ಅಲ್ಲಿಗೆ ಪೂಜಾ ಫೈನಾನ್ಸೂ ಮುಚ್ಚಿಹೋಯ್ತು.

ಎರಡನೇ ಅವಧಿ ಅಧ್ಯಕ್ಷರಾಯ್ಕೆಯಲ್ಲೂ ಮತ್ತೆ ಹಣದ ಹಣಾಹಣಿಯೇ ನಡೆಯಿತು. ಸದಾನಂದ ಭಟ್ಟನಂತೆ ರವಿಯೂ ಪೂಜಾ ಫೈನಾನ್ಸ್‌ನ ಪ್ರಸಾದವನ್ನು ಮೆಂಬರ್‌ಗಳಿಗೆ ಹಂಚಿ ಅಧ್ಯಕ್ಷ ಕುರ್ಚಿ ಖರೀದಿಸಿ ಕೊಂಡ. ಹಾಕಿದ ದುಡ್ಡು ತೆಗೆಯ ಬೇಡವೇ ಅಧ್ಯಕ್ಷ ಮಹಾಶಯರು? ಮುನ್ಸಿಪಾಲ್ಟಿ ಯಲ್ಲಿ ಹಗಲು ದರೋಡೆ ಆಗಲಾ ರಂಭಿಸಿತು. ಪರ್ಸೆಂಟೇಜ್ ಮಹಿಮೆ ಯಿಂದ ಕಳಪೆ ಕಾಮಗಾರಿ ರಾಜಾ ರೋಷವಾಗಿ ನಡೆದುಹೋಗ ಹತ್ತಿತು. ಈ ಅಧ್ಯಕ್ಷಗಿರಿ 'ದಂಧೆ' ಜತೆಗೇ 'ಕ್ವಾಲಿಟಿ ಬಾರ್' ನಡೆಸುವ ಕಸುಬು ರವಿ ಮಾಡ ತೊಡಗಿದ. ಆದರೆ ಬಾರ್ ವ್ಯವಹಾರದಲ್ಲಿ ಬರ್ಕತ್ತಾಗಲಿಲ್ಲ. ಆಗ ಆರಂಭವಾಗಿದ್ದೇ 'ಫ್ರೆಂಡ್ಸ್ ಕ್ಲಬ್' ಎಂಬ ಭರ್ಜರಿ ಇಸ್ಪೀಟ್ ಜೂಜಾಟದ ಅಡ್ಡೆ.



ಸದ್ರಿ ಜುಗಾರಿ ಆಟ ನಗರದ ಹೃದಯ ಭಾಗದ ಕಿಂತಾಲಕೇರಿಯ ಬೊಮ್ಮಾರ್ ಮಾಣಿ ಕಾಂಪ್ಲೆಕ್ಸ್ ಮಾಳಿಗೆ ಮೇಲೆ ಹಗಲಿರುಳೂ ನಡೆಯುತ್ತಿತ್ತು. ಮೊದಲು 'ಪೂಜಾ ಫೈನಾನ್ಸ್' ಇದ್ದದ್ದು ಇಲ್ಲೇ. ಸಮಾಜ ಸೇವೆಗೆಂದು ತನ್ನ ಗೆಳೆಯರ ಬಳಗದೊಂದಿಗೆ ಸೇರಿ ನಿಯಮದಂತೆ ಮಾಡಿಕೊಂಡ ರಿಕ್ರಿಯೇಷನ್ ಕ್ಲಬ್ ಇದೆಂದು ರವಿ ಪೆದ್ದು-ಪೆದ್ದಾಗಿ ಕುತರ್ಕ ಮಂಡಿಸುತ್ತಾನೆ. ಆದರೆ ಇಡೀ ಹೊನ್ನಾವರ ಇದು ಪಕ್ಕಾ 'ಜುಗಾರಿ ಕ್ರಾಸ್' ಎಂದು ಯಾವ ದೇವರ ಮೇಲೆ ಬೇಕಿದ್ದರೂ ಆಣೆ ಮಾಡಿ ಹೇಳಲು ಸಿದ್ಧವಿದೆ! ಅಷ್ಟೇ ಅಲ್ಲ 'ಹತ್ತು ಬಾರಿ ಕದ್ದ ಕಳ್ಳ ಒಂದ್ಸಲಾ ಆದ್ರೂ ಸಿಕ್ಕಿ ಬೀಳೋದಿಲ್ವಾ...' ಎಂದು ಖುಷಿಯಿಂದ ಹೊನ್ನಾವರಿಗರು ಉದ್ಗರಿಸುತ್ತಾರೆ!

ಇದಕ್ಕೆ ಕಾರಣವೂ ಇದೆ. ಮುನ್ಸಿಪಾಲ್ಟಿ ಅಧ್ಯಕ್ಷ ಸಾಹೇಬರ ಈ 'ಪೂಜಾ ಇಸ್ಪೀಟ್ ಕ್ಲಬ್' ಮೇಲೆ ಪೊಲೀಸ್ ದಾಳಿ ಆಗಿರುವುದು ಇದೇ ಮೊದಲ ಸಲವೇನೂ ಅಲ್ಲ. ಮೊನ್ನೆ ಆಗಿರುವ ರೇಡು ಬರೋಬ್ಬರಿ ಮೂರನೇಯದು. ಆರೆಂಟು ತಿಂಗಳ ಹಿಂದೊಮ್ಮೆ ಪೂಜಾ ಕ್ಲಬ್‌ಗೆ ಭಟ್ಕಳ ವಿಭಾಗದ ಡಿಎಸ್‌ಪಿ ಆಗಿದ್ದ ಎಂ.ನಾರಾಯಣ ಎಂಬ ಶೋಮ್ಯಾನ್ ತನ್ನ ಸಿಪಿಐ, ಪಿಎಸ್‌ಐ, ಪೊಲೀಸ್ ಪೇದೆಗಳ ಪಡೆಯೊಂದಿಗೆ ನುಗ್ಗಿದ್ದ! ಆಗ ಜೂಜು ನಿರತ ಮುನ್ಸಿಪಾಲ್ಟಿ ಅಧ್ಯಕ್ಷ ರವಿ ನಾಯ್ಕನ ಬಂಧನ ಎಂಬ ಸುದ್ದಿಯೂ ಟಿವಿಯಲ್ಲಿ ಫ್ಲಾಶ್ ಆಗಿತ್ತು. ಹೊನ್ನಾವರ ದಾದ್ಯಂತ ಮುನ್ಸಿಪಾಲ್ಟಿ ಅಧ್ಯಕ್ಷನ ಅಂದರ್-ಬಾಹರ್ ದಂಧೆಗಳ ಬಗ್ಗೆ ರೋಚಕ ಚರ್ಚೆ ಶುರುವಾಗಿತ್ತು. ಇತ್ತ ರವಿ ನಾಯ್ಕ ಡಿಎಸ್‌ಪಿ ನಾರಾಯಣ ರಾಯರ ಎರಡೂ ಪಾದ ಹಿಡಿದು ಬಚಾಯಿಸುವಂತೆ ಗೋಳಾಡುತ್ತಿದ್ದ; ಜತೆ ಜತೆಗೆ ಕೇಸ್ ಹಾಕದಿದ್ದರೆ ಕಾಣಿಕೆ ಕೊಡುವ ಡೀಲೂ ನಡೆಸಿದ್ದ. ಪೊಲೀಸರು ಇದ್ದಕ್ಕಿದ್ದಂತೆ ಖದರು ಕಳಕೊಂಡಿದ್ದರು.

ರವಿನಾಯ್ಕನ ಥೈಲಿ ಎದುರು ಕರ್ತವ್ಯ ಕಡೆಗಣಿಸಿದ ಲಂಚಬಡುಕ ಪೋಲೀಸರು ಪವಾಡ ಮಾಡಿದರು. ಕಾಸೂ ಬೇಕು; ಕೇಸೂ ಬೇಕು ಎಂಬ ಡ್ಯೂಟಿ ಕಾನ್ಸಿಯಂಸ್‌ನೆಸ್ ಮೆರೆದಿದ್ದರು. ರವಿನಾಯ್ಕ ಮತ್ತವನ ಪ್ರತಿಷ್ಠಿತ ಮಿತ್ರರ ಬದಲಿಗೆ ಅಡ್ಡೆಯಲ್ಲೇ ಇಲ್ಲದ ಪಾಪದ ಹಾಲಕ್ಕಿ, ಒಕ್ಕಲಿಗ ಹುಡುಗರ ಮೇಲೆ ಕೇಸ್ ಫಿಕ್ಸ್ ಮಾಡಲಾಗಿತ್ತು. ಆಗ ಅಣ್ಣ ರವಿಯನ್ನು ಬಚಾಯಿಸಿದ್ದು ರಸಿಕ ಪೊಲೀಸ್ ಅಧಿಕಾರಿಗಳು ಮತ್ತು ರಂಗೀಲಾ ಮಂತ್ರಿ ಆನಂದ್ ಅಸ್ನೋಟಿಕರ್‌ನ ಜತೆ ಸಪ್ಪೆಸಂಪರ್ಕವಿದ್ದ ತಮ್ಮ ಬರ್ಮುಡಾ ಸುದೇಶ್. ಈ ನಕಲಿ ರೇಡ್ ಬಳಿಕ ರವಿಯ ಅಡ್ಡೆ ದುರ್ಗಾಕೇರಿಗೆ ಸ್ಥಳಾಂತರಗೊಂಡಿತ್ತು. ಆತನ ಕಾಸಿನ ರುಚಿ ಹತ್ತಿದ್ದ ಪೊಲೀಸರು ಅಲ್ಲೂ ದಾಳಿ ಮಾಡಿ ಮಾಮೂಲಿ ಹೆಚ್ಚಿಸಿಕೊಂಡಿದ್ದರು. ಆಗಲೂ ತಮ್ಮ ಬರ್ಮುಡಾ ಸುದೇಶನೇ ಅಣ್ಣನ ಅಡ್ಡೆಯ ದಲ್ಲಾಳಿಗಿರಿ ನಿಭಾಯಿಸಿದ್ದ.

ಈ ಅವಳಿ ರೇಡ್ ಪ್ರಹಸನದ ನಂತರ ಅಣ್ಣ-ತಮ್ಮರ ನಡುವೆ ಅದೇನು ಎಡವಟ್ಟಾಯಿತೋ ಏನೋ? ಪರಸ್ಪರ ಪರಮ ವೈರಿಗಳಾಗಿ ಹೋದರು. ಕಾಲೇಜು ರಸ್ತೆಯಲ್ಲಿರುವ ತನ್ನ ಫ್ಲಾಟ್ 'ದಂಧೆ'ಗೆ ಬಳಸಿಕೊಂಡು ಅಪ್ಪನ ಮನೆಯ ಅಟ್ಟ ಏರುವ ಆಸೆ ಸುದೇಶನದಾಗಿತ್ತು. ಆದರೆ ಹೈಗರ ಹುಡುಗಿಯನ್ನು ಹಾರಿಸಿಕೊಂಡು ಬಂದು ಮದುವೆಯಾದಾಗ ಮನೆಯಿಂದ ಹೊರದಬ್ಬಿದ್ದ ಅಪ್ಪ- ಅಣ್ಣ ಮರಳಿ ಸೇರಿಸಿಕೊಳ್ಳಲು ಸಿದ್ಧರಿರಲಿಲ್ಲ. ಅಣ್ಣನ ಪಳಗಿಸಲು ಸುದೇಶ ತರತರದ ತಂತ್ರ ಮಾಡಿದರೂ ಪ್ರಯೋಜನ ಆಗಲಿಲ್ಲ. ಆಗಾತ ಸೇಡಿಗೆ ಬಿದ್ದ. ಅಣ್ಣನ ಉದ್ಯಮ ಕಟ್ ಮಾಡಿ ದಗಲುಬಾಜಿ ಮುನ್ಸಿಪಾಲ್ಟಿ ಅಧ್ಯಕ್ಷನೆಂದು ಬಿಂಬಿಸಿ ಸಾರ್ವಜನಿಕವಾಗಿ ಆತನಿಗೆ ಅಪಮಾನ ಮಾಡಲು ಆತ ಸ್ಕೆಚ್ ಹಾಕಿದ. ತನಗಿರುವ ರಾಜಕೀಯ ಕಾಂಟೆಕ್ಟ್‌ಗಳನ್ನು ಪ್ರಯೋಗಿಸಿ ಅಣ್ಣ ರವಿ ನಾಯ್ಕ ಯಾನೆ ಪ.ಪಂ. ಪ್ರೆಸಿಡೆಂಟ್ ಸಾಹೇಬರ ಇಸ್ಪೀಟು ಅಡ್ಡೆ ಮೇಲೆ ಪೊಲೀಸರು ದಾಳಿ ಮಾಡುವಂತೆ ಜಾದೂ ಮಾಡಿದ!

ರವಿನಾಯ್ಕನ ಗ್ರಹಚಾರ ಕೆಡವುದುಕ್ಕೂ, ಆತನಿಗೆ ಸಹಕರಿಸುತ್ತಿದ್ದ ಡಿಎಸ್‌ಪಿ, ಸಿಪಿಐ, ಪಿಎಸ್‌ಐಗಳು ವರ್ಗವಾಗಿ ಹೋಗುವುದಕ್ಕೂ ಸರಿಯಾಗಿದೆ, ಪಾಪ!! ಹೊಸದಾಗಿ ಬಂದ ಪಿಎಸ್‌ಐ ಅಂತೋನಿ ಜೋಯ್ ರವಿ ನಾಯ್ಕ ಮುನ್ಸಿಪಾಲ್ಟಿ ಅಧ್ಯಕ್ಷನೆಂದಾಗಲಿ, ಆತನ ಹಣದ ಚೀಲಕ್ಕಾಗಲಿ ಮರುಳಾಗಲಿಲ್ಲ. ಇದಕ್ಕೆ ಕಾರಣ ಅಣ್ಣನಿಗಿಂತ ತಮ್ಮನ ತೂಕವೇ ಜಾಸ್ತಿಯಾಗಿತ್ತು. ಹೊನ್ನಾವರದಲ್ಲಿ ಇನ್ನೂ ಮೂರ್‍ನಾಲ್ಕು ಜುಗಾರಿ ಕ್ಲಬ್‌ಗಳು ಅಹೋರಾತ್ರಿ ನಡೆಯುತ್ತಿವೆ; ಅದೆಲ್ಲ ಕಂಡೂ ಕಾಣದಂತೆ ರವಿನಾಯ್ಕನ ಅಡ್ಡೆ ಮೇಲಷ್ಟೇ ಏಕೆ ಪಿಎಸ್‌ಐ ಅಂತೋನಿ ಜೋಯ್ ಮುಗಿಬಿದ್ದರು? ಇದು ಅಸ್ನೋಟಿಕರ್‌ನ ಮಂತ್ರಿಗಿರಿ ಮಸಲತ್ತಾ? ಸುದೇಶನ ಹಣದ ಹಿಕಮತ್ತಾ?

ಪೊಲೀಸರು ರವಿನಾಯ್ಕ ಮತ್ತವನ ಐವರು ಸಹಚರರ ವಿರುದ್ಧ ಕೇಸು ಜಡಿದಿದ್ದಾರೆ. ಅಡ್ಡೆಯಲ್ಲಿ **23,470** ರೂ. ಸಿಕ್ಕಿದೆ ಎಂದಿದ್ದಾರೆ. ಆದರೆ ರವಿ ಮಾತ್ರ ನೆಲಕ್ಕೆ ಬಿದ್ದರೂ ಮೀಸೆಗೆ ಮಣ್ಣು ತಾಗಿಲ್ಲ ಎಂದು ನಿರ್ಲಜ್ಜನಂತೆ ಹಾರಾಡುತ್ತಿದ್ದಾನೆ. ಲಕ್ಷ- ಲಕ್ಷ ವ್ಯಯಿಸುತ್ತ ಡ್ಯಾಮೇಜ್ ಕಂಟ್ರೋಲ್‌ಗೆ ತಿಪ್ಪರಲಾಗ ಹಾಕುತ್ತಿದ್ದಾನೆ. ಕಾಂಗ್ರೆಸಿನ ಮಾನ ತೆಗೆಯಲೆಂದೇ ವಿರೋಧಿಗಳು ಹೂಡಿದ ಸಂಚು ಇದೆಂದು ತಾಲ್ಲೂಕಾ ಕಾಂಗ್ರೆಸ್ ಅಧ್ಯಕ್ಷ ಶಿವಾನಂದ ಹೆಗಡೆ ಎಂಬ ಸಿಲಿಕಾಸ್ಯಾಂಡ್ ಕಳ್ಳನಿಂದ ಸ್ಟೇಟ್‌ಮೆಂಟ್ ಒಗಾಯಿಸಿದ್ದಾನೆ. ರಾತ್ರೋರಾತ್ರಿ ಜನಪರ ನಾಗರಿಕ ವೇದಿಕೆ (ಅಡ್ಡೆ ಪರ ವೇದಿಕೆ) ಹುಟ್ಟುಹಾಕಿ ಒಂದಿಷ್ಟು ಬಾಡಿಗೆ ಮಂದಿಯನ್ನು ಬೀದಿಗೆ ಇಳಿಸಿ ಪಿಎಸ್‌ಐ ಅಂತೋನಿಯನ್ನು ವರ್ಗಾಯಿಸು ವಂತೆ ಬೊಬ್ಬೆ ಹಾಕಿಸಿದ್ದಾನೆ.


ನಾಚಿಕೆಗೇಡಿನ ಸಂಗತಿಯೆಂದರೆ, ಪ್ರತಿಭಟನೆಗೆ ಬಂದವರಲ್ಲಿ ಸಕಲ ಪಕ್ಷದ ಪರಾಕ್ರಮಿಗಳೂ ಇದ್ದರು; ಹಿಂದೂ ಸಂಘಟನೆಯ ದೇಶಭಕ್ತ ಶೂರರೂ ಇದ್ದರು. 'ರ್‍ಯಾಲಿ'ಗೆ ಬಂದವರಿಗೆಲ್ಲ ಒಂದೊಂದು ಬಿರಿಯಾನಿ ಮತ್ತು **300** ರೂ. ನೀಡಲಾಗಿದೆ. ಕಾಂಗ್ರೆಸ್-ಬಿಜೆಪಿ-ಜೆಡಿಎಸ್‌ನ ಮುಖಂಡ ಮಣಿಗಳ ಯೋಗ್ಯತೆಗೆ ತಕ್ಕಂತೆ 'ಕೂಲಿ' ಕೊಟ್ಟಿದ್ದಾನೆ. ಹೊನ್ನಾವರದ ದುರಂತವೆಂದರೆ, ಯಕಃಶ್ಚಿತ್ ಮುನ್ಸಿಪಾಲ್ಟಿ ಅಧ್ಯಕ್ಷನೊಬ್ಬನ ದೋಖಾ-ಧಗಾ ದಂಧೆ ಮತ್ತು ಕೌಟುಂಬಿಕ ಹುಳುಕು ಸಾರ್ವಜನಿಕ ಹಿತಾಸಕ್ತಿಯ ಇಶ್ಯೂ ಎಂಬಂತೆ ಸಕಲ ಪಾರ್ಟಿಗಳ ದಂಡ ಪಿಂಡಗಳು ಬಿಂಬಿಸುತ್ತಾರೆಂದರೆ, ಏನು ಹೇಳೋದು?

● ಶುದ್ಧೋದನ

...ಗಲುಬಾಜಿ ದಂಧೆ ಪರ ವೇದಿಕೆ!!

ಹೊನ್ನಾವರ ಮುನ್ಸಿಪಾಲ್ಟಿ ಪ್ರೆಸಿಡೆಂಟ್ ರವಿನಾಯ್ಕ ತಾನು ಆ ಹುದ್ದೆಗೆ ಅನರ್ಹ ...ದು ಸ್ವಯಂ ಸಾಬೀತು ಪಡಿಸಿಕೊಂಡಿದ್ದಾನೆ. ಆತನ ಬಗ್ಗೆ ಹಿಂದೆಯೂ ಒಳ್ಳೆಯ ...ಭಿಪ್ರಾಯ ಸಮಾಜದಲ್ಲಿ ಇರಲಿಲ್ಲ. ಜವಾಬ್ದಾರಿಯುತ ನಗರದ ...ಥಮ ಪ್ರಜೆಯಂಥ ಪೋಸ್ಟಿಗೆ ಬಂದಾಗಾದರೂ ಆತ ಪೂರ್ವಾಶ್ರಮದ ...ರಟ್ಟು ಬಿಡಬೇಕಿತ್ತು. ಆದರೆ ಅಧಿಕಾರ ಸಿಕ್ಕಿದ್ದೇ ಆತನ ದೋ ...ಬರಿ ಕಾರ್ಯಾಚರಣೆಗೆಲ್ಲ ಭರ್ಜರಿ ಬಿರುಸು ಬಂದು ಬಿಟ್ಟಿತು.

ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿಣಿಯಾಗಿರುವ ಎಡವಟ್ಟು ...ಗಸನ್ನು ತನ್ನ ಅಕ್ರಮಕ್ಕೆ ತಕ್ಕಂತೆ ಪಳಗಿಸಲು ಈತ ಅತೀ ಹೀನ ...ಷೆ ಬಳಸುತ್ತಾನೆ. ಕಾಮಗಾರಿಗಳಲ್ಲಿ ಹೇಳಿದಷ್ಟು ಪರ್ಸೆಂಟೇಜ್ ...ಡದಿದ್ದರೆ ಬಿಲ್ ಆಗುವುದೇ ಇಲ್ಲ. ಮುಖ್ಯಾಧಿಕಾರಿಣಿ ಮತ್ತು ...ತನ ಜಟಾಪಟಿಯಿಂದ ಪಟ್ಟಣ ಪಂಚಾಯ್ತಿ ಆಡಳಿತ ಹಳಿ ತಪ್ಪಿ ...ಹೋಗಿದೆ. ಪೌರರಲ್ಲೇ ಎರಡು ಬಣವಾಗಿದೆ.



ಇಂಥ ರವಿನಾಯ್ಕ ಹಣದ ಸೊಕ್ಕಿನಿಂದ ಎಂಥ ಅನ್ಯಾಯ-...ನಾಂತರ, ಅಕ್ರಮ ಬೇಕಿದ್ದರೂ ಮಾಡಬಲ್ಲ. ಮೊನ್ನೆ ಆತನ ಇಸ್ಪೀಟು ...ಡ್ಡೆ ಮೇಲೆ ಪೊಲೀಸ್ ಕೇಸ್ ಆದಾಗ ಈ ಅನಾಹುತಕಾರಿ ...ಪೊಲೀಸರನ್ನು ಟಾರ್ಗೆಟ್ ಮಾಡಿಕೊಂಡನೇ ಹೊರತು ಖಾಸಾ ತಮ್ಮನೇ ತನ್ನನ್ನು ...ನಬೀದಿಯಲ್ಲಿ ಚಿತ್ತುಗೊಳಿಸಿದ್ದಾನೆಂಬುದನ್ನು ಬುದ್ಧಿಪೂರ್ವಕವಾಗೇ ಬಚ್ಚಿಟ್ಟ. ಆದರೆ ...ನರಿಗೆ ಈ ಸತ್ಯ ಸಾಕ್ಷಾತ್ಕಾರ ಆಗಿ ಹೋಗಿದೆ. ವಿಷಯ ಅದಲ್ಲ, ಆತ ತಾನು ...ಭಾಪತಿಯೆಂದು ತೋರಿಸಿಕೊಳ್ಳಲು "ಜನಪರ ನಾಗರಿಕ ವೇದಿಕೆ" ಎಂಬ ಸಮಾನ ಗುಣ-ಧರ್ಮದವರ ಸಂಘವೊಂದು ಕಟ್ಟಿ ಪ್ರತಿಭಟನೆಗೆ ಇಳಿಸಿದ್ದಾನೆ. ಇದು 'ದೋ ನಂಬರ್ ದಂಧೆ ಪರ ನಾಗರಿಕರ ವೇದಿಕೆ'ಯೇ ಹೊರತು ಇದರ ಮುಂಚೂಣಿಯಲ್ಲಿರುವವರಿಗೆ ಜನಪರ ಕಳಕಳಿ ಒಂಚೂರೂ ಇಲ್ಲ.

ಈ ಅಡ್ಡೆ ಪರ ಗ್ಯಾಂಗ್‌ನ ಸೂತ್ರಧಾರರಾದ ಎಂಟ್ಹತ್ತು ಅತಿರಥ ಮಹಾರಥರಲ್ಲಿ ಒಬ್ಬೊಬ್ಬರದೂ ಒಂದೊಂದು ದೋ ನಂಬರ್ ದಂಧೆ. ತಾಲ್ಲೂಕ್ ಕಾಂಗ್ರೆಸ್ ಅಧ್ಯಕ್ಷ ಶಿವಾನಂದ ಹೆಗಡೆಯದು ಸಿಲಿಕಾ ಸ್ಯಾಂಡ್ ಕಳ್ಳ ಸಾಗಾಣಿಕೆ ದಂಧೆ. ಈ ಕಳ್ಳ ಕಾಸಿನಿಂದ ಆತನಿಗೆ ಭರ್ಜರಿ ಮನೆ, ಐಶಾರಾಮಿ ಕಾರು, ದೌಲತ್ತಿನ ರಾಜಕಾರಣ, ಕೆಡಿಸಿಸಿ ಬ್ಯಾಂಕಿನ ನಿರ್ದೇಶಕತ್ವವೆಲ್ಲ ಪ್ರಾಪ್ತವಾಗಿದೆ! ಕಕ್ಕಾಸು ಮಠ (ಹೈಗರ ಮಠ) ಕ್ಕೆಂದು ಈತ ಸಾಗುವಾನಿ ಮರ ಕಡಿವಾಗ ಒಂದಕ್ಕೆ ನಾಲ್ಕು ಕಡಿದನೆಂದು ಸಾಕ್ಷಾತ್ ರಾಘವೇಶ್ವರ ಭಾರತಿಯೇ ಸಿಟ್ಟಾಗಿದ್ದರಂತೆ. ಜಿ.ಪಂ. ಹಾಲಿ ಸದಸ್ಯೆ ಪುಷ್ಪಾನಾಯ್ಕ, ಮಾಜಿ ಸದಸ್ಯ ಶಂಭು ಗೌಡ ಕಾಸು ಕೊಡುತ್ತಾರೆಂದರೆ ಎಂಥ ಪಾತಕಿಗಳ ಪರವೂ ಪ್ರತಿಭಟನೆ ಮಾಡಬಲ್ಲರು. ವಿನೋದ ನಾಯ್ಕ ಕರ್ಕಿ ಗ್ರಾ.ಪಂ. ಅಧ್ಯಕ್ಷನಾಗಿದ್ದಾಗ ಭೂದಾಹಿ ಸತೀಶ್ ಸೈಲ್‌ನ ಜನವಿರೋಧಿ ರೆಸಾರ್ಟ್ ದಂಧೆ ಪರ ನಿಂತವನು. ಪ.ಪಂ.ಸದಸ್ಯ ವಿಜು ಕಾಮತನ ಅತ್ಯುಗ್ರ ಹಿಂದೂತ್ವವೂ ಧನಾಧಾರಿತವೇ! ಜೆಡಿಎಸ್‌ನ ನೀಲಕಂಠ ನಾಯ್ಕ ಲ್ಯಾಂಡ್ ಲಿಂಕ್ಸ್ ದಂಧೆಕೋರ.

ಈ ಅಡ್ಡೆ ಪರರಲ್ಲಿ ಕಾಂಗ್ರೆಸಿಗರೇ ಮುಂಚೂಣಿಯಲ್ಲಿದ್ದಾರೆ. ಕಾಂಗ್ರೆಸ್ ಅನ್ನು ಹೊನ್ನಾವರದಲ್ಲಿ ಸೋಲಿಸಲು ದೇಶಪಾಂಡೆಯವರ ಪ್ರೀತಿಯ ಶಿಷ್ಯ ಶಿವಾನಂದ ಹೆಗಡೆ ಮತ್ತು ರವಿನಾಯ್ಕ ಇಬ್ಬರೇ ಸಾಕು. ಒಂದಂತೂ ಖರೆ. ರವಿನಾಯ್ಕ ಪರ ನಡೆದ ಪ್ರತಿಭಟನೆ ದೋ ನಂಬರ್ ದಂಧೆದಾರರನ್ನು ಹೊನ್ನಾವರಕ್ಕೆ ಪರಿಚಯಿಸಿದೆ.



ಬೆಂಗಳೂರು ರೇಪ್ ರಾಜಧಾನಿ!

ಶೇಮ್ ಗೃಹಮಂತ್ರಿ


ಆರೋಪಿಗಳ ಭಾವಚಿತ್ರ ಪ್ರದರ್ಶಿಸುತ್ತಿರುವ ಮಿರ್ಜಿ

ಒಂದೇ ತಿಂಗಳಲ್ಲಿ ಅರ್ಧ ಡಜನ್ ಅತ್ಯಾಚಾರ...

ಅಕ್ಟೋಬರ್ 13 ರ ರಾತ್ರಿ ನೇಪಾಳ ಮೂಲದ ಕಾನೂನು ವಿದ್ಯಾರ್ಥಿನಿಯೊಬ್ಬಳನ್ನು ಎಳೆದೊಯ್ದು ಗ್ಯಾಂಗ್ ರೇಪ್ ಮಾಡಿದ ಘಟನೆಗೂ ಒಂದು ವಾರದ ಹಿಂದೆ ಅದೇ ಸ್ಥಳದಲ್ಲಿ; ಅದೇ ಸಮಯದಲ್ಲಿ ತನ್ನ ಪತಿ ಆಟೋಚಾಲಕನ ಜೊತೆ ಬಂದಿದ್ದ ಗೃಹಿಣಿಯೊಬ್ಬಳನ್ನು ಅವಿತು ಕೂತಿದ್ದ ದುಷ್ಕರ್ಮಿಗಳ ಗ್ಯಾಂಗ್ ಮತ್ತದೇ ಪೊದೆಯೊಳಕ್ಕೆ ಎಳೆದೊಯ್ದಿತ್ತು!

ನಿಜಕ್ಕೂ ಆಕೆಯ ಮೇಲೆ ಆವತ್ತು ಅತ್ಯಾಚಾರವಾಗಿತ್ತೋ ಅಥವಾ ಮಾನ-ಮರ್ಯಾದೆಗೆ ಅಂಜಿ ಆಕೆ ಅಂಥಾದ್ದೇನೂ ನಡೆದೇ ಇಲ್ಲ ಎಂದು ಹೇಳಿಕೆ ಕೊಟ್ಟಳೋ ಗೊತ್ತಿಲ್ಲ. ಇದು ಅಕ್ಟೋಬರ್ 13 ರ ಕಾನೂನು ವಿದ್ಯಾರ್ಥಿನಿಯ ಮೇಲಿನ ಸಾಮೂಹಿಕ ಅತ್ಯಾಚಾರದ ಒಂದು ವಾರದ ಹಿಂದಿನ ಘಟನೆಯಾದರೆ ಇದಕ್ಕೂ ವಾರದ ಮುನ್ನ ಅಂದರೆ ಅಕ್ಟೋಬರ್ 13 ಕ್ಕೂ ಎರಡು ವಾರಗಳ ಹಿಂದಷ್ಟೇ ತನ್ನ ಪ್ರಿಯಕರನ ಜೊತೆ ಸಂಜೆಯ ಏಕಾಂತ ಬಯಸಿ ಬಂದಿದ್ದ ಮತ್ತೊಬ್ಬ ಮಹಿಳೆಯನ್ನೂ ಇದೇ ಸ್ಥಳದಲ್ಲಿ ಆಟೋ ಗ್ಯಾಂಗ್ ಒಂದು ಆಕೆಯ ಪ್ರಿಯಕರನೆದುರೇ ಎಳೆದೊಯ್ಯಲು ಯತ್ನಿಸಿತ್ತು, ಆದರೆ ದಾರಿಹೋಕರು ಆಕೆಯ ಚೀರಾಟ ಕೇಳಿ ನೆರವಿಗೆ ಬಂದಿದ್ದರಿಂದ ಎಳೆದೊಯ್ದ ಕಿರಾತಕರು ಅರ್ಧಕ್ಕೇ ಬಿಟ್ಟು ಪರಾರಿಯಾದರು.

ನೇಪಾಳಿ ಲಾ ಸ್ಟೂಡೆಂಟ್ ಮೇಲೆ ಗ್ಯಾಂಗ್ ರೇಪ್ ನಡೆದ ಒಂದೇ ವಾರಕ್ಕೆ ಅಂದರೆ ಅಕ್ಟೋಬರ್ 19 ರ ರಾತ್ರಿ ಗ್ಯಾಂಗ್ ರೇಪ್ ನಡೆದ ಜಾಗಕ್ಕೆ ಕೂಗಳತೆಯಲ್ಲೇ ಮೂವರು ಬಾರ್ ಹುಡುಗಿಯರ ಮೇಲೆ ಅವರಿದ್ದ ಮನೆಗೇ ನುಗ್ಗಿದ ಕಾಮುಕರ ಗ್ಯಾಂಗ್ ಅಮಾನುಷವಾಗಿ ಅತ್ಯಾಚಾರವೆಸಗಿದೆ.


ಗೀತಾ ಕುಲಕರ್ಣಿ

ಅಲ್ಲಿಗೆ ಒಂದೇ ತಿಂಗಳಲ್ಲಿ ನಾಲ್ವರು ಯುವತಿಯರು ಅತ್ಯಾಚಾರಕ್ಕೀಡಾದಂತಾಯ್ತು. ಒಬ್ಬಳು ಹೆಂಗಸು ಅತ್ಯಾಚಾರಕ್ಕೀಡಾಗಿಯೂ ಮಾನಕ್ಕಂಜಿ ನಡೆದ ರೇಪ್ ಅನ್ನು ಮುಚ್ಚಿಟ್ಟಂತಾಯ್ತು. ಮಿಕ್ಕೊಬ್ಬ ಮಹಿಳೆಯನ್ನು ಹೇಗೋ ಆಕೆಯ ಪ್ರಿಯಕರ ಮತ್ತು ದಾರಿಹೋಕರು ಸೇರಿ ಅತ್ಯಾಚಾರಿಗಳ ವಿರುದ್ಧ ಸೆಣಸಾಡಿ ರಕ್ಷಿಸಿದಂತಾಯ್ತು!

ಇಲ್ಲದಿದ್ದರೆ ಒಂದೇ ತಿಂಗಳಲ್ಲಿ ಬೆಂಗಳೂರೊಂದರಲ್ಲೇ ಅರ್ಧ ಡಜನ್ ಹೆಂಗಸರು ಕಾಮುಕರಿಗೆ ಬಲಿಯಾಗುತ್ತಿದ್ದರು!

ಹಿಂದಾದರೆ ಬೆಂಗಳೂರಿನ ಹೆಂಗಸರಿಗೆ ಉಮೇಶ್ ರೆಡ್ಡಿಯಂಥ ಪೈಶಾಚಿಕ ಕ್ರಿಮಿನಲ್ಲುಗಳ ಭಯವಿತ್ತು, ದಂಡುಪಾಳ್ಯದ ಹಂತಕರೂ ಮನೆಗೇ ನುಗ್ಗಿ ಅತ್ಯಾಚಾರವೆಸಗಿ ಕೊಲ್ಲುತ್ತಿದ್ದರು. ಮನೆಯಲ್ಲಿ ಒಂಟಿಯಾಗಿದ್ದೋ, ಹೆಂಗಸರು ಏಕಾಂಗಿಯಾಗಿದ್ದ ಸಮಯ ಕಾದೋ ರಕ್ತಪಾತವೆಸಗುತ್ತಿದ್ದ ಉಮೇಶ್ ರೆಡ್ಡಿ, ದಂಡುಪಾಳ್ಯ, ಹೊಸಕೋಟೆಯ ಶ್ಯಾಮ್ ಮತ್ತು ರವಿ, ಲೈವ್‌ಬ್ಯಾಂಡ್ ಹುಡುಗಿಯರನ್ನೇ ಹೊಂಚು ಹಾಕಿ ಎಳೆದೊಯ್ಯುತ್ತಿದ್ದ ವಿಕೃತಕಾಮಿ ನಾಣಿ ಗ್ಯಾಂಗ್‌ಗಳಿದ್ದವು. ಇವ್ಯಾವುದೂ ತೀರ ರಸ್ತೆಯಲ್ಲಿ ನಡೆದು ಹೋಗುವ, ತಮ್ಮ ಪಾಡಿಗೆ ತಮ್ಮ ಪ್ರಿಯಕರನೊಂದಿಗೋ ಪತಿಯೊಂದಿಗೋ ವಿಹಾರಕ್ಕೆಂದು ಬರುವ ಹೆಣ್ಣುಮಕ್ಕಳ ಮೇಲೆ ನಡೆದಿರಲಿಲ್ಲ, ಕನಿಷ್ಠ ಪಾರ್ಕ್, ಆಟದ ಮೈದಾನ, ಕಬ್ಬನ್ ಪಾರ್ಕ್, ಜ್ಞಾನಭಾರತಿ ಉದ್ಯಾನವನಗಳಲ್ಲಿ ತಮ್ಮ ಪರಿಚಿತರೊಂದಿಗೋ ಗೆಳೆಯರೊಂದಿಗೋ ಓಡಾಡುವ ಅವಕಾಶವಾದರೂ ಇತ್ತು.

ಈಗ ಹಾಗಲ್ಲ, ಸಂಜೆಯಾದರೆ ಯಾವ ಹೆಣ್ಣು ಮಕ್ಕಳೂ ಬೀದಿಗಿಳಿಯುವಂತಿಲ್ಲ, ತಮ್ಮ ಪರಿಚಿತರು ಅಥವಾ ಗಂಡಂದಿರ ಜೊತೆಗೂ ಅಡ್ಡಾಡುವುದು ಕಷ್ಟ. ಹಾಗೊಮ್ಮೆ ಬಾರಿನಲ್ಲಿ ಕೆಲಸ ಮಾಡುವ, ನಡುರಾತ್ರಿ ತನಕ ದುಡಿಯುವ, ಹೇಳುಕೇಳುವವರಿಲ್ಲದ ಅವಿವಾಹಿತ ಹುಡುಗಿಯರೇನಾದರೂ ಮನೆ ಮಾಡಿಕೊಂಡಿದ್ದಾರೆಂದರೆ ಮುಗಿದೇ ಹೋಯಿತು.

ಇದಕ್ಕೆ ಅಕ್ಟೋಬರ್ 19 ರಂದು ಜ್ಞಾನಭಾರತಿ ಪಕ್ಕದ ಮರಿಯಪ್ಪನಪಾಳ್ಯದ ಜ್ಞಾನಜ್ಯೋತಿ ಲೇಔಟಿನ ಮನೆಯೊಂದರ ಮೇಲೆ ನಡೆದ ಹೀನಕರ ದಾಳಿಯೇ ಸಾಕ್ಷಿ. ಗಾಂಧಿನಗರದ ಕ್ಯಾಸಿನೋ ರಾಯಲ್ ಎಂಬ ಲೇಡಿಸ್ ಬಾರಿನಲ್ಲಿ ಪರಿಚಾರಿಕೆಯರಾಗಿ ಕೆಲಸ ಮಾಡುವ ಎಂಟ್ಹತ್ತು ಮಂದಿ ಅಸ್ಸಾಮಿ ಹುಡುಗಿಯರಿರುವ ಮನೆಯದು. ರಾತ್ರಿ 12.30 ರ ಹೊತ್ತಿಗೆ ತಮ್ಮ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ಸಾದ ಐದಾರು ಮಂದಿ ಯುವತಿಯರು ರಾತ್ರಿ 1.30 ರ ಹೊತ್ತಿಗೆ ಇನ್ನೇನು ಮಲಗಬೇಕೆನ್ನುವಷ್ಟರಲ್ಲಿ ಯಾರೋ ಬಾಗಿಲು ಬಡಿದಂತಾಗಿದೆ.

ಕಾವಲಿಗಿದ್ದ ವಾಚ್‌ಮನ್ ಬಾಗಿಲು ತೆಗೆಯುತ್ತಿದ್ದಂತೆ ಏಕಾಏಕಿ ಹನ್ನೆರಡು ಮಂದಿಯಿದ್ದ ದುಷ್ಕರ್ಮಿಗಳ ತಂಡ ಮನೆಯೊಳಕ್ಕೆ ನುಗ್ಗಿದ್ದೇ ಅಲ್ಲಿದ್ದ ಯುವತಿಯರನ್ನು ಎಳೆದಾಡಿದೆ. ಕಾವಲಿಗಿದ್ದ ಇಬ್ಬರು ವಾಚ್‌ಮನ್‌ಗಳನ್ನು ಆ ಪೈಕಿ ನಾಲ್ವರು ದಾಂಡಿಗರು ಕೈಕಾಲು ಕಟ್ಟಿ ಅನತಿ ದೂರಕ್ಕೆ ಎಳೆದೊಯ್ದು ತಾವು ತಂದಿದ್ದ ಕಾರಿನಲ್ಲಿ ಕೂಡಿಟ್ಟರೆ, ಮಿಕ್ಕ ದಾಳಿಕೋರರೆಲ್ಲ ಅಕ್ಷರಶಃ ಪಿಶಾಚಿಗಳಾಗಿದ್ದಾರೆ. ಯುವತಿಯರ ಮೇಲಿದ್ದ ಚಿನ್ನ, ಟೀವಿ, ವಿಸಿಡಿ ಪ್ಲೇಯರ್, ಅವರ ಮೊಬೈಲ್ ಫೋನುಗಳು, ಕೂಡಿಟ್ಟಿದ್ದ ಅಷ್ಟಿಷ್ಟು ರೊಕ್ಕ ಎಲ್ಲವನ್ನೂ ದಾಳಿಕೋರರ ಗ್ಯಾಂಗ್ ಕಿತ್ತುಕೊಂಡಿದೆ.

ಇಷ್ಟೆಲ್ಲ ಆದ ಮೇಲೂ ತೃಪ್ತಿಯಾಗದ ದಾಳಿಕೋರರು ಆ ಪೈಕಿ ಮೂವರು ಯುವತಿಯರನ್ನು ಎಳೆದೊಯ್ದು ಒಬ್ಬರಾದ ಮೇಲೊಬ್ಬರಂತೆ ಅತ್ಯಾಚಾರವೆಸಗಿದ್ದಾರೆ. ಇನ್ನೂ ಕೆಲವರ ಮೇಲೆ ಅತ್ಯಾಚಾರ ನಡೆಯದೇ ಹೋದರೂ ಲೈಂಗಿಕ ಚೇಷ್ಟೆಯಂತೂ ನಡೆದಿದೆ.

ರಾತ್ರಿ 12.30 ರಿಂದ ಬೆಳಗಿನ ಜಾವ 2.30 ವರೆಗೆ ಅವರಿದ್ದ ಇಡೀ ಮನೆಯನ್ನು ಆ ಗ್ಯಾಂಗ್ ಆಕ್ರಮಿಸಿಕೊಂಡಿತ್ತು, ರಾತ್ರಿ ಆ ಹೊತ್ತಿನಲ್ಲಿ ಅದೂ ಬೆಂಗಳೂರು ನಗರದ ಪೊಲೀಸ್ ಗಸ್ತು ಜಾಲವನ್ನೆಲ್ಲ ಭೇದಿಸಿದ್ದ ದುಷ್ಕರ್ಮಿಗಳ ತಂಡ ಒಂದಲ್ಲ ಎರಡು ಕಾರುಗಳಲ್ಲಿ ದಾಳಿ ನಡೆಸಿತ್ತು, ಜೊತೆಗೆ ಮಚ್ಚು ಲಾಂಗ್, ರಿವಾಲ್ವರ್‌ನಂಥ ಮಾರಕ ಆಯುಧಗಳನ್ನು ತನ್ನ ಕೃತ್ಯಕ್ಕೆ ಬಳಸಿತ್ತು.

ಆ ಬಾರ್ ಹುಡುಗಿಯರು ಎಲ್ಲಿ ಕೋರ್ಟು, ಪೊಲೀಸು, ಸಾಕ್ಷಿ ಎಂದೆಲ್ಲ ಅಲೆಯಬೇಕಾಗುತ್ತೋ ಎಂದು ತಮ್ಮ ಹೇಳಿಕೆಯನ್ನೇ ತಿರುಚಿಬಿಟ್ಟರು. ಒಂದೆಡೆ ಪೊಲೀಸರ ಧಮಕಿ ಮತ್ತೊಂದೆಡೆ ಕಾಮುಕರ ಕಾಟ!

ಇದು ಅಕ್ಟೋಬರ್ 19 ರ ರಾತ್ರಿ ಜ್ಞಾನಭಾರತಿ ಕ್ಯಾಂಪಸ್‌ಗೆ ಕೂಗಳತೆಯಲ್ಲಿ ನಡೆದ ಅತ್ಯಾಚಾರವಾದರೆ ಇದಕ್ಕೂ 6 ದಿನಗಳ ಹಿಂದೆ ನಡೆದದ್ದು ಅಕ್ಷರಶಃ ಪೈಶಾಚಿಕತೆಯ ಪರಮಾವಧಿ. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ಸೆಂದರೆ ಅದು ನಿರ್ಜನ ಪೊದೆಗುಂಡಿಗಳ ದುರ್ಗಮ ಕಾಡು. ಸಂಜೆಯಾದರೆ ಅಲ್ಲಿ ವಾಯು ವಿಹಾರಕ್ಕೆಂದು ಜನ ಬರುತ್ತಾರೆ. ಜ್ಞಾನಭಾರತಿ ಕ್ಯಾಂಪಸ್ಸಿನ ಆವರಣದಲ್ಲೇ ರಾಷ್ಟ್ರೀಯ ಕಾನೂನು ಶಾಲೆ ಎಂದರೆ ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿ ಇದೆ. ಇಲ್ಲಿ ನಡುರಾತ್ರಿ ತನಕ ವಿದ್ಯಾರ್ಥಿಗಳು ಓಡಾಡಿಕೊಂಡಿರುತ್ತಾರೆ. ಹೀಗೆ ದೇಶದ ಯಾವ್ಯಾವುದೋ ಮೂಲೆಯಿಂದ ಕಾನೂನು ಪರಿಣಿತಿಗೆಂದು ಬಂದ ವಿದ್ಯಾರ್ಥಿನಿಯರ ಪೈಕಿ ಸೀಮತಿ (ಹೆಸರು ಬದಲಿಸಿದೆ) ಎಂಬ ನೇಪಾಳಿ ಯುವತಿ ತನ್ನ ಗೆಳೆಯ ನಿರ್ಮಲ್ ಎಂಬಾತನ ಕಾರಿನಲ್ಲಿ ಮರಿಯಪ್ಪನಪಾಳ್ಯದ ರಿಂಗ್ ರಸ್ತೆಯಿಂದ ಜ್ಞಾನಭಾರತಿ ಕ್ಯಾಂಪಸ್ಸಿಗೆ ಪ್ರವೇಶಿಸುವ ಹೊತ್ತಿಗಾಗಲೇ ರಾತ್ರಿ ಎಂಟೂವರೆಯಾಗಿತ್ತು.

ಇನ್ನೇನು ಗಾಂಧಿ ಭವನವನ್ನು ದಾಟಿ ವೃಷಭಾವತಿ ಮೋರಿ ಹಾದು ನ್ಯಾಷನಲ್ ಲಾ ಸ್ಕೂಲಿಗೆ ಕಾರು ಹೊರಳಬೇಕೆನ್ನುವಷ್ಟರಲ್ಲಿ ಏಕಾಏಕಿ ಎಂಟು ಮಂದಿಯಿದ್ದ ಗ್ಯಾಂಗ್ ಒಂದು ಕಾರನ್ನು ಸುತ್ತುವರಿದಿದೆ. ಕಾರಿನೊಳಗಿದ್ದ ಯುವತಿಯನ್ನು ಯಾವುದೇ ಮುಲಾಜಿಲ್ಲದೇ ಹೊರಗೆಳೆದಿದೆ. ಜೊತೆಗಿದ್ದ ಆಕೆಯ ಗೆಳೆಯನನ್ನು ಕಾರಿನ ಬಳಿಯೇ ಒತ್ತೆಯಿಟ್ಟುಕೊಂಡ ತಂಡದ ಮಿಕ್ಕವರೆಲ್ಲ ಆ ವಿದ್ಯಾರ್ಥಿಯನ್ನು ನಿರ್ಜನ ಕಾಡಿಗೆ ಎಳೆದೊಯ್ದು ಒಬ್ಬೊಬ್ಬರಾಗಿ ಅತ್ಯಾಚಾರವೆಸಗಿದ್ದಾರೆ. ಇತ್ತ ಆಕೆಯ ಗೆಳೆಯ ತನ್ನ ಪ್ರಾಣ ಉಳಿಸುವಂತೆ ಗೋಗರೆಯುತ್ತಿದ್ದರೆ ಅತ್ತ ಆಕೆಯನ್ನು ಎಳೆದೊಯ್ದ ಗ್ಯಾಂಗ್ ಒಬ್ಬೊಬ್ಬರಾಗಿ ಐದು ಮಂದಿ ಆಕೆಯನ್ನು ಮುಕ್ಕಿದ್ದಾರೆ.

ಆ ತಂಡದ ಸಂಖ್ಯೆ ಬರೋಬ್ಬರಿ ಎಂಟು ಮಂದಿ ಆ ರಾತ್ರಿ ಹೊತ್ತಲ್ಲಿ ಪೊಲೀಸ್ ಪಹರೆಯನ್ನೂ ಮೀರಿ ಜ್ಞಾನಭಾರತಿ ಕ್ಯಾಂಪಸ್ಸಿಗೆ ಪ್ರವೇಶಿಸುತ್ತಾರೆಂದರೆ, ಅದರಲ್ಲೂ ನಿರ್ಜನ ಕಾಡಿನಲ್ಲಿ ಎಂಟು ಮಂದಿಯ ತಂಡ ಆ ರಾತ್ರಿಯಲ್ಲೂ ಓಡಾಡುತ್ತದೆಯೆಂದರೆ ಜೊತೆಗೊಂದು ವಾಹನವಂತೂ ಇರಲೇ ಬೇಕು.

ಆ ನೇಪಾಳಿ ಯುವತಿಯ ಧೈರ್ಯ ಮೆಚ್ಚಲೇಬೇಕು. ತನ್ನ ಮೇಲಾದ ದೌರ್ಜನ್ಯವನ್ನು ಧೈರ್ಯವಾಗಿ ಹೇಳಿಕೊಂಡಿದ್ದಾಳೆ. ಆಕೆಯ ಗೆಳೆಯನೂ ಧೈರ್ಯ ತುಂಬಿದ್ದಾನೆ. ಆಕೆ ಆಘಾತದಿಂದ ಚೇತರಿಸಿಕೊಂಡು ಪೊಲೀಸ್ ಠಾಣೆಗೆ ಬಂದು ದೂರು ಕೊಡುವ ಹೊತ್ತಿಗಾಗಲೇ ಆರು ಗಂಟೆ ಕಳೆದಿತ್ತು, ಅತ್ಯಾಚಾರ ನಡೆದ ಬಗ್ಗೆ ಬಹುತೇಕ ಸಾಕ್ಷ್ಯಾಧಾರಗಳೂ ನಾಶವಾಗಿದ್ದವು. ಹಾಗಿದ್ದೂ ತನಿಖೆಗೆ ನಿಂತರು ಪೊಲೀಸ್ ಕಮೀಷನರ್ ಜ್ಯೋತಿ ಪ್ರಕಾಶ್ ಮಿರ್ಜಿ. ಏಕೆಂದರೆ ಇದು ವಿದ್ಯಾರ್ಥಿನಿಯ ಮೇಲಾದ ಗ್ಯಾಂಗ್ ರೇಪ್. ಸುಮ್ಮನೆ ಬಿಟ್ಟರೆ ಇನ್ನೆಷ್ಟು ಹೆಣ್ಣುಮಕ್ಕಳು ಬಲಿಯಾಗುತ್ತಾರೋ ಎಂಬ ಮಾನವೀಯ ಕಳಕಳಿ ಹೊತ್ತೇ ಅಡಿಷನಲ್ ಪೊಲೀಸ್ ಆಯುಕ್ತ ಸುನೀಲ್ ಕುಮಾರ್ ಮತ್ತು ಜಂಟಿ ಪೊಲೀಸ್ ಕಮೀಷನರ್ ಪ್ರಣಬ್ ಮೋಹಾಂತಿ ಕಾರ್ಯಾಚರಣೆಗಿಳಿದರು.

ಸರಿಸುಮಾರು 12 ಮಂದಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ಒಂದು ಡಜನ್ ಪೊಲೀಸ್ ತಂಡಗಳು ಕಾರ್ಯಾಚರಣೆಗಿಳಿದವು. ಡಿಸಿಪಿ ಸಿದ್ರಾಮಪ್ಪ ಈ ಅಷ್ಟೂ ತಂಡಗಳ ಮೇಲ್ವಿಚಾರಣೆಗೆ ನಿಂತರೆ ಚನ್ನಮ್ಮನಕೆರೆ ಅಚ್ಚುಕಟ್ಟು ಇನ್ಸ್‌ಪೆಕ್ಟರ್ ಮಾಲತೇಶ್, ಸುಬ್ರಹ್ಮಣ್ಯಪುರದ ಬಾಳೇಗೌಡ, ಜ್ಞಾನಭಾರತಿ ಇನ್ಸ್‌ಪೆಕ್ಟರ್ ಬಾಲರಾಜ್, ಚಂದ್ರಾಲೇಔಟಿನ ಎಂ.ಎನ್. ನಾಗರಾಜ್, ಮಹಿಳಾ ಇನ್ಸ್‌ಪೆಕ್ಟರ್ ಗೀತಾ ಕುಲಕರ್ಣಿ, ಸತ್ಯನಾರಾಯಣ ಕೋದಂಡರಾಮು; ಇತ್ಯಾದಿ ಹನ್ನೆರಡು ಮಂದಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳೆಲ್ಲ ಅಹೋರಾತ್ರಿ ಅತ್ಯಾಚಾರಿಗಳ ಬೆನ್ನಿಗೆ ಬಿದ್ದರು.

ರೇಪಿಸ್ಟರ ಬಗ್ಗೆ ಯಾವುದೇ ಕ್ಲೂ ಇಲ್ಲ. ಅತ್ಯಾಚಾರವೆಸಗಿದ್ದವರ ಪೈಕಿ ಓರ್ವ ಬಲಿಪಶು ವಿದ್ಯಾರ್ಥಿನಿಯ ಬಳಿಯಿದ್ದ ಮೊಬೈಲನ್ನು ಕಿತ್ತೊಯ್ದಿದ್ದ.


ಕೃತ್ಯ ನಡೆದ ಸ್ಥಳ...

ಆ ರಾತ್ರಿ ಕತ್ತಲಲ್ಲಿ ಅತ್ಯಾಚಾರಕ್ಕೊಳಗಾದ ಯುವತಿ ಪೀಡಕರ ಮುಖ ಚಹರೆಯನ್ನು ಕರಾರುವಾಕ್ಕಾಗಿ ಗುರುತಿಸುವಂತಿರಲಿಲ್ಲ, ಅತ್ಯಾಚಾರವೆಸಗಿದ್ದವರು ಕೈಯಲ್ಲಿ ಕೊಡಲಿ ಹಿಡಿದದ್ದು, ಮತ್ತೊಬ್ಬನ ಕೈಯಲ್ಲಿದ್ದ ಗರಗಸ ಮತ್ತು ಮಚ್ಚಿನ ಆಧಾರದ ಮೇಲೆಯೇ ಹೇಳುವುದಾದರೆ ಆ ರಾತ್ರಿ ಎಂಟು ಮಂದಿಯ ಗ್ಯಾಂಗ್ ಜ್ಞಾನಭಾರತಿ ಆವರಣದಲ್ಲಿ ಗಂಧ ಕಳುವಿಗೆಂದೆ ಬಂದಿತ್ತ?

ಘಟನೆ ನಡೆದ ಒಂದು ವಾರದೊಳಗೆ ಅಂದರೆ ಅಕ್ಟೋಬರ್ 20 ರ ರಾತ್ರಿ ಹೊತ್ತಿಗೆ ಜ್ಞಾನಭಾರತಿ ಪೊಲೀಸರು ಅಷ್ಟೂ ಮಂದಿ ರೇಪಿಸ್ಟರನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ರಾಮನಗರ ತಾಲ್ಲೂಕು ಮೇಟಾರಿ ದೊಡ್ಡಿಯ ಇರುಳಿಗರ ರಾಮನ ಗ್ಯಾಂಗೇ ನೇಪಾಳಿ ವಿದ್ಯಾರ್ಥಿನಿಯನ್ನು ಅಮಾನುಷವಾಗಿ ಮುಕ್ಕಿತ್ತು. ಮೇಟಾರಿದೊಡ್ಡಿಯ ಮಲ್ಲೇಶ್ ಉರ್ಫ್ ಎಸಿ ಮದ್ದೂರ, ಶಿವಣ್ಣ, ಈರಯ್ಯ, ಯಲಿಮಯ್ಯ, ಆಲಿಯಾಸ್ ಕುಮಾರ್ ಮತ್ತು ಮೈಸೂರು ಜಿಲ್ಲೆ ಹುಣಸೂರಿನ ದೊಡ್ಡ ಈರಯ್ಯ ಮುಂತಾದವರಿಂದ ಹಿಡಿದು ಆ ಗಂಧ ಕಳ್ಳರ ತಂಡದಲ್ಲಿದ್ದವರೆಲ್ಲರೂ 20 ರ ಆಸುಪಾಸಿನ ಕಿರಾತಕರೇ.

ಈ ಪೈಕಿ ಯಲಿಯಯ್ಯ ಆಲಿಯಾಸ್ ಕುಮಾರ್ ಎಂಬಾತ ಮಾತ್ರವೇ 23 ವರ್ಷ ಬಿಟ್ಟರೆ ಮಿಕ್ಕೆಲ್ಲರೂ ಪಡ್ಡೆಹುಡುಗರೇ. ಪೊಲೀಸರ ಪ್ರಕಾರ ಇವರೆಲ್ಲರೂ ಗಂಧ ಕಳ್ಳರು. ರಾಮನಗರದ ಸಮೀಪ ಮೇಟಾರಿದೊಡ್ಡಿಯ ಈ ಮಂದಿ ಗಂಧ ಕದಿಯಲೆಂದು ಆಗಾಗ ಜ್ಞಾನಭಾರತಿ ಕ್ಯಾಂಪಸ್ಸಿಗೆ ಬರುತ್ತಾರೆಂದೂ ಹಾಗೆ ಬಂದಾಗೆಲ್ಲ ಸಿಕ್ಕಸಿಕ್ಕ ಯುವತಿಯರು, ಮಹಿಳೆಯರನ್ನು ಪೀಡಿಸುತ್ತಾರೆಂದೂ ಪೊಲೀಸರು ಹೇಳುವುದರಲ್ಲಿ ಸತ್ಯವಿರಬಹುದು. ಆ ಪ್ರಕಾರವೇ ತಾವು ಅತ್ಯಂತ ಕಷ್ಟಪಟ್ಟು ಈ ದುಷ್ಕರ್ಮಿಗಳನ್ನು ಹಿಡಿದೆವೆಂದೂ ಅದರ ಪೈಕಿ ಕೆಲವರು ನೀಡಿದ ಮಾಹಿತಿ ಮೇರೆಗೆ ಅಕ್ಟೋಬರ್ 20 ರ ಶನಿವಾರ ರಾತ್ರಿ ಮತ್ತೆ ಗಂಧ ಕದಿಯಲೆಂದು ಬಂದ ರೇಪಿಸ್ಟರ ನಾಯಕ ರಾಮ ಮತ್ತು ರಾಜರ ಮೇಲೆ ಪೊಲೀಸರು ಗುಂಡು ಹಾರಿಸಿದ್ದಾರೆಂದೂ ಕಮಿಷನರ್ ಮಿರ್ಜಿ ಸಾಹೇಬರು ಹೇಳಿಕೆ ನೀಡಿದ್ದಾರೆ ನಿಜ.

ನೇಪಾಳಿ ವಿದ್ಯಾರ್ಥಿನಿಯ ಮೇಲಾದ ಗ್ಯಾಂಗ್ ರೇಪ್ ವಿರುದ್ಧ ಬೆಂಗಳೂರು ಪೊಲೀಸರು ಅದರಲ್ಲೂ ಜ್ಞಾನಭಾರತಿ ಇನ್ಸ್‌ಪೆಕ್ಟರ್ ಬಾಲಾರಾಜ್ ಮತ್ತು ಚಂದ್ರಲೇಔಟಿನ ಇನ್ಸ್‌ಪೆಕ್ಟರ್ ನಾಗರಾಜ್ ಶ್ರಮವನ್ನು ಎಂಥವರೂ ಮೆಚ್ಚಲೇಬೇಕು. ಪೊಲೀಸ್ ಕಮಿಷನರ್ ಮಿರ್ಜಿ ಈ ಬಗ್ಗೆ ವಹಿಸಿದ ಕಾಳಜಿ, ಅಡಿಷನಲ್ ಕಮಿಷನರ್ ಸುನೀಲ್ ಕುಮಾರ್ ಮತ್ತು ಜಂಟಿ ಪೊಲೀಸ್ ಕಮೀಷನರ್ ಪ್ರಣಬ್ ಮೊಹಾಂತಿಯವರ ಪರಿಶ್ರಮವೂ ಶ್ಲಾಘನೀಯವೇ.

ಯಾರೋ ಚಿತ್ರ ಕಲಾವಿದ ಬರೆದ ರೇಖಾಚಿತ್ರದ ಆಧಾರದ ಮೇಲೆ ರೇಪಿಸ್ಟ್‌ರನ್ನು ಹಿಡಿಯಲು ಸಾಧ್ಯವಾಯಿತು. ಪೊಲೀಸರು ಗಂಧಕಳ್ಳರ ಪಟ್ಟಿಯನ್ನೆಲ್ಲ ಜಾಲಾಡಿ ರೇಪಿಸ್ಟರನ್ನು ಹಿಡಿದರು. ಮುನ್ನೂರಕ್ಕೂ ಅಧಿಕ ಪಾತಕಿಗಳನ್ನು ಎಳೆತಂದು ವಿಚಾರಣೆ ನಡೆಸಲಾಯ್ತು. ಇತ್ಯಾದಿ ಏನೇ ಪೊಲೀಸರು ಬೆನ್ನುತಟ್ಟಿಕೊಂಡರೂ ಬಲಿಯಾದ ನೇಪಾಳಿ ವಿದ್ಯಾರ್ಥಿನಿಯ ಮೊಬೈಲನ್ನು ಕಿತ್ತೊಯ್ದದ್ದು ಮತ್ತು ಹಾಗೇ ಕೊಂಡೊಯ್ದ ಮೊಬೈಲಿನ ಟವರ್ ರಾಮನಗರವನ್ನು ಸೂಚಿಸಿದ್ದದ್ದೇ ಅತ್ಯಾಚಾರಿಗಳ ಪತ್ತೆಗೆ ಕಾರಣವಾಯಿತು. ಜೊತೆಗೆ ಅತ್ಯಾಚಾರ ನಡೆದ ವೇಳೆ ಆ ಸ್ಥಳದ ಮೊಬೈಲ್ ಟವರ್ ಸೂಚಿಸುತ್ತಿದ್ದ ಮೊಬೈಲ್ ನಂಬರುಗಳ ಪೈಕಿ ಕೆಲ ನಂಬರುಗಳು ರೇಪಿಸ್ಟರ ಮೊಬೈಲುಗಳಾಗಿದ್ದವು. ಈ ಎಲ್ಲಾ ಅತ್ಯಾಧುನಿಕ ತಂತ್ರಜ್ಞಾನದ ಫಲವಾಗೇ ಪೊಲೀಸರಿಗೆ ರೇಪಿಸ್ಟರನ್ನು ಹಿಡಿಯಲು ಸಾಧ್ಯವಾಯಿತೇ ಹೊರತು; ಯಾರೋ ಚಿತ್ರಕಾರ ಬರೆದ ಕಾಲ್ಪನಿಕ ಚಿತ್ರವನ್ನು ಬಳಸಿ ಆರೋಪಿಗಳನ್ನು ಪತ್ತೆಹಚ್ಚಿದ್ದು, ಬಲಿಪಶು ವಿದ್ಯಾರ್ಥಿನಿ ಹೇಳಿದಂತೆ ಗರಗಸ, ಕೊಡಲಿ ಹಿಡಿದಿದ್ದನ್ನು ಲೆಕ್ಕ ಹಾಕಿ ಹಿಡಿದದ್ದು ಕೇವಲ ಪೊಲೀಸರ ಶೌರ್ಯ ಪ್ರತಾಪಕ್ಕೆಂದು ಹೆಣೆದ ಕತೆಯಾಗುತ್ತದೆಯೇ ಹೊರತು ವಾಸ್ತವವಾಗಿ ಸಾಧ್ಯವೇ ಇಲ್ಲ.

ಪೊಲೀಸರು ಈ ರೀತಿ ವರ್ಣರಂಜಿತ ಕತೆ ಹೆಣೆಯಬೇಕಾದ ಅನಿವಾರ್ಯಕ್ಕೆ ಈಡಾಗಿದ್ದಾದರೂ ಏಕೆ?

ಅದು ಬಿಜೆಪಿ ಸರ್ಕಾರದ ಪೊಲೀಸ್ ವೈಫಲ್ಯವಲ್ಲದೆ ಮತ್ತೇನಲ್ಲ, ಇಲ್ಲಿಗೆ ತಿಂಗಳ ಹಿಂದಷ್ಟೇ ಮಂಡ್ಯದ ರೈಲ್ವೇ ಸ್ಟೇಷನ್ನಿನಲ್ಲಿ ಗಾರ್ಮೆಂಟ್ ಹುಡುಗಿಯೊಬ್ಬಳನ್ನು ಕಾಮುಕರ ಗ್ಯಾಂಗ್ ರೈಲ್ವೇ ಹಳಿಗೆ ತಳ್ಳಿ ಕೊಲ್ಲಲೆತ್ನಿಸಿದ್ದರ ವಿರುದ್ಧ ಪೊಲೀಸ್ ನಿರ್ಲಕ್ಷ್ಯವನ್ನು ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗಳಾದರೆ ಪೊಲೀಸು ಖಾತೆ ಮಂತ್ರಿ ಅಶೋಕ್ ಕಾಟಾಚಾರಕ್ಕೂ ಘಟನಾ ಸ್ಥಳವನ್ನಾಗಲಿ ಬಲಿಯಾದ ಯುವತಿಯನ್ನಾಗಲಿ ಭೇಟಿ ಮಾಡಿ ಸ್ಥೈರ್ಯ ತುಂಬಲು ಯತ್ನಿಸಲಿಲ್ಲ, ಸರಿ ಇದಾದ ನಂತರವಾದರೂ ಹೆಣ್ಣುಮಕ್ಕಳ ರಕ್ಷಣೆಗೆ ಬಿಜೆಪಿ ಸರ್ಕಾರ ಮತ್ತು ಅಶೋಕ್ ಕೈಗೊಂಡ ಕ್ರಮವೇನು?

ರಾತ್ರಿ 8.30 ರ ಹೊತ್ತಿಗೆ ಎಂಟು ಮಂದಿಯಿದ್ದ ರೇಪಿಸ್ಟರ ತಂಡ ಅದ್ಹೇಗೆ ಜ್ಞಾನಭಾರತಿ ಕ್ಯಾಂಪಸ್ಸನ್ನು ಹೊಕ್ಕಲು ಸಾಧ್ಯ? ಆಯಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಾಕಾಬಂದಿ ಬಲವಾಗಿದ್ದರೆ, ಸಂಬಂಧಪಟ್ಟ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪೊಲೀಸ್ ಗಸ್ತು ತೀವ್ರವಾಗಿದ್ದರೆ ಪಾತಕಿಗಳ ತಂಡವಾದರೂ ಅದ್ಹೇಗೆ ರಸ್ತೆಗೆ ಕಾಲಿಡಲು ಸಾಧ್ಯವಾಗುತ್ತಿತ್ತು? ಅಕ್ಟೋಬರ್ 19 ರ ನಡುರಾತ್ರಿ ಒಂದಲ್ಲ ಎರಡು ಕಾರುಗಳಲ್ಲಿ ರೌಡಿ ಗ್ಯಾಂಗ್ ಬಾರ್ ಯುವತಿಯರಿದ್ದ ಮನೆ ಮೇಲೆ ರಾಜಾರೋಷವಾಗಿ ದಾಳಿ ನಡೆಸುತ್ತದೆಯೆಂದರೆ, ಪೊಲೀಸರ ಕಣ್ಣುತಪ್ಪಿಸಿ ಒಂದಲ್ಲ ಎರಡು ಕಾರುಗಳ ತುಂಬ ರೌಡಿಗಳು ಬೆಂಗಳೂರಿನಲ್ಲಿ ಓಡಾಡಲು ಸಾಧ್ಯವೆಂದರೆ, ಪೊಲೀಸರ ರಾತ್ರಿಗಸ್ತು ಇನ್ನೆಂಥ ತೀಕ್ಷ್ಣ ಸ್ಥಿತಿ ಮುಟ್ಟಿರಬೇಡ?

ರಾತ್ರಿ ಗಸ್ತು ಪರಿಣಾಮಕಾರಿಯಾಗಿದ್ದರೆ, ಮಹಿಳೆಯರ ಮಾನ ಪ್ರಾಣದ ಬಗ್ಗೆ ಗೃಹಮಂತ್ರಿ ಅಶೋಕ್‌ಗೆ ಕಿಂಚಿತ್ತಾದರೂ ಕಾಳಜಿಯಿದ್ದಿದ್ದರೆ ಬಾರ್ ಯುವತಿಯರ ಮೇಲಾದ ಗ್ಯಾಂಗ್ ರೇಪನ್ನು ತಪ್ಪಿಸಬಹುದಿತ್ತಲ್ಲವೆ? ಕನಿಷ್ಠ ಜ್ಞಾನಭಾರತಿ ಕ್ಯಾಂಪಸ್ಸಿನ ಸುತ್ತಮುತ್ತ ಪೊಲೀಸ್ ಪಹರೆ ತೀವ್ರವಾಗಿದಿದ್ದರೆ ನೇಪಾಳಿ ವಿದ್ಯಾರ್ಥಿನಿಯ ಮಾನವಾದರೂ ಉಳಿಯುತ್ತಿತ್ತಲ್ಲವೆ?


ಆಯಾ ಪೊಲೀಸ್ ಠಾಣೆಗಳನ್ನೆಲ್ಲ ಇಂತಿಷ್ಟು ಪೇಮೆಂಟ್ ಆಧಾರದ ಮೇಲೋ ಅಥವಾ ಸಂಬಂಧಪಟ್ಟ ಶಾಸಕರ ಮರ್ಜಿಗೋ ಮಾರಿಕೊಂಡಿರುವಾಗ ಯಾವ ಇನ್ಸ್‌ಪೆಕ್ಟರ್ ತಾನೇ ರಾತ್ರಿ ನಿದ್ದೆಗೆಟ್ಟು ಗಸ್ತು ನಡೆಸಬಲ್ಲ?

● ರಾ. ಸೋಮನಾಥ್

...ಮಂದಿ ಕೌನ್ಸಿಲರ್‌ಗಳ ಸಮೇತ ಕಾಂಗ್ರೆಸ್ಸಿಗೆ!

...ಡ್ಡಿಯ ಹೊಸ ಪಕ್ಷಕ್ಕೆ ಸೋಮಣ್ಣನೇ ಮೊದಲ ವಿಘ್ನ?

● ರಾ. ಸೋಮನಾಥ್



...ತ ನೀರಾದ ಬೆಂಗಳೂರು ನಗರದ ರಾಜಕೀಯ ...ಧೂಮಕೇತು ಅಪ್ಪಳಿಸುವ ಎಲ್ಲಾ ಸೂಚನೆಗಳೂ ...ಷೆ. ಬರೋಬ್ಬರಿ 15 ಮಂದಿ ಬಿಜೆಪಿ ಕೌನ್ಸಿಲರ್‌ಗಳ

ತಿಂಗಳಿಂದ ತನ್ನ ಕಾಂಗ್ರೆಸ್ ಹಿತೈಷಿಗಳಾದ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ಕೇಂದ್ರ ರೈಲ್ವೇ ಮಂತ್ರಿ ಕೆ.ಹೆಚ್. ಮುನಿಯಪ್ಪ ಮತ್ತು ಕೇಂದ್ರ ಮಂತ್ರಿ ಖರ್ಗೆ ಮುಂತಾದವರನ್ನು ಮುಂದೆ ಬಿಟ್ಟು ಕಾಂಗ್ರೆಸ್ಸಿನಲ್ಲಿ ತನ್ನ ಭವಿಷ್ಯಕ್ಕೆ ಏನೇನು ಬೇಕೋ ಎಲ್ಲವನ್ನೂ ಜೋಡಿಸಿಕೊಳ್ಳುತ್ತಿರುವ ಸೋಮಣ್ಣನ ಸದ್ಯದ ಡಬ್ಬಲ್‌ಗೇಮ್ ಬಿಬಿಎಂಪಿಯ ಮಟ್ಟಿಗೆ ಬಿಜೆಪಿಗೆ ಮುಳುವಾಗುತ್ತಾ ಅಥವಾ ಗುರು ಯಡ್ಡಿಯ ಬೆನ್ನಿಗೇ ಗುನ್ನವಾಗಿ ಬೀಳುತ್ತಾ ಎಂಬುದೇ ಅಸಲೀ ಪ್ರಶ್ನೆ. ಅಥವಾ ಇವೆರಡೂ ಒಟ್ಟೊಟ್ಟಿಗೆ ಸಂಭವಿಸಿದರೂ ಅಚ್ಚರಿಯಿಲ್ಲ.

ಕಳೆದ ಎರಡು ತಿಂಗಳಿಂದ ವಿಜಯನಗರದ ಆಗು ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಬಹುಶಃ ಒಂದು ಸಂಗತಿ ಅರ್ಥವಾಗಿರಲಿಕ್ಕಿಲ್ಲ. ಅದು ವಿಜಯನಗರದ ಶಾಸಕ ಎಂ.ಕೃಷ್ಣಪ್ಪ ಪಕ್ಕದ ರಾಜಾಜಿನಗರಕ್ಕೆ ತನ್ನ ಕಡೆಯವರೊಬ್ಬರು ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆಂದು ನಡೆಸಿದ ಸರ್ವೇ ಮತ್ತು ರಾಜಾಜಿನಗರದ ಕೆಲ ಕಾಂಗ್ರೆಸ್ ನಾಯಕರೊಂದಿಗೆ ನಡೆಸಿದ ರಹಸ್ಯ ಮಾತುಕತೆ!

ಯಾವ ಕಾರಣಕ್ಕೆ ಎಂ.ಕೃಷ್ಣಪ್ಪ ಪಕ್ಕದ ರಾಜಾಜಿನಗರಕ್ಕೆ ತಾವೇ ಅಭ್ಯರ್ಥಿಯೆಂಬಂತೆ ಆಸಕ್ತಿ ವಹಿಸಿದರೋ ಗೊತ್ತಿಲ್ಲ. ಆದರೆ ಹಬ್ಬಿದ ಸುದ್ದಿಗಳು ಮಾತ್ರ ಒಂದೆರಡಲ್ಲ. ಈ ಪೈಕಿ ಮೊದಲನೇ ಸುದ್ದಿಯೇ ಮಂತ್ರಿ ಸೋಮಣ್ಣ ಕಾಂಗ್ರೆಸ್ಸಿಗೆ ಬರುತ್ತಾರಂತೆ, ಹಾಗೆ ಸೋಮಣ್ಣ ಕಾಂಗ್ರೆಸ್ಸಿಗೆ ಬಂದರೆ ಅವರಿಗಾಗಿ ಗೋವಿಂದರಾಜನಗರವನ್ನು ಮೀಸಲಿಡಲೇಬೇಕಾಗಿದ್ದರಿಂದ ತಂದೆ ಕೃಷ್ಣಪ್ಪ ತಮ್ಮ ಮಗ ಪ್ರಿಯಾಕೃಷ್ಣನಿಗಾಗಿ ಪಕ್ಕದ ರಾಜಾಜಿನಗರದ ಮೇಲೆ ಕಣ್ಣು ಹಾಕಿದ್ದಾರೆಂಬುದು ಒಂದು ಸುದ್ದಿ. ಯಾವುದೇ ಕಾರಣಕ್ಕೂ ಕೃಷ್ಣಪ್ಪ ಮತ್ತು ಪ್ರಿಯಾಕೃಷ್ಣ ವಿಜಯನಗರ ಮತ್ತು ಗೋವಿಂದರಾಜನಗರವನ್ನು ಬಿಟ್ಟುಕೊಡುವುದು ಸಾಧ್ಯವೇ ಇಲ್ಲವಾದ್ದರಿಂದ ವಿಜಯನಗರಕ್ಕೆ ಪ್ರತಿಯಾಗಿ ಸೋಮಣ್ಣನನ್ನು ರಾಜಾಜಿನಗರದಿಂದ ತಾನೇ ನಿಂತು ಗೆಲ್ಲಿಸಿಕೊಡುವ ಹೊಣೆಯನ್ನು ಕೃಷ್ಣಪ್ಪ ಹೊತ್ತಿದ್ದಾರೆಂಬುದು ಇನ್ನೊಂದು ಸುದ್ದಿ. ಇದೆಲ್ಲ ಸುಳ್ಳು, ಸೋಮಣ್ಣನೇ ಖುದ್ದಾಗಿ ರಾಜಾಜಿನಗರಕ್ಕೆ ಬರುತ್ತಿದ್ದಾರಾದ್ದರಿಂದ ಅಲ್ಲಿ ಸೋಮಣ್ಣನನ್ನು ಮಣ್ಣು ಮುಕ್ಕಿಸಲೆಂದು ಕೃಷ್ಣಪ್ಪ ತಂತ್ರ ರೂಪಿಸುತ್ತಿದ್ದಾರೆಂಬುದು ಮಗದೊಂದು ಸುದ್ದಿ.



ಸೋಮಣ್ಣ

ಹೀಗೆ ವಿಜಯನಗರದ ಜಿದ್ದಾಜಿದ್ದಿಗೆ ಸಂಬಂಧಪಟ್ಟಂತೆ ಪಕ್ಕದ ರಾಜಾಜಿನಗರದಲ್ಲಿ ಹೆಡೆಯೆತ್ತಿದ ಕಣ್ಣಾಮುಚ್ಚಾಲೆಯ ಮರ್ಮವೇ ಬೇರೆಯಿದೆ. ಅದು ಸೋಮಣ್ಣನ ಆಗಮನಕ್ಕಾಗಿ ಕಾಂಗ್ರೆಸ್ ನಾಯಕರು ನಡೆಸುತ್ತಿರುವ ಸ್ಥಳಾವಕಾಶವಲ್ಲದೆ ಮತ್ತೇನಲ್ಲ. ಶತಾಯಗತಾಯ ಪ್ರಿಯಾಕೃಷ್ಣ ಮತ್ತು ತಂದೆ ಕೃಷ್ಣಪ್ಪ ವಿಜಯನಗರ ಅಥವಾ ಗೋವಿಂದರಾಜನಗರಗಳಲ್ಲಿ ಯಾವುದನ್ನೂ ಬಿಟ್ಟು ಕೊಡದ ಪಕ್ಷದಲ್ಲಿ ಸೋಮಣ್ಣನನ್ನು ಪಕ್ಕದ ರಾಜಾಜಿನಗರದಿಂದ ಗೆಲ್ಲಿಸಲೇಬೇಕೆಂಬ ನಿರ್ಧಾರಕ್ಕೆ ಖರ್ಗೆ-ಪರಮೇಶ್ವರ್ ಬಂದಿದ್ದಾರಂತೆ.

ಏಕೆಂದರೆ ಬೆಂಗಳೂರಿನ ಮಟ್ಟಿಗೆ ಸೋಮಣ್ಣ ಯಾವತ್ತಿದ್ದರೂ ಕಸುಬುದಾರನೆ. ಒಬ್ಬ ಸೋಮಣ್ಣನನ್ನು ಯಡ್ಡಿಯ ತೆಕ್ಕೆಯಿಂದ ಬಿಡಿಸಿ ಕಾಂಗ್ರೆಸ್ಸಿನತ್ತ ಸೆಳೆದುಕೊಂಡರೆ ಅದು ಕೇವಲ ವಿಜಯನಗರ ಅಥವಾ ಗೋವಿಂದ ರಾಜನಗರದ ಮಟ್ಟಿಗಷ್ಟೇ ಅಲ್ಲ, ಪಕ್ಕದ ರಾಜಾಜಿನಗರ, ಜಯನಗರ, ಯಶವಂತಪುರ ಸೇರಿದಂತೆ ಮಾಗಡಿ, ರಾಮನಗರ ಮತ್ತು ಕನಕಪುರದಲ್ಲೂ ಫಲಕೊಡುತ್ತದೆ. ಬೆಂಗಳೂರು ನಗರದ ಲಿಂಗಾಯತರ ಮತಗಳ ಮೇಲೆ ಸೋಮಣ್ಣನಿಗೊಂದು ಹಿಡಿತವಿದೆ. ಜೊತೆಗೆ ತುಮಕೂರು ಗ್ರಾಮಾಂತರ, ಚಾಮರಾಜನಗರ, ಮೈಸೂರು ಭಾಗದಲ್ಲೂ ಸೋಮಣ್ಣನಿಗೆ ತನ್ನದೇ ಆದ ಜಾತಿ ಬಲವಿದೆ.



...ಎ. ದೇವರಾಜ್ | ಎಂ. ಕೃಷ್ಣಪ್ಪ | ಪರಮೇಶ್ವರ್ | ರಾಮಲಿಂಗಾರೆಡ್ಡಿ | ಪ್ರಿಯಾಕೃಷ್ಣ



ದೊಡ್ಡಣ್ಣ | ಡಾ. ರಾಜು | ಗಂಗಭೈರಯ್ಯ | ರವೀಂದ್ರ | ಶಾಂತಕುಮಾರಿ | ಉಮೇಶ್ ಶೆಟ್ಟಿ

ಸೋಮಣ್ಣ ಕಾಂಗ್ರೆಸ್ಸಿಗೆ ನೆಗೆದ ಮರುಗಳಿಗೆಯಲ್ಲೇ ...ಪಿಯ ಅಧಿಕಾರ ಸೂತ್ರ ಬಿಜೆಪಿಯ ಕೈತಪ್ಪಿ ...- ಜೆಡಿಎಸ್ ಜಂಟಿ ದರ್ಬಾರ್ ಶುರುವಾ...ದರೆ; ಅದರ ಕಿಂಗ್‌ಮೇಕರ್ ಎಂಬ ಕೀರ್ತಿ ...ಣ್ಣನಿಗೇ ತಾನೆ?

...ಜಧಾನಿಯ ಮಟ್ಟಿಗೆ ಅಧಿಕಾರವಿಲ್ಲದೆ ಬಿಜೆಪಿ ಬೀದಿ ...ಯಿತೆಂದರೆ ಅದರ ಅಡ್ಡ ಪರಿಣಾಮ ರಾಜ್ಯದುದ್ದಕ್ಕೂ ...ಉತ್ತದೆ. ಮುಂಬರುವ ಚುನಾವಣೆಗೆ ಇದೇ ...ಯಂತಾಗಿ ಸೋಮಣ್ಣನ ವರ್ಚಸ್ಸು, ಪ್ರಾಮುಖ್ಯತೆ ...ರಾತ್ರಿ ವೃದ್ಧಿಸುತ್ತದೆ. ಜೊತೆಗೆ ಸೋಮಣ್ಣನಿಲ್ಲದೆ ...ರಿನ ರಾಜಕೀಯವೇ ನೀರಸವೆಂಬ ರೂಢಿ ... ಒಂದು ಅರ್ಥ ಕಲ್ಪಿಸಿದಂತಾಗುತ್ತದೆ!

... ಕೇವಲ 'ವಿಜಯನಗರದ ವೀರಪುತ್ರ' ...ಣ್ಣನ ಲೆಕ್ಕಾಚಾರ ಮಾತ್ರವೇ ಅಲ್ಲ, ಕಾಂಗ್ರೆಸ್ಸಿನ ... ಬಣದ ಶಾಸಕರು, ಜೆಡಿಎಸ್‌ನ ಕೆಲ ನಾಯಕರು ... ವಿಜಯನಗರದ ಸುತ್ತಮುತ್ತಲ ಕೆಲ ಪುಡಿಪುಡಿ ... ವರ್ತನೆಯನ್ನೇ ಸೂಕ್ಷ್ಮವಾಗಿ ಗಮನಿಸಿದರೆ ...ದೊಂದು ಸಾಧ್ಯತೆಯ ಅಂದಾಜಾಗುತ್ತದೆ. ಆದರೆ ...ಕ್ಕೂ ಮೂಲವಾದ ನಿರ್ಧಾರಕ ಪ್ರಸಂಗವೊಂದಕ್ಕಾಗಿ ...ಬ್ಬರೂ ಕಾಯುತ್ತಿದ್ದಾರೆ. ಅದು ಬಿಜೆಪಿಯನ್ನು ...ಮ ಪ್ರತ್ಯೇಕ ಪಕ್ಷ ಕಟ್ಟುವ ಯಡಿಯೂರಪ್ಪನವರ ... ಘೋಷ!

...ಡ್ಡಿಯಿಂದಾಗಿಯೇ ಸೋಮಣ್ಣ ಕಾಂಗ್ರೆಸ್ ...ರಬಹುದು. ಬಿಜೆಪಿಗೆ ಕಾಲಿಡುವುದಕ್ಕೂ ಯಡ್ಡಿಯೇ ...ವಾಗಿರಬಹುದು. ಯಡ್ಡಿಯಿಂದಾಗಿಯೇ ...ಯಾಗಿ, ಲಿಂಗಾಯತರ ದಳಪತಿಯಾಗಿ ಸೋಮಣ್ಣ ... ಮಿಂಚಿ ಮೆರೆದಾಡಿದರೂ ಇದೆಲ್ಲಕ್ಕೂ ಮೂಲ ...ಾದ ಯಡ್ಡಿ ಬಿಜೆಪಿ ತೊರೆದು, ಪ್ರತ್ಯೇಕ ಪಕ್ಷ ...ಹೊರಟರೆಂದರೆ, ಸೋಮಣ್ಣ ಮಾತ್ರ ಯಾವುದೇ ...ಕ್ಕೂ ಯಡ್ಡಿಯ ಹೊಸ ಪಕ್ಷಕ್ಕೆ ಕಾಲಿಡುವುದಿಲ್ಲ, ... ಅಂಥ ಮೂರ್ಖತನಕ್ಕೆ ಕೈಹಾಕುವಷ್ಟು ಸೋಮಣ್ಣ ...ಲ್ಲ.

...ದಾರಿಷ್ಟೇ ಬೊಬ್ಬಿರಿಟ್ಟರೂ ಯಡ್ಡಿಯ ಹೊಸ ಪಕ್ಷಕ್ಕೆ ...ನಲ್ಲಿ ನೆಲೆಯಿಲ್ಲ, ಮುಂಬರುವ ಚುನಾವಣೆಯಲ್ಲಿ ...ನಿಯ ಮಟ್ಟಿಗೆ ಯಡ್ಡಿಯಾಗಲಿ ಅವರ ಹೊಸ ...ಗಲಿ ಹೇಳಿಕೊಳ್ಳುವಂಥ ಬೆಂಬಲ ಗಿಟ್ಟುವುದಿಲ್ಲ, ...ವೇ ಹೀಗಿರುವಾಗ ರಾಜಧಾನಿಯ ರಾಜಕಾರಣದಲ್ಲಿ ...ದಿಂದಲೂ ಪಳಗಿದ ಸೋಮಣ್ಣನಿಗೆ ತಾನು ...ಯ ದಾಖಲಾಗಬೇಕೆಂದರೆ ಕಾಂಗ್ರೆಸ್ ಹೊರತಾಗಿ ...ದಾರಿಯೇ ಕಾಣಿಸುತ್ತಿಲ್ಲ. ಈ ನಿಟ್ಟಿನಲ್ಲಿ ಕಳೆದೊಂದು

ರಾಜಾಜಿನಗರಕ್ಕೊಬ್ಬ ತಿಮ್ಮೇಗೌಡ, ಜೆಡಿಎಸ್‌ಗೆ ಲಕ್ಷ್ಮೀನಾರಾಯಣ

ತನ್ನ ಕುಲಪುತ್ರ ಅರುಣ್ ಸೋಮಣ್ಣನನ್ನು ಚಾಮರಾಜನಗರದಿಂದ ಕಣಕ್ಕಿಳಿಸುವ ಮತ್ತೊಂದು ತಂತ್ರವೂ ಸೋಮಣ್ಣನ ತಲೆ ಹೊಕ್ಕಿದೆ. ಸಮಸ್ಯೆಯಿರುವುದು ಯಾವ ಪಕ್ಷದಿಂದ ನಿಲ್ಲಿಸಬೇಕೆನ್ನುವುದರಲ್ಲಿ. ಬಿಜೆಪಿಯಿಂದಲೇ ಮಗನನ್ನು ನಿಲ್ಲಿಸುವುದು ಸೋಮಣ್ಣನಿಗೇ ಕಷ್ಟವಲ್ಲ. ಆದರೆ ಬಿಜೆಪಿಯಿಂದ ನಿಂತು ಗೆದ್ದರೂ ಅಧಿಕಾರ ಗಿಟ್ಟುವುದಿಲ್ಲ ಎಂಬುದು ಸೋಮಣ್ಣನಿಗೆ ನಿಕ್ಕಿಯಾಗಿದೆ. ಆದರೆ ಚಾಮರಾಜನಗರದಿಂದ ಮಗನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಬೇಕಲ್ಲ?

ಇದೆಲ್ಲದರ ಹೊರತಾಗಿ ರಾಜಾಜಿನಗರದಿಂದ ತನ್ನ ರಿಯಲ್ ಎಸ್ಟೇಟ್ ಪರಮಾಪ್ತ ತಿಮ್ಮೇಗೌಡನನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಲ್ಲಿಸುವ ಇರಾದೆಯೂ ಸೋಮಣ್ಣನಿಗಿದೆ. ಈ ತಿಮ್ಮೇಗೌಡ ಬೇರೆ ಯಾರೂ ಅಲ್ಲ, ಕಳೆದ 30 ವರ್ಷಗಳಿಂದ ವಿಜಯನಗರದ ಶಾಸಕ ಕೃಷ್ಣಪ್ಪರ ಜೊತೆಗಿದ್ದಾತ. ಭೂ ವ್ಯವಹಾರದಲ್ಲಿ ತನ್ನ ಬಲಗೈಯಂತಿದ್ದ ತಿಮ್ಮೇಗೌಡನನ್ನೇ ತನ್ನ ವಿರುದ್ಧ ಎತ್ತಿ ಕಟ್ಟಿದ ಸೋಮಣ್ಣನ ವಿರುದ್ಧ ಶಾಸಕ ಕೃಷ್ಣಪ್ಪನವರಿಗೂ ಅದೇ ಮಟ್ಟದ ದುಷ್ಮನಿ ಹೆಡೆಯೆತ್ತಿದೆ. ಇದಕ್ಕೆ ಪ್ರತಿಯಾಗಿ ಆ ಕಾಲದಿಂದಲೂ ಸೋಮಣ್ಣನ ಮಾನಸ ಪುತ್ರನಂತಿದ್ದ ಮಾಜಿ ಡೆಪ್ಯುಟಿಮೇಯರ್ ಪುಟ್ಟರಾಜುವನ್ನು ಕೃಷ್ಣಪ್ಪ ಜೊತೆ ಹಾಕಿಕೊಂಡಿದ್ದಾರೆ.

ಹಾಗೊಮ್ಮೆ ರಾಜಾಜಿನಗರದ ಕಾಂಗ್ರೆಸ್ ಟಿಕೆಟ್ ಲಿಂಗಾಯತರಿಗೇ ಎಂದು ಪರೋಕ್ಷವಾಗಿ ಸೋಮಣ್ಣನನ್ನು ಕಾಂಗ್ರೆಸ್ ನಾಯಕರು ಬೆಂಬಲಿಸ ಹೊರಟರೆ ಅದಕ್ಕೆ ಪ್ರತಿಯಾಗಿ ಕೃಷ್ಣಪ್ಪ ಮಾಜಿ ಡೆಪ್ಯೂಟಿ ಪುಟ್ಟರಾಜುವನ್ನು ಸೋಮಣ್ಣನ ವಿರುದ್ಧ ಅಖಾಡಕ್ಕಿಳಿಸುತ್ತಾರೆ. ಹಾಗೊಮ್ಮೆ ಕೃಷ್ಣಪ್ಪನವರ ಹೆಗಲಿಗೆ ರಾಜಾಜಿನಗರದ ಹೊಣೆ ಬಿತ್ತೆಂದರೆ ಆಗ ಅದರ ವಿರುದ್ಧ ಸೋಮಣ್ಣ ತಿಮ್ಮೇಗೌಡರನ್ನು ಪ್ರಯೋಗಿಸುತ್ತಾರೆ. ಇದು ವಿಜಯನಗರದ ಜಿದ್ದಾಜಿದ್ದಿಯ ಮುಂದುವರಿಕೆಯಷ್ಟೆ. ಲ್ಯಾಂಡ್ ಡೀಲರ್ ತಿಮ್ಮೇಗೌಡರು ಈಗಾಗಲೇ ಒಕ್ಕಲಿಗರ ಸಂಘದ ಡೈರೆಕ್ಟರ್ ಎಂ.ಎ.ಆನಂದ್, ಮಾಜಿ ಕೌನ್ಸಿಲರ್ ಪದ್ಮಾವತಿ ಮತ್ತು ರಾಮಮಂದಿರದ ಮಾಜಿ ಕೌನ್ಸಿಲರ್ ಕಾಯಿಸೀನನ್ನು ಮುಂದಿಟ್ಟುಕೊಂಡು ಚುನಾವಣಾ ತಯಾರಿ ಆರಂಭಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ ಎಂ.ಕೃಷ್ಣಪ್ಪನವರೇನಾದರೂ ದೊಡ್ಡ ಮಟ್ಟದ ಕಲ್ಲಿಟ್ಟರೆಂದರೆ ಅದಕ್ಕೂ ಸೋಮಣ್ಣ ಪ್ರತಿತಂತ್ರವನ್ನು ರೂಪಿಸಿದ್ದಾನಂತೆ. ಅದೇನೆಂದರೆ ತನ್ನ ಬಲಗೈ ಬಂಟ ಮತ್ತು ಮಾಜಿ ಉಪಮೇಯರ್ ಆವಲಹಳ್ಳಿ ಲಕ್ಷ್ಮೀನಾರಾಯಣನನ್ನು ಜೆಡಿಎಸ್‌ಗೆ ಸೇರಿಸಿ ಕೃಷ್ಣಪ್ಪ ವಿರುದ್ಧ ವಿಜಯನಗರಕ್ಕೆ ಅಭ್ಯರ್ಥಿಯಾಗುವಂತೆ ಮಾಡುವುದು. ಹಾಗೊಮ್ಮೆ ಲಕ್ಷ್ಮೀನಾರಾಯಣ ಜೆಡಿಎಸ್‌ನಿಂದ ವಿಜಯನಗರಕ್ಕೆ ನಿಂತರೆಂದರೆ ಕೃಷ್ಣಪ್ಪ ಪಾಲಿಗದು ನಿಜಕ್ಕೂ ವಿಪತ್ತೇ ಸರಿ. ಆದರೆ ಈಗಾಗಲೇ ಕೃಷ್ಣಪ್ಪನವರ ಜಾತಿ ಋಣಕ್ಕೆ ಬದ್ಧರಿರುವ ದೇವೇಗೌಡ ಮತ್ತು ಕುಮಾರಸ್ವಾಮಿ ಸೋಮಣ್ಣನ ಈ ತಂತ್ರಕ್ಕೆ ಸೊಪ್ಪು ಹಾಕುತ್ತಾರಾ? ಕೃಷ್ಣಪ್ಪ ವಿರುದ್ಧ ಏನೇ ಲಗಾಟ ಹೊಡೆದರೂ ಸೋಮಣ್ಣನಿಗೆ ಬರಕತ್ತಾಗುತ್ತಿಲ್ಲವೆಂಬುದೇ ಆತನ ಅಸಲೀ ದುರಂತ.

ಸೋಮಣ್ಣನ ವಿಷಯದಲ್ಲಿ ಸುತ್ತೂರು ಸ್ವಾಮಿಯಿಂದ ಹಿಡಿದು ಸಿದ್ಧಗಂಗಾಮಠ, ಬೇಲಿಮಠದ ಸ್ವಾಮಿಗಳೂ ಒಂದು ಹಂತದವರೆಗೆ ತಲೆದೂಗುವುದುಂಟು. ಮುಂಬರುವ ಚುನಾವಣೆಯಲ್ಲಿ ಸಿದ್ದರಾಮಯ್ಯನವರ ವಿರುದ್ಧ ಯಡಿಯೂರಪ್ಪನವರ ಛೇಲಾ ಸಿದ್ಧಲಿಂಗಸ್ವಾಮಿ ಹಾವಳಿಯಿಟ್ಟನೆಂದರೆ ಅದಕ್ಕೂ ಸೋಮಣ್ಣನೇ ಬೇಕು. ಕನಕಪುರದಲ್ಲಿ ಈಗಾಗಲೇ ಡೀಕೆಗೆ ಅಪಾಯ ಆವರಿಸಿರುವುದರಿಂದ ಅಲ್ಲಿನ ಲಿಂಗಾಯತ ಮತದಾರರ ಮೇಲೆ ಗಣನೀಯ ಪ್ರಭಾವವಿರುವ ಸಿಟಿಓ ರಾಜಣ್ಣನನ್ನು ಡೀಕೆ ಪರ ಜಗ್ಗಿಸಬೇಕೆಂದರೆ ಅದಕ್ಕೂ ಸೋಮಣ್ಣನೇ ಬೇಕು. ರಾಜಧಾನಿ ಬೆಂಗಳೂರು ಮತ್ತು ಮೈಸೂರು ಸೀಮೆಯ ಲಿಂಗಾಯತರ ಮಟ್ಟಿಗೆ ಶಾಮನೂರು-ಖಂಡ್ರೆಗಿಂತಲೂ ಸೋಮಣ್ಣನೇ ಅಧಿಕ ಪ್ರಯೋಜನಕಾರಿಯೆಂಬ ಪುಕಾರೊಂದನ್ನು ಸ್ವತಃ ಸೋಮಣ್ಣನೇ ತೇಲಿ ಬಿಟ್ಟಿದ್ದಾನೋ ಅಥವಾ ಅದು ಸೋಮಣ್ಣನ ಪರಮಾಪ್ತ ಪರಮೇಶ್ವರ್ ಲೆಕ್ಕಾಚಾರವೋ ಗೊತ್ತಿಲ್ಲ.

ಇದಕ್ಕೆ ತಕ್ಕಂತೆ ಬೆಂಗಳೂರು ನಗರದ ಕಾಂಗ್ರೆಸ್ ಅಧಿಪತಿಗಳಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಆರ್.ವಿ.ದೇವರಾಜ್‌ರಂಥ ನಾಯಕರೂ ಸೋಮಣ್ಣನ ವಿಷಯದಲ್ಲಿ ಮೆದುವಾಗಿದ್ದಾರೆ. ನಿನ್ನೆ ಮೊನ್ನೆಯ ತನಕ ಸೋಮಣ್ಣನ ವಿರುದ್ಧ ಕತ್ತಿ ಮಸೆಯುತ್ತಿದ್ದ ಈ ನಾಯಕರಿಗೀಗ ಕಟ್ಟಾ-ಅಶೋಕ್‌ಗಿಂತಲೂ ಸೋಮಣ್ಣನೇ ಸರಿಯೆಂಬ ಜ್ಞಾನೋದಯವಾಗಿದೆಯಂತೆ.

ಬಹುಶಃ ಇದೆಲ್ಲವೂ ಅಧಿಕಾರ ದಾಹದಿಂದ ಹುಟ್ಟಿರಲಿಕ್ಕೂ ಸಾಕು. ಆದರೆ ಸೋಮಣ್ಣ ಮಾತ್ರ ತನಗೆ

→ 13

ಧಾರ್ಮಿಕ ಕೇಂದ್ರಗಳು ರಾಷ್ಟ್ರೀಕರಣಗೊಳ್ಳಬೇಕು

'ನಮ್ಮ ದೇವಾಲಯ, ಮಂದಿರಗಳು ವಿದ್ಯಾ ಕೇಂದ್ರ ಗಳಾಗಬೇಕು, ವಿದ್ಯಾರ್ಥಿನಿಲಯ ಹಾಗೂ ಗ್ರಂಥಾಲಯ ಗಳಾಗಬೇಕು' ಎಂದು ಹೇಳಿದ ಕೇರಳದ ನಾರಾಯಣ ಗುರು; 'ಗುಡಿ ಚರ್ಚು ಮಸಜೀದುಗಳ ಬಿಟ್ಟು ಹೊರ ಬನ್ನಿ' ಎಂದು ಹೇಳಿದ ಕುವೆಂಪು; 'ಆಧುನಿಕ ಭಾರತದ ನಿಜವಾದ ದೇವಾಲಯಗಳೆಂದರೆ ಅಣೆಕಟ್ಟೆಗಳು, ಆಸ್ಪತ್ರೆಗಳು, ಶಾಲೆ ಮತ್ತು ಹಾಸ್ಟೆಲ್‌ಗಳು' ಎಂದು ಹೇಳಿದ ನೆಹರು; 'ದಲಿತರಿಗೆ ದೇವಾಲಯ ಪ್ರವೇಶಕ್ಕಿಂತ, ಲೋಕಸಭೆ ಮತ್ತು ವಿಧಾನಸಭೆಗಳ ಪ್ರವೇಶ ಮಹತ್ತರವಾದುದು' ಎಂದು ಹೇಳಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ಮಾತುಗಳನ್ನು ಗಂಭೀರವಾದ ಚರ್ಚೆಗೆ ಒಳಪಡಿಸಬೇಕಿದೆ. ಈ ಬಗೆಯ ಅಭಿಪ್ರಾಯಗಳ ಹಿಂದಿರುವ ಕಾರಣಗಳೇನು? ಎಂಬ ಪ್ರಶ್ನೆಗಳನ್ನ ಕೇಳಿಕೊಂಡದ್ದೇ ಆದರೆ ಅವುಗಳ ಮಹತ್ವ, ಅನಿವಾರ್ಯತೆ ಹಾಗೂ ಅಗತ್ಯತೆಗಳು ಸ್ಪಷ್ಟವಾಗುತ್ತವೆ.

ಜಾತಿ, ಅಸ್ಪೃಶ್ಯತೆ, ಅಸಮಾನತೆಗಳು ಈ ದೇಶಕ್ಕೆ ಕಂಟಕಗಳಾಗಿರುವ ಹಾಗೆ, ಮಂದಿರ ಮಸೀದಿ, ಚರ್ಚುಗಳು ಸಹಾ ಸಾಮಾಜಿಕ ಸಮಸ್ಯೆಗಳಾಗಿ ಪರಿಣಮಿಸಿರುವುದು ದುರಂತವೇ ಸರಿ. ಇದಕ್ಕೆ ಸಾಕ್ಷಿಯಾಗಿ ನಮ್ಮ ಮುಂದೆ ಬಾಬ್ರಿಮಸೀದಿಯ ಧ್ವಂಸ, ರಾಮಜನ್ಮಭೂಮಿಯ ತಕರಾರು, ಗೋದ್ರಾ ಘಟನೆ, ಬಾಬಾಬುಡನ್‌ಗಿರಿಯ ಸಮಸ್ಯೆ, ಬದನವಾಳು ದುರಂತ, ದೇವದಾಸಿಯರನ್ನು ಸೃಷ್ಟಿಸುವ ಸವದತ್ತಿ ಎಲ್ಲಮ್ಮ, ಗುಲ್ಬರ್ಗಾದ ಮಾಪುರತಾಯಿ ದೇವಾಲಯಗಳು ಹಾಗೂ ಚರ್ಚ್‌ಗಳ ಮೇಲಿನ ದಾಳಿಯ ಘಟನೆಗಳಿವೆ. ಇದರ ಅಪಾಯಗಳನ್ನ ಅರಿತಿದ್ದ ಕವಿರಾಜಮಾರ್ಗಕಾರ "ಪರರ ಧರ್ಮ, ಪರರ ವಿಚಾರವನ್ನು ಸೈರಿಸುವುದೆ ನಿಜವಾದ ಚಿನ್ನ" ಎಂಬ ಉದಾತ್ತ ಮೌಲ್ಯವನ್ನು ಪ್ರತಿಪಾದಿಸಿರುವುದನ್ನು ಕಾಣಬಹುದು. ಈ ಕಾರಣದಿಂದಲೇ ಪಿ. ಲಂಕೇಶ್ ಹೇಳಿದ್ದು "ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ" ಎಂದು.

ಸಾಮರಸ್ಯದ ತಾಣಗಳಾಗಬೇಕಿದ್ದ ಧಾರ್ಮಿಕ ಕೇಂದ್ರಗಳು ಅಸಮಾನತೆಯ, ಅಜ್ಞಾನದ, ಅನೈತಿಕತೆಯ ನೆಲೆಗಳಾಗಿವೆ. ಈ ದೇಶದ ಧಾರ್ಮಿಕ ಕೇಂದ್ರಗಳು ಜಾತಿ, ಅಸ್ಪೃಶ್ಯತೆ, ಅಸಮಾನತೆ, ಮತಾಂಧತೆಯನ್ನ ಆಚರಿಸುವ; ಮೌಢ್ಯ ಕಂದಾಚಾರಗಳನ್ನ ಪ್ರತಿಪಾದಿಸುವ; ತೆರೆಮರೆಯಲ್ಲಿ ಜಾತಿ ರಾಜಕಾರಣವನ್ನು ನಿರ್ದೇಶಿಸುವ, ನಿಯಂತ್ರಿಸುವ; ಅನ್ಯಧರ್ಮೀಯ, ಜನಾಂಗಿಕ ದ್ವೇಷವನ್ನು ಬಿತ್ತುವ; ಸಮಾಜ ಸೇವೆಯ ನೆಪದಲ್ಲಿ ರಾಷ್ಟ್ರ ಸಂಪತ್ತನ್ನು ದೋಚುವ; ಅಕ್ಷರ ಸೇವೆಯನ್ನ ಬಂಡವಾಳ ಮಾಡಿಕೊಂಡು ಬಿಸಿನೆಸ್ಸ್ ಮಾಡುವ; ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿನ ನೇಮಕಾತಿ ಹಾಗೂ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಸಾಮಾಜಿಕ ನ್ಯಾಯವನ್ನು ಗಾಳಿಗೆ ತೂರುವ; ನ್ಯಾಯಯುತವಾದ ತೆರಿಗೆಯನ್ನು ಕಟ್ಟದೆ ಸರ್ಕಾರಕ್ಕೆ ವಂಚನೆ ಎಸಗುತ್ತ ಸಂವಿಧಾನಕ್ಕೆ ದ್ರೋಹ ಬಗೆಯುವಲ್ಲಿ ಸಕ್ರಿಯವಾಗಿವೆ.

ಗಾಂಧೀಜಿಯವರು ಒಮ್ಮೆ ಉಡುಪಿಗೆ ಬಂದಿದ್ದ ಸಂದರ್ಭದಲ್ಲಿ ಶ್ರೀ ಕೃಷ್ಣ ದೇವಾಲಯಕ್ಕೆ ಭೇಟಿ ಕೊಡುತ್ತಾರೆ. ದೇವಾಲಯವನ್ನು ಪ್ರವೇಶಿಸುವ ಮುನ್ನ ಅಲ್ಲಿನ ಪುರೋಹಿತರನ್ನ 'ಈ ದೇವಾಲಯಕ್ಕೆ ಎಲ್ಲ ಜಾತಿಯ ಜನರಿಗೆ ಮುಕ್ತ ಪ್ರವೇಶವಿದೆಯೆ?' ಎಂದು ಪ್ರಶ್ನಿಸುತ್ತಾರೆ. ಕೆಳಜಾತಿ ಜನರಿಗೆ ಪ್ರವೇಶವಿಲ್ಲ ಎಂಬ ವಿಚಾರ ತಿಳಿದಾಗ 'ಕೆಳಜಾತಿಯ ಜನರ ಪ್ರವೇಶವನ್ನು ನಿರಾಕರಿಸಿರುವ ಈ ದೇವಾಲಯವನ್ನ ನಾನು ಪ್ರವೇಶಿಸುವುದಿಲ್ಲ' ಎಂದು ಹೇಳಿ, ಕನಕನ ಕಿಂಡಿಯ ಮೂಲಕ ಕೃಷ್ಣನ ದರ್ಶನ ಮಾಡುತ್ತಾರೆ. ಇವತ್ತಿಗೂ ಉಡುಪಿಯ ಕೃಷ್ಣ ದೇವಾಲಯದಲ್ಲಿ ಆಚರಣೆಯಲ್ಲಿರುವ ಪಂಕ್ತಿಭೇದ ನೀತಿ; ಕನಕ ಗೋಪುರದ ವಿಚಾರವಾಗಿ ಹುಟ್ಟಿಕೊಂಡಿರುವ ವಿವಾದ, ಕುಕ್ಕೆಸುಬ್ರಹ್ಮಣ್ಯ ದೇವಾಲಯದಲ್ಲಿ ಮಡೆಸ್ನಾನದ ಆಚರಣೆ, ದೇವರಿಗೆ ಕೆಳಜಾತಿಯ ಹೆಣ್ಣುಮಕ್ಕಳನ್ನು ಬಸವಿ ಬಿಡುವ, ಬೆತ್ತಲೆ ಸೇವೆ, ಬೇವಿನುಡುಗೆ-ಗಂಧದುಡುಗೆ ಸೇವೆ, ಓಕುಳಿ ಆಚರಣೆ, ದೇವದಾಸಿ ಪದ್ಧತಿಗಳು ದೇವಾಲಯಗಳಲ್ಲಿ ಇಂದಿಗೂ ಜೀವಂತವಾಗಿರುವ ಅಸ್ಪೃಶ್ಯತೆಯ ಆಚರಣೆಯನ್ನು ಸಾಬೀತುಪಡಿಸುತ್ತವೆ.

ಈ ಸಮಾಜದಲ್ಲಿ ಬೂದಿ ಮುಚ್ಚಿದ ಕೆಂಡದಂತಿದ್ದ ಅಸ್ಪೃಶ್ಯತೆ ಆಚರಣೆ ಬಯಲಾಗಿದ್ದು ಎರಡು ಸಂದರ್ಭಗಳಲ್ಲಿ. 1. ಸರ್ಕಾರ ಶಾಲೆಗಳಲ್ಲಿ ಬಿಸಿಯೂಟ ಪದ್ಧತಿಯನ್ನು ಜಾರಿಗೆ ತಂದಾಗ 2. ಮಕ್ಕಳ ಶಿಕ್ಷಣ ಹಕ್ಕು ಅಧಿನಿಯಮ (ಆರ್‌ಟಿಇ) 2009 ಕಾಯ್ದೆಯನ್ನ ಜಾರಿಗೆ ತಂದಾಗ.

ಶಾಲೆಗಳಲ್ಲಿ ದಲಿತ ಹೆಣ್ಣು ಮಗಳು ಅಡಿಗೆ ಮಾಡಿದರೆ ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲವೆಂದು ಜಾತಿವಾದಿ ಪೋಷಕರು ಪ್ರತಿಭಟಿಸಿದಾಗ; 'ಕೆಳಜಾತಿಯ ಮಕ್ಕಳನ್ನು ಆರ್‌ಟಿಇ ಕಾಯ್ದೆ ಮೂಲಕ ನಮ್ಮ ಶಾಲೆಗೆ ಸೇರಿಸಿಕೊಂಡರೆ ಸಮುದ್ರಕ್ಕೆ ಕೊಳಚೆ ನೀರು ಬಿಟ್ಟಂತೆ' ಎಂದು ಹೇಳಿದ ಅಜ್ಞಾನಿಗಳಿಗೆ ಬುದ್ಧಿ ಹೇಳದ ನಮ್ಮ ಸರ್ಕಾರ ಶಾಲೆಗಳಿಗೆ ಬಿಸಿಯೂಟ ಹಂಚುವ ಹೊಣೆಗಾರಿಕೆಯನ್ನು ಮಠಮಾನ್ಯಗಳಿಗೆ ವಹಿಸಿತು. ಆ ಮಠಮಾನ್ಯಗಳು ಬಿಸಿಯೂಟದ ಜೊತೆ ಕೋಮುವಾದ, ಮತಾಂಧತೆಯನ್ನು ಹಂಚಲಾರಂಭಿಸಿದವು. ಈ ಕಾಯಕಕ್ಕೆ ಸರ್ಕಾರ ಅಧಿಕೃತ ಒಪ್ಪಿಗೆ ಕೊಟ್ಟದ್ದಲ್ಲದೆ, ಅನುದಾನವನ್ನು ಕೊಟ್ಟು ಕೃತಾರ್ಥವಾಯಿತು. ಇದರ ಜೊತೆಗೆ ಇವತ್ತಿನ ಕೋಮುವಾದಿ, ಜಾತಿವಾದಿ ಸರ್ಕಾರಗಳು ಸಾರ್ವಜನಿಕರ ತೆರಿಗೆಯ ಹಣವನ್ನು ಜಾತಿವಾದಿ ಮಂದಿರ, ಮಠಗಳಿಗೆ ಅನುದಾನ ನೀಡುವ ಮೂಲಕ ಜಾತಿ ಕೇಂದ್ರಗಳನ್ನು ಬೆಂಬಲಿಸುತ್ತಿರುವುದು ಪ್ರಜಾಪ್ರಭುತ್ವ ವಿರೋಧಿ ಧೋರಣೆಯಾಗಿದೆ.

ಸಾರ್ವಜನಿಕರಿಂದ ತೆರಿಗೆಯ ಸ್ವರೂಪದಲ್ಲಿ ಸಂಗ್ರಹವಾದ ಸಾರ್ವಜನಿಕ ಹಣವನ್ನು ಕೆಲವೇ ಜಾತಿವಾದಿ ಮಠ ಮಂದಿರಗಳಿಗೆ ಅನುದಾನವಾಗಿ ನೀಡುವುದು ಯಾವ ಬಗೆಯ ನೈತಿಕತೆ? ಇದು ಒಂದು ರೀತಿಯಲ್ಲಿ ಸರ್ವಾಧಿಕಾರಿ ಧೋರಣೆಯಾಗಿದೆ. ನಮ್ಮ ನಡುವೆ ಇವತ್ತಿಗೂ ಜ್ವಲಂತ ಸಮಸ್ಯೆಯಾಗಿರುವ ಹಸಿವು, ಬಡತನ, ನಿರುದ್ಯೋಗ ನಿವಾರಣೆ ಹಾಗೂ ಅಸಂಖ್ಯಾತ ಕೊಳಗೇರಿಗಳಲ್ಲಿನ ಮೂಲಭೂತ ಸೌಕರ್ಯಗಳಿಗಾಗಿ ಬಳಸಬೇಕಾದ ಸಾರ್ವಜನಿಕ ಹಣವನ್ನು ಮಠಮಾನ್ಯಗಳಿಗೆ ಹಂಚುವುದು ಎಷ್ಟರಮಟ್ಟಿಗೆ ಸರಿ? ಉತ್ತರ ಕರ್ನಾಟಕದಲ್ಲಿ ನೆರೆಹಾವಳಿ ಬಂದು ಮನೆಮಠ, ಬದುಕನ್ನು ಕಳೆದುಕೊಂಡವರಿಗೆ; ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ; ಹಸಿವು, ಬಡತನದ ಕಾರಣ ಹಳ್ಳಿಗಳಿಂದ ಗುಳೆ ಹೊರಟ ಅಸಂಖ್ಯಾತ ಬಡವರಿಗೆ; ಬಾಲ್ಯ ಕಳೆದುಕೊಂಡ ಬಾಲಕಾರ್ಮಿಕರಿಗೆ; ಮೈಮಾರಿಕೊಂಡು ಬದುಕುತ್ತಿರುವ ವೇಶ್ಯೆಯರಿಗೆ; ಬದುಕಿನ ಅಸ್ತಿತ್ವದ ಹುಡುಕಾಟದಲ್ಲಿ ಕಂಗಾಲಾಗಿರುವ ಅಸಂಖ್ಯಾತ ವಿದ್ಯಾವಂತ ನಿರುದ್ಯೋಗಿಗಳಿಗೆ; ನಮ್ಮ ನಗರಗಳನ್ನ ಚಂದಗಾಣಿಸುತ್ತ ತಾವು ಮಾತ್ರ ಕೊಳಗೇರಿಗಳಲ್ಲಿ ಬದುಕುತ್ತ ಮ್ಯಾನ್ ಹೋಲ್‌ಗಳಲ್ಲಿ ಉಸಿರುಕಟ್ಟಿ ಸಾಯುತ್ತಾ, ಕಾಯಕಕ್ಕೆ ತಕ್ಕ ಕೂಲಿಸಿಗದೆ ಗುತ್ತಿಗೆದಾರರ ಶೋಷಣೆಯಿಂದ ಬಸವಳಿದ ಪೌರಕಾರ್ಮಿಕರಿಗೆ ಸದ್ಬಳಕೆಯಾಗಬೇಕಿದ್ದ ಸಾರ್ವಜನಿಕ ಹಣ ಮಠಮಾನ್ಯಗಳಿಗೆ ಹಂಚಿಕೆಯಾಗುತ್ತಿರುವುದು ಸಾಮಾಜಿಕ ಅಪರಾಧವಲ್ಲವೆ?

ಬಸವಣ್ಣನ ವಾರಸುದಾರರೆಂದು ಬೀಗುವ ಸ್ವಾಮೀಜಿಗಳು ಕನಿಷ್ಠ ವಿವೇಕವಿಲ್ಲದೆ ಪೈಪೋಟಿಯಿಂದ ಸರ್ಕಾರದಿಂದ ಅನುದಾನದ ಹಣ ಪಡೆಯುತ್ತಿರುವುದು ನಾಚಿಕೆ ತರುವಂತಹದ್ದು. ಸರ್ಕಾರದ ಅನುದಾನವನ್ನು ಪಡೆದಿರುವ ಮಠ, ಸ್ವಾಮೀಜಿಗಳು ಒಂದರ್ಥದಲ್ಲಿ ಸಾಮಾಜಿಕ ಅಪರಾಧಿಗಳೇ. ಹಾಗೆಯೇ ಸರ್ಕಾರ ಕೂಡ ಯಾವ ಯಾವ ಜಾತಿ ಮಠಗಳಿಗೆ ಅನುದಾನ ಕೊಟ್ಟಿದೆ, ಯಾವ ಮಠಗಳಿಗೆ ಕೊಟ್ಟಿಲ್ಲ? ಸರ್ಕಾರ ಅನುದಾನ ಕೊಡುವ ಧಾರ್ಮಿಕ ಸಂಸ್ಥೆಗಳ ಪಟ್ಟಿಯಲ್ಲಿ ಮಸೀದಿ, ಚರ್ಚು ಹಾಗೂ ಅನ್ಯ ಧಾರ್ಮಿಕ ಸಂಸ್ಥೆಗಳು ಇದ್ದಾವೆಯೇ? ಇಲ್ಲವೇ? ಎಂಬುದನ್ನು ನೋಡಿದರೆ ಅದರ ಜಾತಿವಾದಿ ತಾರತಮ್ಯ ಧೋರಣೆ ಬಯಲಾಗುತ್ತದೆ. ಸಾರ್ವನಿಕ ಹಣವನ್ನು ಮಠಮಾನ್ಯಗಳು ಕೊಳ್ಳೆಹೊಡೆಯುತ್ತಿದ್ದಾಗ, ಸರ್ಕಾರ ಕೊಡಲು ಬಂದ ಅನುದಾನದ ಹಣವನ್ನು ಬೇಡವೆಂದ ಏಕೈಕ ಮಠವೆಂದರೆ ಅದು ಕೈವಾರ ತಾತಯ್ಯನ ಮಠ. ಅಷ್ಟರಮಟ್ಟಿಗೆ ಅದು ತನ್ನ ನೈತಿಕತೆಯನ್ನ ಕಾಪಾಡಿಕೊಂಡಿದೆ.

ಸರ್ಕಾರ ಮಠಮಾನ್ಯಗಳಿಗೆ ಅನುದಾನ ಕೊಡುತ್ತಿರುವ ಸಂಗತಿಯು, ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಬರುವ ಒಂದು ಘಟನೆಯನ್ನು ನೆನಪಿಗೆ ತರುತ್ತದೆ. ರಾಜ ಹರಿಶ್ಚಂದ್ರ ತನ್ನ ಅರಮನೆಗೆ ಸಾಧು-ಸಂತರನ್ನ, ಋಷಿ-ಮುನಿಗಳನ್ನ ಬರಮಾಡಿಕೊಂಡು ಅವರನ್ನ ಸತ್ಕರಿಸಿ, ದಾನಧರ್ಮ ಮಾಡುತ್ತಿರುವ ವಿಚಾರ ತಿಳಿದ ವಿಶ್ವಾಮಿತ್ರ ಆತನನ್ನು ಪರೀಕ್ಷಿಸುವ ಸಲುವಾಗಿ, ತಾನು ಬೇಡಿದ್ದೆಲ್ಲವನ್ನು ನೀಡುವೆಯಾ? ಎಂದು ಪ್ರಶ್ನಿಸುತ್ತಾನೆ. ಹರಿಶ್ಚಂದ್ರ ಇದಕ್ಕೊಪ್ಪಿದಾಗ 'ಎತ್ತರದ ಆನೆಯ ಮೇಲೆ ಬಲಿಷ್ಠನಾದ ವ್ಯಕ್ತಿಯೊಬ್ಬ ನಿಂತು, ತನ್ನ ತೋಳ್‌ಬಲದಿಂದ ಕವಡೆಯನ್ನು ಆಕಾಶದೆತ್ತರಕ್ಕೆ ಜೋರಾಗಿ ಚಿಮ್ಮಿದರೆ ಅದು ಎಷ್ಟು ಎತ್ತ[ರಕ್ಕೆ] ಹೋಗುತ್ತದೊ ಅಷ್ಟು ಎತ್ತರದ ಹೊಸ ಹೊನ್ನ ರಾ[ಶಿ] ಬೇಕು' ಎಂಬ ಬೇಡಿಕೆಯನ್ನ ವಿಶ್ವಾಮಿತ್ರ ಹರಿಶ್ಚಂದ್ರ[ನ] ಮುಂದಿಡುತ್ತಾನೆ. ಈ ಬೇಡಿಕೆಗೆ ಹರಿಶ್ಚಂದ್ರ ಒಪ್ಪುತ್ತಾ[ನೆ]. ಪ್ರಶ್ನೆ ಇರುವುದು ಇಲ್ಲೆ, ಹರಿಶ್ಚಂದ್ರ ಕೊಡಲೊಪ್ಪಿರು[ವ] ಬೊಕ್ಕಸದಲ್ಲಿ ಸಂಗ್ರಹವಾಗಿರುವ ಹೊಸ ಹೊನ್ನ ರಾ[ಶಿ] ಯಾರದು? ಪ್ರಜೆಗಳ ಸುಂಕದಿಂದ ಸಂಗ್ರಹಿಸಲಾದ ಬೊಕ್ಕಸ[ದ] ಹಣವನ್ನ ಪ್ರಜೆಗಳ ಒಪ್ಪಿಗೆ ಇಲ್ಲದೆ ದಾನ ಮಾಡಲ[ು] ಹರಿಶ್ಚಂದ್ರನಿಗೆ ಯಾವ ನೈತಿಕ ಹಕ್ಕಿದೆ? ಇದೇ ಪ್ರಶ್ನೆಗಳನ್ನ ಇವತ್ತು ಮಠಮಾನ್ಯಗಳಿಗೆ, ಸರ್ಕಾರದ ಸಾರ್ವಜನಿ[ಕ] ಹಣವನ್ನು ಅನುದಾನ ನೀಡುತ್ತಿರುವ ರಾಜಕಾರಣಿಗಳ[ನ್ನು] ಕೇಳಬೇಕಿದೆ.

ಪಾಶ್ಚಾತ್ಯ ಚಿಂತಕರೊಬ್ಬರು ಹೇಳುವ ಹಾಗೆ 'ಧರ್ಮ ಅಫೀಮು ಇದ್ದ ಹಾಗೆ'. ದೇವರು, ಧರ್ಮ, ಮತಗಳಿ[ಗೆ] ಸಂಬಂಧಿಸಿದ ನಂಬಿಕೆ, ಆಚರಣೆಗಳು ಎಲ್ಲಿಯವರೆ[ಗೆ] ಖಾಸಗಿಯಾದ, ವೈಯಕ್ತಿಕ ನೆಲೆಯ ಮುಗ್ಧತೆಯ ಗೆರೆಗಳ[ನ್ನು] ದಾಟುವುದಿಲ್ಲವೋ ಅಲ್ಲಿಯವರೆಗೆ ಅವುಗಳಿಂದ ಯಾವುದ[ೇ] ಅಪಾಯವಿಲ್ಲ. ಆ ಎಲ್ಲೆಗಳನ್ನ ಮೀರಿದ್ದೇ ಆದ[ರೆ] ದುರಂತಗಳು ಸಂಭವಿಸುತ್ತವೆ. ಹಾಗಾಗಿ ಇವತ್ತು ಧಾರ್ಮಿ[ಕ] ನೆಲೆಯ ಮತಾಂಧತೆ ಜಾಗತಿಕ ಮಟ್ಟದ ಬಹುದೊ[ಡ್ಡ] ಸಮಸ್ಯೆಯಾಗಿದೆ. ನಮ್ಮನ್ನು ಕಾಡುತ್ತಿರುವ ಭಯೋತ್ಪಾದನೆಯ ಮೂಲ ಬೇರುಗಳು ಧಾರ್ಮಿಕ ಕೇಂದ್ರಗಳಲ್ಲಿರುವುದ[ು] ವಾಸ್ತವ ಹಾಗೂ ಭಯಾನಕ ಸಂಗತಿಯಾಗಿದೆ. ಇನ[್ನು] ನಮ್ಮ ರಾಜಕಾರಣಿಗಳು ಅಧಿಕಾರ ವಹಿಸಿಕೊಳ್ಳುವಾಗ ಯಾರ್ಯಾರ ಹೆಸರಿನಲ್ಲಿ; ಯಾರ್ಯಾರ ಪಾದ ಮುಟ್ಟಿ; ಯಾವ್ಯಾ[ವ] ಧರ್ಮ, ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸು[ವ] ಸಂದರ್ಭದ ಅವರ ನಡವಳಿಕೆಗಳು ನಾಚಿಕೆ ತರಿಸುವಂತವು. ಇದು ಒಂದರ್ಥದಲ್ಲಿ ಸಂವಿಧಾನ ವಿರೋಧಿ ನಿಲುವೆ ಆಗಿದೆ.

ಸಂವಿಧಾನಕ್ಕೆ ಬದ್ಧರಾಗಿಲ್ಲದ ನಮ್ಮ ಅಪ್ರಾಮಾಣಿ[ಕ] ರಾಜಕಾರಣಿಗಳು ಇಂಗ್ಲೆಂಡಿನ ಚಾರ್ಲ್ಸ್ ಬ್ರಾಡ್ಲಾನಿಂದ ಪಾ[ಠ] ಕಲಿಯಬೇಕಿದೆ. ಗುಮಾಸ್ತನ ಮಗನಾದ ಚಾರ್ಲ್ಸ್ ಬ್ರಾಡ್ಲಾ ತನ್ನ ಜನಾನುರಾಗಿ ವ್ಯಕ್ತಿತ್ವದಿಂದಾಗಿ 1880ರಲ್ಲಿ ನಾರ್ಥ್[ಾ]ಹಾಂಪ್ಟನ್ ಕ್ಷೇತ್ರದಿಂದ ಸಂಸತ್ತಿಗೆ ಆಯ್ಕೆಯಾಗುತ್ತಾನೆ. ಅವತ್ತಿನ ಇಂಗ್ಲೆಂಡಿನ ಪದ್ಧತಿಯ ಪ್ರಕಾರ ರಾಜಕಾರಣಿಗಳು ಅಧಿಕಾರ ಸ್ವೀಕರಿಸುವಾಗ ಕಡ್ಡಾಯವಾಗಿ 'ದೇವರ ಅನುಗ್ರಹದಿಂದ' ಎಂದು ಹೇಳಬೇಕಿತ್ತು. ಆದರೆ ಬ್ರಾಡ್ಲಾ 'ನಾನು ಪ್ರಜೆಗಳ ಪ್ರತಿನಿಧಿ' ಎಂದು ಹೇಳಿ ಆ ಸಂಪ್ರದಾಯವನ್ನು ವಿರೋಧಿಸಿದ ಕಾರಣ ಅಧಿಕಾರವನ್ನು ಕಳೆದುಕೊಂಡು ಜೈಲು ಶಿಕ್ಷೆಗೆ ಗುರಿಯಾಗಬೇಕಾಯಿತು. ಬ್ರಾಡ್ಲಾನ ಪರ ಸುಮಾರು 8000 ಜನ ಪ್ರತಿಭಟನೆ ನಡೆಸಿದರು. ತನ್ನ ನಿಲುವಿಗೆ ಬದ್ಧನಾಗಿದ್ದ ಬ್ರಾಡ್ಲಾನನ್ನು ಜನ ಮುಂದೆ ನಾಲ್ಕು ಸಲ ಅತಿ ಹೆಚ್ಚು ಬಹುಮತದಿಂದ ಗೆಲ್ಲಿಸಿದರು (ವೇದಾಂತ ರೆಜಿಮೆಂಟ್-ಬಿ.ವಿ. ವೀರಭದ್ರಪ್ಪ).

ಇಷ್ಟೆಲ್ಲಾ ವಿಚಾರ ವಿಶ್ಲೇಷಣೆಯ ಮೂಲ ಉದ್ದೇಶ "ಭೂಮಿಯನ್ನೂ ಒಳಗೊಂಡಂತೆ, ಈ ದೇಶದ ಮಂದಿರ, ಮಸೀದಿ, ಚರ್ಚುಗಳು; ಅವುಗಳ ಅಕ್ರಮ ಆಸ್ತಿ, ಸಂಪತ್ತು ರಾಷ್ಟ್ರೀಕರಣಗೊಳ್ಳಬೇಕು. ಎಲ್ಲ ಜಾತಿ, ಮತ, ಧರ್ಮದ ಜನ ಮುಕ್ತವಾಗಿ ಮಂದಿರ, ಮಸೀದಿ, ಚರ್ಚುಗಳನ್ನು ಪ್ರವೇಶಿಸಿ ತಮಗಿಷ್ಟಬಂದ ದೇವರುಗಳನ್ನ ತಮಗಿಷ್ಟಬಂದರೀತಿ ಆರಾಧಿಸುವಂತಾಗಬೇಕು. ದೇವರು, ಧರ್ಮಗಳ ವಿಚಾರಗಳು ಖಾಸಗಿಯಾಗಿರಬೇಕು. ನಾವೆಲ್ಲ ಭಾರತೀಯರೆಂಬ ವಾಸ್ತವ ಮಾತ್ರ ಸಾರ್ವಕಾಲಿಕ ಸತ್ಯವಾಗಬೇಕು."

● ಡಾ.ಅಪ್ಪಗೆರೆ ಸೋಮಶೇಖರ್



'...ನರೋಡಾ ಪಾಟಿಯಾ ಪ್ರಕರಣದಲ್ಲಿ ಸಬರ್ಮತಿ ಎಕ್ಸ್‌ಪ್ರೆಸ್ ರೈಲಿನ ಬೋಗಿಯೊಂದಕ್ಕೆ ಬೆಂಕಿಕೊಟ್ಟು ಅದರಲ್ಲಿದ್ದ ಸುಮಾರು 50 ಮಹಿಳೆಯರು ಮತ್ತು ಮಕ್ಕಳು ನಿಧಾನವಾಗಿ ಬೆಂದು ಕರಟಿಹೋದ ದುರಂತಕ್ಕೆ ಯಾವುದೇ ಪ್ರಚಾರ ನೀಡದೆ ಮಾಧ್ಯಮಗಳು ನರೋಡಾ ಪಾಟಿಯಾದಲ್ಲಿ ನಡೆದ ಅಪರಾಧಗಳಿಗೆ ಅಗತ್ಯಕ್ಕಿಂತ ಹೆಚ್ಚು ಪ್ರಚಾರ ನೀಡಿ ಹಿಂದೂಗಳು ಅಪರಾಧಿ ಪ್ರಜ್ಞೆಯಿಂದ ಬಳಲುವಂತೆ ಮಾಡಿವೆ...'

- ಎಂ.ವಿ.ಕಾಮತ್ (ಉದಯವಾಣಿ, ಮಣಿಪಾಲ ಆವೃತ್ತಿ, 21.10.12, 'ನಮ್ಮ ನಡುವಿನ ರಾಷ್ಟ್ರದ್ರೋಹಿಗಳು')

ಮರುಸ್ಮೃತಿ: ಗೋಧ್ರಾ ಅಗ್ನಿ ದುರಂತದಲ್ಲಿ ಸತ್ತವರು ಒಟ್ಟು 59 ಮಂದಿ (22 ಪುರುಷರು, 27 ಮಹಿಳೆಯರು ಮತ್ತು 10 ಮಕ್ಕಳು).

ಎಂ.ವಿ.ಕಾಮತ್‌ರ ನೀಚ ಬುದ್ಧಿ

ಎಂ.ವಿ.ಕಾಮತರು ವಯಸ್ಸಿನಲ್ಲಿ, ಹೇಗೋ ಪತ್ರಿಕೋದ್ಯಮ ಅನುಭವದಲ್ಲಿಯೂ ಅತ್ಯಂತ ಹಿರಿಯರು. ಬಲಪಂಥೀಯ ವಿಚಾರಧಾರೆಗಳನ್ನು ಪೋಷಿಸುತ್ತಾ, ತಪ್ಪು ಅಂಕಿ ಅಂಶಗಳ ಮೂಲಕ ಓದುಗರನ್ನು ದಾರಿ ತಪ್ಪಿಸಿ ಪ್ರಚೋದನಕಾರಿ ಹೇಳಿಕೆಗಳ ಮೂಲಕ ಅವರನ್ನು ಉದ್ರೇಕಿಸುವುದರಲ್ಲಿ ಅವರು ಎಷ್ಟು ಅನುಭವಿಗಳು ಮತ್ತು ನಿಷ್ಣಾತರು ಎನ್ನುವುದಕ್ಕೆ ಮೇಲಿನ





ಅವರ ಬರವಣಿಗೆಯನ್ನು ಕೂಲಂಕಷವಾಗಿ ಗಮನಿಸಬೇಕು. ಅವರ ಪ್ರಕಾರ '50 ಮಹಿಳೆಯರು ಮತ್ತು ಮಕ್ಕಳು ನಿಧಾನವಾಗಿ ಬೆಂದು ಕರಟಿಹೋದರು'. ಅಲ್ಲಿದ್ದುದು ಮಹಿಳೆಯರು ಮತ್ತು ಮಕ್ಕಳು ಮಾತ್ರವೇ? ಪುರುಷರಿರಲಿಲ್ಲವೇ? (ಮಹಿಳೆಯರು ಮತ್ತು ಮಕ್ಕಳು ಎಂದಾಕ್ಷಣ ಅದು ಉಂಟು ಮಾಡುವ ಪ್ರತಿಕ್ರಿಯೆ ಭಿನ್ನ ಬಗೆಯದು ಎಂಬುದು ಕಾಮತರಿಗೆ ಚೆನ್ನಾಗಿ ತಿಳಿದಿದೆ). 'ನಿಧಾನವಾಗಿ ಬೆಂದು ಕರಟಿಹೋದರು' ಎನ್ನುವಾಗಲೂ ಕಾಮತರ ಉದ್ದೇಶ ಸುಸ್ಪಷ್ಟ.

ಇನ್ನು ಮಾಧ್ಯಮಗಳು ನರೋಡಾ ಪಾಟಿಯಾದಲ್ಲಿ ನಡೆದ ಅಪರಾಧಗಳಿಗೆ ಅಗತ್ಯಕ್ಕಿಂತ ಹೆಚ್ಚು ಪ್ರಚಾರ ನೀಡಿದವಂತೆ. 'ಅಗತ್ಯಕ್ಕಿಂತ ಹೆಚ್ಚು' ಅಂದರೆ ಏನರ್ಥ? ಅಗತ್ಯದ ಮಾನದಂಡ ಯಾವುದು? ಎಂತಹ ಮನಸು ನಮ್ಮ ಕಾಮತರದು! ಗೋಧ್ರಾದಲ್ಲಿ ನಡೆದುದು ಮಹಾಕ್ರೌರ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಯಾರೇ ಅದನ್ನು ರಾಜಕೀಯಕ್ಕೆ ಬಳಸಿಕೊಂಡರೂ ಅದು ಅಕ್ಷಮ್ಯ. ಹಿಂದೂಗಳ ನೋವು ಮತ್ತು ಮುಸ್ಲಿಮರ ನೋವು ಬೇರೆ ಬೇರೆ ಬಗೆಯದೇ ಎನ್ನುವುದನ್ನು ಅತ್ಯಂತ ಹಿರಿಯರೂ, ಜ್ಞಾನಿಗಳೂ, ಅನುಭವಿಗಳೂ ಆದ ಎಂ.ವಿ.ಕಾಮತರೇ ಹೇಳಬೇಕು.

● ಶ್ರೀನಿವಾಸ ಕಾರ್ಕಳ, ಮಂಗಳೂರು

ಜನಾರೋಗ್ಯಕ್ಕೆ ಸವಾಲೊಡ್ಡುವ ವೈದ್ಯರ ಅಸ್ಪಷ್ಟ ಕೈ ಬರಹಗಳು






...ಮಧ್ಯೆ ಅತ್ಯಂತ ಕೆಟ್ಟ ಮತ್ತು ಅಸ್ಪಷ್ಟ ...ಗೆ ಬಳಸುವ ರೂಪಕಾಲಂಕಾರ 'ವೈದ್ಯರ ಕೈ ...ದ್ಯರ ಕೈ ಬರಹದ ಕುರಿತಂತೆ ಕೆಲವು ದಿನಗಳ ...ಮುಂಬೈ ಹೈಕೋರ್ಟ್ ಒಂದು ಮಹತ್ವದ ...ನ್ನು ನೀಡಿತ್ತು. ಮುಂಬೈ ಹೈ ಕೋರ್ಟ್‌ನ ... ಅಸ್ಪಷ್ಟವಾಗಿ ಮತ್ತು ಕೆಟ್ಟದಾಗಿ ಔಷಧಿಗಳ ...ಬರೆಯುವ ವೈದ್ಯರನ್ನು ತೀವ್ರವಾಗಿ ತರಾಟೆಗೆ ...ಳ್ಳಲಾಗಿತ್ತು. "ವೈದ್ಯರುಗಳು ಜನಾರೋಗ್ಯದ ...ಖಿಂದ ತಮ್ಮ ಕೈ ಬರಹಗಳನ್ನು ...ಬೇಕು" ಎಂದು ಸ್ಪಷ್ಟವಾಗಿ ಮತ್ತು ಕಠಿಣವಾಗಿ ...ಹೈಕೋರ್ಟ್ ಆದೇಶಿಸಿದೆ. ಐದೂವರೆ ವರ್ಷಗಳ ... ಪದವಿಯನ್ನು ಅಥವಾ ಎಂಟೂವರೆ ವರ್ಷಗಳ ... ವೈದ್ಯಕೀಯ ಪದವಿಯನ್ನು ಪಡೆಯಲು ...ಗಿ ವೈದ್ಯಕೀಯ ವಿಜ್ಞಾನವನ್ನು ಅಭ್ಯಸಿಸಿದ ... ಪಾಲಿಗೆ ನಿಜಕ್ಕೂ ಇದೊಂದು ತೀರಾ ...ನ ಸಂಗತಿ.

... ಕೆಟ್ಟದಾಗಿ ಮತ್ತು ಅಸ್ಪಷ್ಟವಾಗಿ ಬರೆಯುವುದೇ ...ಫ್ಯಾಷನ್ ಎಂಬಷ್ಟರ ಮಟ್ಟಿಗೆ ವೈದ್ಯಕೀಯ ...ರು ಬೇಕು ಬೇಕೆಂದೇ ತಮ್ಮ ಕೈ ಬರಹಗಳನ್ನು ...ತ್ತಿದ್ದಾರೆ. ಇತರ್ಯಾವುದೇ ವೃತ್ತಿಪರರ ಕೈ ಬರಹಗಳು ...ದ್ದರೆ ಅದರಿಂದ ಸಮಾಜಕ್ಕೆ ಯಾವುದೇ ವಿಧದ ...ಟಾಗದು. ಆದರೆ ವೈದ್ಯರ ಅಸ್ಪಷ್ಟ ಮತ್ತು ...ರಹಗಳು ಜನಾರೋಗ್ಯದ ಮೇಲೆ ...ಪರಿಣಾಮ ಉಂಟುಮಾಡುತ್ತವೆ.

...ನ್ಯವಾಗಿ ಒಂದೇ ವಿಧದ ಅಥವಾ ...ಕಾಂಬಿನೇಶನ್‌ನ ಔಷಧಿಯಿರುವ ...ಳನ್ನೋ, ಸಿರಪ್‌ಗಳನ್ನೋ, ...ಗಳನ್ನೋ ಬೇರೆ ಬೇರೆ ಔಷಧ ... ಸಂಸ್ಥೆಗಳು ಉತ್ಪಾದಿಸುತ್ತವೆ. ...ದು ಕಂಪೆನಿಯೂ ತಮ್ಮ ತಮ್ಮ ...ಗಳಿಗೆ ತಂತಮ್ಮ ಟ್ರೇಡ್‌ನೇಮ್ ...ನಾಮ)ಗಳನ್ನು ನೀಡುತ್ತವೆ. ...ಣೆಗೆ **Amoxycillin** ಎಂಬ ...ನಿವಾರಕ ಔಷಧಿಗಳಿಗೆ ಬೇರೆ ಬೇರೆ ... ಟ್ರೇಡ್‌ನೇಮ್‌ಗಳು ಹೀಗಿರುತ್ತವೆ: ...**nox, Damox, Almox, Erox,** ... ಇತ್ಯಾದಿ. ಪ್ಯಾರಾಸಿಟಮೋಲ್ ಎಂಬ ಜ್ವರದ ...ಬೇರೆ ಬೇರೆ ಕಂಪೆನಿಗಳ ಟ್ರೇಡ್ ನೇಮ್‌ಗಳು ...: **Calpol, Crocin, Dolo, Metacin,** ... ಇತ್ಯಾದಿ. ಡೈಕ್ಲೋಫೆನ್ಯಾಕ್ ಸೋಡಿಯಂ ಎಂಬ ... ನೋವು ನಿವಾರಕ ಔಷಧಿಗೆ ಬೇರೆ ಬೇರೆ ... ಟ್ರೇಡ್ ನೇಮ್‌ಗಳು ಹೀಗಿರುತ್ತವೆ: **Voveron,** ... **Diclo** ಇತ್ಯಾದಿ.

ಕೆಲವೊಂದು ಕಂಪೆನಿಗಳ ಕೆಲವು ಔಷಧಿಗಳ ಟ್ರೇಡ್ ನೇಮ್‌ಗಳು ಬೇರೆಯೇ ರೋಗಗಳ ಔಷಧಿಗಳೊಂದಿಗೆ ಸಾಮ್ಯತೆ ಹೊಂದಿರುತ್ತವೆ. ಅವುಗಳ ಕೆಲವು ಉದಾಹರಣೆಗಳನ್ನು ನೋಡೋಣ. **Myphil** ಮತ್ತು **Myphal**. ಇವೆರಡೂ ಗರ್ಭನಿರೋಧಕ ಮಾತ್ರೆಗಳು. ಆದರೆ ಇವುಗಳ ಮಧ್ಯೆ ಬಹುದೊಡ್ಡ ವ್ಯತ್ಯಾಸಗಳಿವೆ.

Myphil ಎಂಬ ಮಾತ್ರೆಯು ಮಾಸಿಕ ಗರ್ಭನಿರೋಧಕ ಮಾತ್ರೆಯಾದರೆ, **Myphal** ತುರ್ತು ಗರ್ಭ ನಿರೋಧಕ. **Myphil** ಮತ್ತು **Myphal**ನ



ವ್ಯತ್ಯಾಸಗಳನ್ನು ಗಮನಿಸಿ. **I** ಮತ್ತು **A** ಎಂಬ ಎರಡು ಅಕ್ಷರಗಳ ವ್ಯತ್ಯಾಸ ಮಾತ್ರ ಇವುಗಳಲ್ಲಿವೆ. ಇವುಗಳನ್ನು ಅಸ್ಪಷ್ಟವಾಗಿ ಬರೆದಾಗ ಸಂಭವಿಸಬಹುದಾದ ಅನಾಹುತಗಳೇನಿರಬಹುದೆಂದು ಸಾಮಾನ್ಯ ಜನರೂ ಅರ್ಥೈಸಬಹುದು.

Astin ಎಂಬ ಟ್ರೇಡ್‌ನೇಮ್‌ನ ಅತಿಕೊಬ್ಬಿನಂಶದ ಚಿಕಿತ್ಸೆಗೆ ನೀಡುವ ಮಾತ್ರೆಯೊಂದಿದೆ. **Aspin** ಎಂಬ ಟ್ರೇಡ್‌ನೇಮ್‌ನ ತೀವ್ರತರ ಎದೆನೋವಿಗೆ ನೀಡುವ ನೋವು ನಿವಾರಕ ಮಾತ್ರೆಯೂ ಇದೆ. ಇವೆರಡರ ಮಧ್ಯೆ ಇರುವ ಅಕ್ಷರ ವ್ಯತ್ಯಾಸ **'P'** ಮತ್ತು **'T'** ಮಾತ್ರ.

Damox ಎಂಬ ಟ್ರೇಡ್‌ನೇಮ್‌ನ ಸೋಂಕುನಿವಾರಕ **(Amoxycyllin)** ಔಷಧಿ ಇದೆ. **Damox**ಗೆ ತೀರಾ ಸಾಮ್ಯವಿರುವ **Diamox** ಎಂಬ ಕಣ್ಣುನೋವಿನ ಚಿಕಿತ್ಸೆಗೆ ಬಳಸುವ **(Acetazolamide)** ಔಷಧಿಯೂ ಇದೆ. ಇವೆರಡರ ಮಧ್ಯೆ ಇರುವ ಅಕ್ಷರ ವ್ಯತ್ಯಾಸ **'I'** ಮತ್ತು **'O'** ಮಾತ್ರ.

Levopill ಎಂಬ ಟ್ರೇಡ್‌ನೇಮ್‌ನ ವಿಟಮಿನ್‌ನ ಮಾತ್ರೆಯೊಂದಿದೆ. ಇದಕ್ಕೆ ಅತ್ಯಂತ ಸನಿಹದ ಟ್ರೇಡ್‌ನೇಮ್‌ನ **Levipill** ಎಂಬ ಮಾನಸಿಕ ಖಾಯಿಲೆಯ ಚಿಕಿತ್ಸೆಗೆ ಬಳಸುವ ಮಾತ್ರೆಯೂ ಮಾರುಕಟ್ಟೆಯಲ್ಲಿದೆ. ಇವೆರಡರ ಮಧ್ಯೆ ಇರುವ ಅಕ್ಷರ ವ್ಯತ್ಯಾಸ **'I'** ಮತ್ತು **'O'** ಮಾತ್ರ.

ಹೀಗೆ ಪಟ್ಟಿಮಾಡುತ್ತಾ ಹೋದಾಗ ಟ್ರೇಡ್‌ನೇಮ್‌ಗಳಲ್ಲಿ ಸಾಮ್ಯವಿರುವ ಕನಿಷ್ಠ ಐಂಕ್ಕೂ ಮಿಕ್ಕಿದ ಔಷಧಿಗಳು ಸಿಗುತ್ತವೆ. ಈ ಮೇಲೆ ಪಟ್ಟಿ ಮಾಡಿದ ಟ್ರೇಡ್‌ನೇಮ್‌ನಲ್ಲಿ ಸಾಮ್ಯತೆಯಿರುವ ಔಷಧಿಗಳನ್ನೇ ಗಮನದಲ್ಲಿಟ್ಟು ಆಗಬಹುದಾದ ಅನಾಹುತಗಳನ್ನು ಊಹಿಸಿದರೆ ಮೈ ಜುಮ್ಮೆನ್ನುತ್ತದೆ.

ಸಾಮಾನ್ಯವಾಗಿ ಯಾವುದೇ ಔಷಧಾಲಯಗಳಲ್ಲಿ ಸೇಲ್ಸ್‌ಮ್ಯಾನ್‌ಗಳಾಗಿ, ಸೇಲ್ಸ್‌ಗರ್ಲ್‌ಗಳಾಗಿ ಕೆಲಸ ನಿರ್ವಹಿಸುವವರು ಹೆಚ್ಚೆಂದರೆ **SSLC, PUC** ಓದಿರುತ್ತಾರೆ. ಅವರೆಷ್ಟೇ ಅನುಭವಿಗಳಾದರೂ ವೈದ್ಯರ ಅಸ್ಪಷ್ಟ ಕೈಬರಹಗಳಿಂದಾಗಬಲ್ಲ ಅನಾಹುತಗಳನ್ನು ತಪ್ಪಿಸಲಾರರು. ಅಷ್ಟೇಕೆ ಸ್ವತಃ ಕ್ವಾಲಿಫೈಡ್ ಫಾರ್ಮಸಿಸ್ಟರೂ ಗೊಂದಲಕ್ಕೆ ಬೀಳದಿರಲಾರರು.

ಔಷಧಾಲಯಗಳ ಸಿಬ್ಬಂದಿಗಳು ವೈದ್ಯರ ಅಸ್ಪಷ್ಟ ಕೈಬರಹವನ್ನು ಅರ್ಥೈಸಲಾಗದೇ ಗೊಂದಲ ನಿವಾರಣೆಗೆ ವೈದ್ಯರಿಗೆ ದೂರವಾಣಿ ಕರೆ ಮಾಡಿದರೆ ಸ್ವತಃ ಅದನ್ನು ಬರೆದ ವೈದ್ಯನಿಗೆ ತಾನು ಯಾವ ಔಷಧಿ ಬರೆದಿದ್ದೆನೆಂಬ ನೆನಪು ಉಳಿದಿರುವುದಿಲ್ಲ. ವೈದ್ಯನೊಬ್ಬ ದಿನಕ್ಕೆ ೬೦–೮೦ ರೋಗಿಗಳಿಗೆ ಔಷಧಿಯ ಪ್ರಿಸ್ಕ್ರಿಪ್ಷನ್ ಬರೆದು ಕೊಡುವುದರಿಂದ ಸಹಜವಾಗಿಯೇ ತಾನು ಯಾವ ರೋಗಿಗೆ ಯಾವ ಔಷಧಿ ಬರೆದು ಕೊಟ್ಟಿದ್ದೆಂದು ನೆನಪುಳಿಯದು.

ಇನ್ನು ಕೆಲವು ವೈದ್ಯರುಗಳು ಉದ್ದೇಶಪೂರ್ವಕವಾಗಿಯೇ ಕೇವಲ ಸಂಕೇತಾಕ್ಷರಗಳಲ್ಲಿ, ಹ್ರಸ್ವರೂಪದಲ್ಲಿ ಔಷಧಿಗಳನ್ನು ಬರೆಯುವ ಪರಿಪಾಠವಿದೆ. ಇದರ ಏಕಮಾತ್ರ ಉದ್ದೇಶ ಲಾಭಬಡುಕತನ. ಸಂಕೇತಾಕ್ಷರಗಳಲ್ಲೋ, ಹ್ರಸ್ವರೂಪದಲ್ಲೋ ಪ್ರಿಸ್ಕ್ರಿಪ್ಷನ್ ಬರೆದಾಗ ತಾನು ಸೂಚಿಸಿದಲ್ಲಿಂದಲೇ ಔಷಧಿ ಖರೀದಿಸಲು ರೋಗಿಗಳನ್ನು ನಿರ್ಬಂಧಿಸುತ್ತಾರೆ. ಒಂದು ವೇಳೆ ರೋಗಿಯು ಬೇರೆ ಔಷಧಾಲಯಗಳಿಗೆ ತೆರಳಿದರೆ ಅಲ್ಲಿನ ಸಿಬ್ಬಂದಿಗಳಿಗೆ ವೈದ್ಯನ ಸಂಕೇತಾಕ್ಷರ, ಹ್ರಸ್ವರೂಪದ ಬರಹಗಳು ತಿಳಿಯುವುದಿಲ್ಲ. ವೈದ್ಯನಿಗೆ ಕಮಿಷನ್ ನೀಡುವ ಔಷಧಾಲಯದ ಸಿಬ್ಬಂದಿಗಳಿಗೆ ಮಾತ್ರ ಆತನ ಸಂಕೇತಾಕ್ಷರಗಳು, ಹ್ರಸ್ವರೂಪದ ಬರಹಗಳು ಅರ್ಥವಾಗುತ್ತವೆ.

ಎಲ್ಲರ ಕೈ ಬರಹವೂ ಸುಂದರವಾಗಿರಬೇಕೆಂದು ಅಪೇಕ್ಷಿಸುವುದು ಸರಿಯಲ್ಲ. ಆದರೆ ಸ್ಪಷ್ಟವಾಗಿ ಬರೆಯುವುದು ರೋಗಿಯ ಹಿತದೃಷ್ಟಿಯಿಂದ ಅವಶ್ಯಕ. ಸ್ವಲ್ಪ ನಿಧಾನವಾಗಿ ಬರೆದರೆ ಹೆಚ್ಚೆಂದರೆ ಒಂದು ನಿಮಿಷ ಹೆಚ್ಚು ವ್ಯಯವಾಗಬಹುದಷ್ಟೆ. ಹ್ರಸ್ವರೂಪ, ಸಂಕೇತಾಕ್ಷರಗಳ ಬದಲಿಗೆ ವಿಸ್ತೃತ ರೂಪದಲ್ಲಿ ಬರೆಯುವುದರಿಂದ ದಿನಕ್ಕೆ ಅರ್ಧ ಹನಿ ಹೆಚ್ಚು ಪೆನ್ನಿನ ಮಸಿ ಖರ್ಚಾಗಬಹುದಷ್ಟೆ. ತಮಗೆ ಅನ್ನ ನೀಡುವ ರೋಗಿಗಳ ಹಿತಕ್ಕಾಗಿ ವೈದ್ಯರಿಗೆ ಇಷ್ಟು ಪುಟ್ಟ ತ್ಯಾಗ ಮಾಡಲು ಕಷ್ಟವಾಗುತ್ತದೆಂದಾದರೆ ನಾಲ್ಕು ಗೆರೆಯ ಇಂಗ್ಲಿಷ್ ಕಾಪಿ ಪುಸ್ತಕದಲ್ಲಿ ಬರೆದು ಕೈ ಬರಹ ಸುಧಾರಿಸಿಕೊಳ್ಳಲು ನ್ಯಾಯಾಲಯಗಳು ಆದೇಶಿಸುವ ದಿನಗಳು ಬಂದರೂ ಬರಬಹುದು.

● ಇಸ್ಮತ್ ಫಜೀರ್

...ಸೋಮಣ್ಣನೇ ಮೊದಲ ವಿಘ್ನ?

...11

...ದೆ ಸ್ವಾರ್ಥವಿಲ್ಲದೆ ಶೌಚಾಲಯವನ್ನೂ ಅವಸರಕ್ಕೆ ...ವುದಿಲ್ಲ. ಯಡ್ಡಿಯ ಹೊಸ ಪಕ್ಷ ಎಲ್ಲೆಷ್ಟೇ ಫಸಲು ... ಬೆಂಗಳೂರಿನ ಮಟ್ಟಿಗೆ ಪರಿಣಾಮಕಾರಿಯಲ್ಲ. ...ಯಡ್ಡಿ ಬಿಜೆಪಿಯಿಂದ ದೂರಾದರೆಂದರೆ ತನಗೆ ...ಲ್ಲಿ ಉಳಿಗಾಲವಿಲ್ಲ. ಅದರಲ್ಲೂ ಅಶೋಕ್ ...ಲ್ಲಿರುವ ತನಕ ತನಗಲ್ಲಿ ಉಳಿಗಾಲವಿಲ್ಲ. ಹಿಂದೆ ...ಮತ್ತು ಜನತಾದಳ ಸರ್ಕಾರವಿದ್ದಾಗ ಬೆಂಗಳೂರಿನ ...ದಲ್ಲಿ ತನಗಿದ್ದ ಪ್ರಾಮುಖ್ಯತೆ ಬಿಜೆಪಿಯ ...ಲ್ಲಿ ಅದ್ಯಾವತ್ತಿಗೂ ಸಾಧ್ಯವೇ ಇಲ್ಲ.

...ಲ್ಲ ಲೆಕ್ಕಾಚಾರ ಹಾಕಿಯೇ ಸೋಮಣ್ಣ ಮತ್ತೆ ...ತ್ತ ವಾಲಿದ್ದಾರೆಂಬುದು ಅವರ ಪರಮಾಪ್ತರ ...ವಿಕೆ ಯಡ್ಡಿ ಮೂಲದ ಕೆಲ ಲಿಂಗಾಯತ ...ಗಳ ತರ್ಕವೇ ಬೇರೆಯಿದೆ. ಅದು ಯಡ್ಡಿ ...ಸೋಮಣ್ಣನ ಪರಸ್ಪರ ತಿಳುವಳಿಕೆಯ ಮೇರೆಗೇ ...ತ್ತಿರುವ ವಿಲಕ್ಷಣ ಷಡ್ಯಂತ್ರ. ಯಡ್ಡಿ ಪಾಲಿಗೆ ಸದ್ಯ ...ಮುಳ್ಳಂತಿರುವುದು ಅನಂತ್‌ಕುಮಾರ್ ಮತ್ತು ... ಬೆಂಗಳೂರಿನಲ್ಲಿ ಅನಂತ್‌ಕುಮಾರ್‌ರನ್ನು ಮಣ್ಣು ...ಬೇಕೆಂದರೆ ಅದಕ್ಕೆ ಸೋಮಣ್ಣ ಕಾಂಗ್ರೆಸ್ಸಿನಲ್ಲಿದ್ದರೇನೇ ...ಪರಿಣಾಮಕಾರಿ ಮತ್ತು ಫಲಕಾರಿ. ತನ್ನ ಜೊತೆ ... ಪಕ್ಷದಲ್ಲಿ ಗುರುತಿಸಿಕೊಳ್ಳುವುದಕ್ಕಿಂತಲೂ ...ದ್ದು ತನ್ನ ಅನುಕೂಲಕ್ಕೆ ಏನೇನು ಬೇಕೋ ...ಲ್ಲ ಮಾಡುತ್ತಲೇ ತನ್ನ ಆಜನ್ಮವೈರಿ ...ಕುಮಾರ್‌ರನ್ನು ತಲೆ ಎತ್ತದ ಹಾಗೆ ಹೊಸಕುವುದಕ್ಕೂ ...ಲೇ ಲಾಯಕ್ಕೆಂದು ಯಡ್ಡಿ ನಿರ್ಧರಿಸಿರುವುದೇ ...ನ್ನ ಈ ನಡೆಗೆ ಮೂಲ ಕಾರಣ.

...ನ್ನು ಇಷಾರೆಯಲ್ಲೇ ಸೋಮಣ್ಣ ಕಾಂಗ್ರೆಸ್ಸಿಗೆ ...ರ್ ಸಾಧಿಸಿಬಿಟ್ಟರೆ ಯಡ್ಡಿ ಪಾಲಿಗದು ಬಂಪರ್ ಧಮಾಕಾ. ಉಪಾಯವಾಗಿ ಅನಂತ್ ಕತೆ ಮುಗಿಸಿದಂತಾಯ್ತು. ಬಿಜೆಪಿಯ ಕೈಯಿಂದ ಬಿಬಿಎಂಪಿಯನ್ನು ಕಿತ್ತುಕೊಂಡರೆ ಮುಂಬರುವ ಚುನಾವಣೆಗದೇ ಮುನ್ಸೂಚನೆಯಂತಾಗಿ ಬಿಜೆಪಿಯನ್ನೂ ಮುಗಿಸಿದಂತಾಗುತ್ತದೆ. ಇಂಥದೊಂದು ಕಾರ್ಯತಂತ್ರವನ್ನು ಯಡ್ಡಿ ಕೇಂದ್ರ ರೈಲ್ವೆ ಮಂತ್ರಿ ಕೆ.ಹೆಚ್. ಮುನಿಯಪ್ಪ ಜೊತೆ ಕೂತೇ ರೂಪಿಸಿದ್ದಾರಂತೆ. ಅದಕ್ಕೆಂದು ಯಡ್ಡಿಯ ಡಾರ್ಕ್ ಹಾರ್ಸ್ ಆಗಿ ಸೋಮಣ್ಣ ಅಖಾಡಕ್ಕಿಳಿಯಲು ಮುಹೂರ್ತ ನಿಗದಿಯಾಗಬೇಕೆಂದರೆ ಅದಕ್ಕೆ ಯಡ್ಡಿ ಹೊಸಪಕ್ಷ ಘೋಷಿಸಬೇಕು ಅಥವಾ ಬಿಜೆಪಿಯನ್ನು ತೊರೆಯುತ್ತೇನೆಂದು ಘೋಷಿಸಬೇಕು.

ಹಾಗೊಮ್ಮೆ ಯಡ್ಡಿ ಹೊಸ ಪಕ್ಷ ಘೋಷಿಸದೆ ಬಿಜೆಪಿಯಲ್ಲೇ ಉಳಿದುಬಿಟ್ಟರೆ?

ಅದಕ್ಕೂ ಸೋಮಣ್ಣ ರೆಡಿಯಾಗಿದ್ದಾನಂತೆ. ಹೇಗಿದ್ದರೂ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ನೆಲಕಚ್ಚುತ್ತದೆ. ಆ ಪುರುಷಾರ್ಥಕ್ಕೇಕೆ ತಾನು ಯಡ್ಡಿಯನ್ನೇ ನೆಚ್ಚಿ ಕೂತಿರಬೇಕು? ಏನೇ ಆದರೂ ಕಾಂಗ್ರೆಸ್ಸಿನಲ್ಲಿ ಯಡ್ಡಿಯ ಗೂಢ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾದರೂ ಒಬ್ಬ ಬೇಕಲ್ಲವೆ? ಈ ನಿಟ್ಟಿನಲ್ಲೇ ಯಡ್ಡಿಯ ಮನವೊಲಿಸಿ ಕಾಂಗ್ರೆಸ್ಸಿಗೆ ಕಾಲಿಡುವ ಸುಪ್ತ ಬಯಕೆಯೂ ಸೋಮಣ್ಣನಿಗಿದೆ. ಚುನಾವಣೆಗಿನ್ನು ಒಂದೋ ಎರಡೋ ತಿಂಗಳಿದೆ ಎನ್ನುವಾಗಲೇ ಸೋಮಣ್ಣ ಬಿಜೆಪಿಗೆ ಡೈನಾಮೈಟ್ ಇಡುತ್ತಾನಂತೆ. ಅದೇ ಬಿಜೆಪಿಯ ಬುಡಮೇಲು ಮಾಡುತ್ತದೆ.

ಸದ್ಯ ಬಿಬಿಎಂಪಿಯಲ್ಲಿ ಬಿಜೆಪಿಯ ಕೌನ್ಸಿಲರ್‌ಗಳ ಸಂಖ್ಯೆ ನೂರಾ ಹತ್ತು. ಒಟ್ಟು 198 ಮಂದಿಯ ಬಿಬಿಎಂಪಿಯಲ್ಲಿ ಬಿಜೆಪಿಯ ಕನಿಷ್ಠ 5 ಮಂದಿ ಪಾಲಿಕೆ ಸದಸ್ಯರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತರೂ ನಿರಾಯಾಸವಾಗಿ ಬಿಬಿಎಂಪಿ ... ಕೈತಪ್ಪುತದೆ. ಪಾಲಿಕೆ ಬಿದ್ದ ಅಥವಾ ರಾಜಿನಾಮೆಯಿತ್ತ ಕೌನ್ಸಿಲರ್‌ಗಳ ವಾರ್ಡ್‌ಗಳಿಗೆ ಮತ್ತೆ ಚುನಾವಣೆ ನಡೆಯಬೇಕೆಂದರೆ ಆ ಹೊತ್ತಿಗೆ ಹೊಸ ಸರ್ಕಾರ ಬಂದಿರುತ್ತದೆ. ಬಿಜೆಪಿಗೆ ಬಿಬಿಎಂಪಿಯಲ್ಲೂ ಚ್ಯುತಿ ಬಂದು ರಾಜ್ಯದಲ್ಲೂ ಅಧಿಕಾರ ತಪ್ಪಿ ಹೊಸ ಸರ್ಕಾರ ಬಂತೆಂದರೆ ಅಲ್ಲಿ ಈ ಎಲ್ಲಾ ಕೌನ್ಸಿಲರ್‌ಗಳ ಪರ ವಹಿಸಿ ಅವರನ್ನು ಮತ್ತೆ ಗೆಲ್ಲಿಸಿಕೊಳ್ಳುವುದು ಸೋಮಣ್ಣನಿಗೆ ಕಷ್ಟವೇ?

ಇಂಥದೊಂದು ಲೆಕ್ಕಾಚಾರವೇನೋ ಸೋಮಣ್ಣನ ತಲೆ ಹೊಕ್ಕಿರಬಹುದು. ಆದರೆ ಅದಕ್ಕೆ ಕಾಲ ಕೂಡಿಬರಬೇಕು. ಸದ್ಯ ಗೋವಿಂದರಾಜನಗರ ಮತ್ತು ವಿಜಯನಗರದ 17 ಮಂದಿ ಕೌನ್ಸಿಲರ್‌ಗಳ ಪೈಕಿ ಕಾವೇರಿಪುರ ವಾರ್ಡಿನ ಕೌನ್ಸಿಲರ್ ಪ್ರಕಾಶ್ ಒಬ್ಬರೇ ಜೆಡಿಎಸ್‌ನ ಹೆಸರಿಗಿರುವುದು ಬಿಟ್ಟರೆ ಕೆಂಪಾಪುರ ಅಗ್ರಹಾರದ ಮಂಜುನಾಥ್ ಮತ್ತು ಅತ್ತಿಗುಪ್ಪೆ ವಾರ್ಡಿನ ದೊಡ್ಡಣ್ಣ ಕಾಂಗ್ರೆಸ್ಸಿನಿಂದ ಗೆದ್ದು ಬಂದವರು. ಉಳಿದಂತೆ ಎರಡೂ ಕ್ಷೇತ್ರಗಳ 14 ಮಂದಿ ಕೌನ್ಸಿಲರ್‌ಗಳೆಲ್ಲ ಬಿಜೆಪಿಯವರೆ. ಈ ಪೈಕಿ ಡಾ.ರಾಜ್‌ಕುಮಾರ್ ವಾರ್ಡಿನ ಗಂಗಭೈರಯ್ಯ ಒಬ್ಬ ಮಾತ್ರ ಸೋಮಣ್ಣನ ಅಧಿಪತ್ಯಕ್ಕೆ ಸವಾಲೊಡ್ಡಿ ಬಿಜೆಪಿಯಲ್ಲೇ ಉಳಿದುಕೊಳ್ಳಬಹುದು. ಇನ್ನು ಆರ್‌ಪಿಸಿ ಲೇಔಟ್‌ನ ಕೌನ್ಸಿಲರ್ ಚಂದ್ರಶೇಖರಯ್ಯ ಹೆಸರಿಗಷ್ಟೇ ಮೂಲ ಆರೆಸ್ಸೆಸ್ಸಾದರೂ ಜಾತಿಯಲ್ಲಿ ಆತ ಲಿಂಗಾಯತ ಮತ್ತು ಸೋಮಣ್ಣನ ಪರಮಾಪ್ತ ಲಿಂಗಾಯತರ ನಾಯಕ ಪರಮಶಿವಯ್ಯನವರ ಶಿಷ್ಯ. ವಿಜಯನಗರದ ಕೇಡಿ ಕೌನ್ಸಿಲರ್ ರವೀಂದ್ರನಿಗೆ ಎಮ್ಮೆಲ್ಲೆಯಾಗುವ ದುರಾಶೆ. ಇವತ್ತಲ್ಲಾ ನಾಳೆ ತಾನು ವಿಜಯನಗರಕ್ಕೋ ಗೋವಿಂದರಾಜನಗರಕ್ಕೋ ಗೆದ್ದು ಶಾಸಕನಾಗಬೇಕೆಂದರೆ ಅದಕ್ಕೆ ಸೋಮಣ್ಣನನ್ನೇ ಅವಲಂಬಿಸಬೇಕು. ಈ ನಿಟ್ಟಿನಲ್ಲಿ ರವೀಂದ್ರ ಸೋಮಣ್ಣನ ಆಣತಿ ಮೀರುವವನಲ್ಲ. ಚಂದ್ರಾಲೇಔಟ್ ಕೌನ್ಸಿಲರ್ ಉಮೇಶ್ ಶೆಟ್ಟಿ, ನಾಯಂಡಹಳ್ಳಿಯ ರಾಜೇಶ್ವರಿ ಉಮೇಶ್ ಬೆಳಗೋಡು, ಮೂಡಲಪಾಳ್ಯದ ಶಾಂತಕುಮಾರಿ, ಮಾರೇನಹಳ್ಳಿಯ ದೊಡ್ಡಲಕ್ಕಪ್ಪ, ಗೋವಿಂದರಾಜನಗರದ ... ಕುಮಾರ್, ... ಹೊಸಹಳ್ಳಿಯ ಡಾ.ರಾಜು, ದೀಪಾಂಜಲಿ ನಗರದ ಮಾಲತಿ ವೆಂಕಟಸ್ವಾಮಿ, ಗಾಳಿ ಆಂಜನೇಯ ವಾರ್ಡಿನ ಆನಂದ, ಮಾರುತಿ ಮಂದಿರದ ವಾಗೀಶ, ಹೀಗೆ ಬರೋಬ್ಬರಿ ಒಂದು ಡಜನ್ ಕೌನ್ಸಿಲರ್‌ಗಳ ಕಟ್ಟಾ ಬೆಂಬಲಿಗರ ಗುಂಪೊಂದನ್ನು ಸೋಮಣ್ಣ ರೆಡಿ ಮಾಡಿಕೊಂಡಿದ್ದಾನೆ.

ಇನ್ನೂ ಬೇಕೆಂದರೆ ಚಾಮರಾಜಪೇಟೆಯ ಬಿ.ವಿ.ಗಣೇಶ್, ಪ್ರಕಾಶ್ ನಗರದ ರವೀಂದ್ರ ಇತ್ಯಾದಿ ಅತೃಪ್ತ ಬಿಜೆಪಿ ಕೌನ್ಸಿಲರ್‌ಗಳ ಪೈಕಿ ಸರಿಸುಮಾರು ಅರ್ಧ ಡಜನ್ನಿನಷ್ಟು ಸೋಮಣ್ಣನ ಜೊತೆ ಕೈ ಜೋಡಿಸಬಹುದು. ಬಿಜೆಪಿ ಅತೃಪ್ತರು, ಪಕ್ಷೇತರರು ಮತ್ತು ಸೋಮಣ್ಣ ನಿಷ್ಠ ಕೌನ್ಸಿಲರ್‌ಗಳೆಲ್ಲ ಸೇರಿಬಿಟ್ಟರೆ ಆ ಸಂಖ್ಯೆ 30 ದಾಟುವುದು ಕಷ್ಟವೇನಲ್ಲ. ಒಮ್ಮೆ ಬಿಬಿಎಂಪಿ ಬಿಜೆಪಿಯ ಕೈ ತಪ್ಪಿತೆಂದರೆ ರಾಜ್ಯ ಮಟ್ಟದ ಚುನಾವಣೆಗೆ ಬಿಜೆಪಿಗೆ ಇದಕ್ಕಿಂತ ಅಪಶಕುನ ಮತ್ತೊಂದಿಲ್ಲ.

ಇಂಥದೊಂದು ಬುಡಮೇಲು ಕೃತ್ಯಕ್ಕೆ ಸೋಮಣ್ಣನೇ ಆಸಕ್ತಿ ವಹಿಸಿದ್ದಾನಾ ಅಥವಾ ಯಡ್ಡಿಯೇ ಸೋಮಣ್ಣನನ್ನು ಛೂಬಿಟ್ಟು ಮಾಡಿಸುತ್ತಾರಾ ಗೊತ್ತಿಲ್ಲ. ಕಾಂಗ್ರೆಸ್ಸಿನ ಮಟ್ಟಿಗೆ ಅಖಾಡವಂತೂ ರೆಡಿಯಾಗಿದೆ. ಸೋಮಣ್ಣನಿಗಾಗಿ ವಿಜಯನಗರವಾ ಅಥವಾ ಗೋವಿಂದರಾಜನಗರವಾ ಎಂಬುದಷ್ಟೇ ನಿರ್ಧಾರವಾಗ ಬೇಕಿದೆ. ಹಾಗೊಮ್ಮೆ ಪ್ರಿಯಾಕೃಷ್ಣನನ್ನು ರಾಜಾಜಿನಗರದಿಂದ ಗೆಲ್ಲಿಸಲು ತಂದೆ ಕೃಷ್ಣಪ್ಪ ಅಣಿಯಾಗುತ್ತಾರಾ? ರಾಜಕೀಯವಾಗಿ ಹಾವು-ಮುಂಗುಸಿಗಳಂತಿರುವ ಕೃಷ್ಣಪ್ಪ ಮತ್ತು ಸೋಮಣ್ಣ ಪರಸ್ಪರ ಕದನ ವಿರಾಮಕ್ಕೆ ಮುಂದಾಗುವುದುಂಟಾ? ಡಿಸಿಎಂ ಅಶೋಕ್ ಸಂಬಂಧವನ್ನು ತೊರೆದು ಕೃಷ್ಣಪ್ಪ ಯಾವ ಕಾರಣಕ್ಕೆ ಸೋಮಣ್ಣನ ಪರ ಮೃದುವಾಗುತ್ತಾರೆ?

ಅದಕ್ಕೂ ಯಡ್ಡಿ ಹೊಸ ಪಕ್ಷ ಕಟ್ಟೇ ತೀರುವ... ನಿಚ್ಚಳವಾದರೆ ಸೋಮಣ್ಣನೇ ಯಡ್ಡಿ ಪಾಲಿಗೆ ಮೊದಲ... ಕ್ರಾಂತ ಮಾಡುತ್ತಾನೆ... ಮಾಡುವುದೇ ಪುರಾವೆಯಾ... ... ●



ಸರಳುಗಳ ತೂರಿ ಮೇಲೇರುವ ಕಾವ್ಯ...



ಹದಿಮೂರು ದೀರ್ಘ ವರ್ಷಗಳು- ಅದರಲ್ಲೂ ಒಂದಷ್ಟು ಕಾಲ ಒಬ್ಬಂಟಿಯಾಗಿ ಸೆಲ್ಲಿನಲ್ಲಿ - ಕಳೆಯುವುದು ಹೇಗೆ? ಕಳೆದರೂ, ಧೈರ್ಯ ಮತ್ತು ಬರುವ ದಿನಗಳ ಬಗ್ಗೆ ಭರವಸೆ ಮುರುಟಿ ಹೋಗದಂತೆ ಕಾಯ್ದುಕೊಳ್ಳುವುದು ಹೇಗೆ?

ಟರ್ಕಿಯ ಪ್ರಸಿದ್ಧ ಕವಿ ನಜೀಮ್ ಹಿಕ್ಮೆತ್ (1902-1963) ಜೀವನ ಮತ್ತು ಕಾವ್ಯದ ಬಗ್ಗೆ ಓದುವಾಗ ಈ ಪ್ರಶ್ನೆಗಳು ಮತ್ತೆ ಮತ್ತೆ ಮನಸ್ಸಿನಲ್ಲಿ ಏಳುತ್ತವೆ. ತನ್ನ ಮಾರ್ಕ್ಸಿಸ್ಟ್ ಧೋರಣೆಗಾಗಿ ಜೀವನದುದ್ದಕ್ಕೂ ಸಾಕಷ್ಟು ಕಷ್ಟ ಅನುಭವಿಸಿದ ಹಿಕ್ಮೆತ್ ಅನೇಕ ವರ್ಷಗಳು ಜೈಲಿನಲ್ಲಿ ಕಳೆದವನು. ಇವನ ಅತ್ಯಂತ ದೀರ್ಘ ಜೈಲುವಾಸ ಜನವರಿ 1938 ರಿಂದ ಡಿಸೆಂಬರ್ 1942ರವರೆಗೆ. ಟರ್ಕಿಯ ಸೇನೆಯಲ್ಲಿದ್ದ ಯುವ ಸೈನಿಕರು ಇವನ ಕ್ರಾಂತಿಕಾರಿ ಪದ್ಯಗಳನ್ನು (ವಿಶೇಷವಾಗಿ "ಶೇಖ್ ಬದ್ರುದ್ದೀನನ ಕಥನ" ಎಂಬ ಸುದೀರ್ಘ ಪದ್ಯ) ಓದುತ್ತಿದ್ದ ಕಾರಣಕ್ಕೆ ಹಿಕ್ಮೆತ್ ಮೇಲೆ ದಂಗೆ ಪ್ರೇರೇಪಿಸಿದ ಆರೋಪ ಹೊರಿಸಿ ಜೈಲಿಗೆ ಹಾಕಲಾಯಿತು. ಆರೋಪದ ಟ್ರಯಲ್ ನಡೆಯುತ್ತಿದ್ದ ದಿವಗಳಲ್ಲಿ ಹಿಕ್ಮೆತ್ ಪಟ್ಟ ಕಷ್ಟಗಳ ಬಗ್ಗೆ ಪ್ಯಾಬ್ಲೊ ನೆರೂಡ ಮತ್ತು ಇನ್ನೂ ಕೆಲವು ಲೇಖಕರು ಬರೆದಿದ್ದಾರೆ. ಯುದ್ಧ ನೌಕೆಯೊಂದರ ಮೇಲೆ ತಿಂಗಳುಗಟ್ಟಲೆ ವಿಚಾರಣೆ ನಡೆದ ಸಂದರ್ಭದಲ್ಲಿ ಹಿಕ್ಮೆತ್ ಅನುಭವಿಸಿದ ಕಷ್ಟಗಳ ಬಗ್ಗೆ ನೆರೂಡಾ ``Nazim was condemned to the punishments of hell'' ಅನ್ನುತ್ತಾನೆ. ಕಕ್ಕಸ್ಸು ತುಂಬಿ ಹೋಗಿದ್ದ ಲೆಟ್ರೀನಿನಲ್ಲಿ ದಿನ ಕಳೆಯಬೇಕಾಗಿ ಬಂದಾಗ ಜೋರಾಗಿ ಹಾಡುತ್ತಾ ವಾಸನೆ ಮರೆಯಲಿಕ್ಕೆ ಪ್ರಯತ್ನಪಟ್ಟ ಅಂತ ನೆರೂಡಾ ವಿವರಿಸುತ್ತಾನೆ.

ನಂತರದ ಜೈಲಿನಲ್ಲಿ ಕಳೆದ ಹದಿಮೂರು ವರ್ಷಗಳ ಅವಧಿಯಲ್ಲಿ ಹಿಕ್ಮೆತ್ ಅನೇಕ ಪದ್ಯಗಳನ್ನು ಬರೆದ, ಬೇರೆ ಕೈದಿಗಳ ಜೊತೆಗೂಡಿ ನೇಯ್ಗೆಯ ಸಹಕಾರಿ ಸಂಘವನ್ನು ಶುರು ಮಾಡಿದ, ಕನ್ನಡಿ ಮಾಡುವ ಸಣ್ಣ ಉದ್ಯಮ ನಡೆಸಿದ... ಹೆಂಡತಿ ಪಿರಾಯೇಯನ್ನು ಡೈವೋರ್ಸ್ ಮಾಡಿ ಇನ್ನೊಬ್ಬ ಹುಡುಗಿಯ ಪ್ರೇಮಪಾಶದಲ್ಲೂ ಬಿದ್ದ!

ಹಿಕ್ಮೆತ್ ಬಿಡುಗಡೆಗಾಗಿ ಅಂತರಾಷ್ಟ್ರೀಯ ಹೋರಾಟ ನಡೆಸಿದ ಅನೇಕ ಲೇಖಕ, ಹೋರಾಟಗಾರರಲ್ಲಿ ನೆರೂಡಾನೂ ಒಬ್ಬ. ಬಿಡುಗಡೆಯ ನಂತರ ಮತ್ತೆ ಟರ್ಕಿಯಲ್ಲಿ ಕಿರುಕುಳ ಶುರುವಾದಾಗ ತಪ್ಪಿಸಿಕೊಂಡು ಹಿಕ್ಮೆತ್ ರಷಿಯಾಗೆ ಹೋದ. ಅಲ್ಲಿ ಒಂದು ಕಡೆ ನೆಲೆ ನಿಲ್ಲದೆ ಸಾಯುವವರೆಗೂ ದೇಶ ದೇಶಗಳನ್ನು ಅಲೆದ.

ಹಿಕ್ಮೆತ್ ಜೀವನದುದ್ದಕ್ಕೂ ಬೇರೆ ಬೇರೆ ರೀತಿಯ ಪದ್ಯಗಳನ್ನು - ಉತ್ಕಟ ಪ್ರೇಮ ಪದ್ಯಗಳಿಂದ ಹಿಡಿದು ಪಾರ್ಟಿಯ ಪ್ರಾಪಗಂಡಾವರೆಗೂ - ಬರೆದಿದ್ದಾನೆ. ನಾಟಕ ಸಿನೆಮಾಗಳಿಗೂ ಸ್ಕ್ರಿಪ್ಟ್ ಬರೆದಿದ್ದಾನೆ. ಹಿಕ್ಮೆತ್ ತನ್ನ ಜೀವನ ಮತ್ತು ಕಾವ್ಯವನ್ನು ಕಂಡ ಬಗೆಯನ್ನು ಅವನ ಈ ಮಾತು ಹಿಡಿದಿಡುತ್ತದೆ: ``I want to write poems that both talk only about me and address just one other person and call out to millions, I want to write poems that talk of a single apple, of the plowed earth, of the psyche of someone getting out of prison, of the struggle of the masses for a better life, of one man's heartbreaks, I want to write about fearing and not fearing death.''

ಇಲ್ಲಿ ನಾನು ಹಿಕ್ಮೆತ್‌ನ ಸೆರೆಮನೆಯ ಅನುಭವ ಕುರಿತ ಮೂರು ಪದ್ಯಗಳನ್ನು ಅನುವಾದ ಮಾಡಿದ್ದೇನೆ. ಪ್ರಪಂಚದ ಅನೇಕ ಭಾಷೆಗಳಲ್ಲಿ ಸೆರೆಮನೆಯ ಪದ್ಯಗಳ ಒಂದು ದೊಡ್ಡ ಪರಂಪರೆಯೇ ಇದೆ. ಪ್ಯಾಲೆಸ್ಟೈನ್, ಶ್ರೀಲಂಕ, ಪಕ್ಕದ ಆಂಧ್ರದಲ್ಲಿಯೂ ಕಾಣುತ್ತೇವೆ. ಕನ್ನಡದಲ್ಲಿ ಬೆರಳೆಣಿಕೆಯಷ್ಟು ಸೆರೆಮನೆ ಅನುಭವದ ಬಗ್ಗೆ ಗದ್ಯ ಬರಹಗಳಿವೆ, ಆದರೆ ಈ ಅನುಭವದ ಬಗೆಗಿನ ಪದ್ಯಗಳು ಇದ್ದ ಹಾಗಿಲ್ಲ. ಎಮರ್ಜೆನ್ಸಿ ಸಮಯದಲ್ಲಿ ಕೆಲವು ದಿನಗಳ ಕಾಲ ಜೈಲಿನಲ್ಲಿ ಕಳೆದ ಚಂದ್ರಶೇಖರ ಪಾಟೀಲ ಮತ್ತು ಕೆಲವರು ಕವಿತೆಗಳನ್ನು ಬರೆದು ಅಲ್ಲೊಂದು ಕಾವ್ಯ ಗೋಷ್ಠಿ ನಡೆಸಿದ್ದರಂತೆ. ಅದು ಬಿಟ್ಟರೆ ಬೇರೆ ಉದಾಹರಣೆಗಳು ನನಗೆ ಗೊತ್ತಿಲ್ಲ. ಕುಂದದ ಜೀವನೋತ್ಸಾಹ ಹೀಗೂ ಇರಬಹುದು ಅನ್ನಿಸುವುದಕ್ಕೆ ಈ ಕೆಳಗಿನ ಪದ್ಯಗಳಿಗಿಂತ ಒಳ್ಳೆಯ ಉದಾಹರಣೆಗಳು ಸಿಗುವುದು ಕಷ್ಟ...

- ಬಾಗೇಶ್ರೀ

ಏಕಾಂಗಿ ಕೈದಿಯ ಪತ್ರ

ವಾಚಿನ ಪಟ್ಟಿಯ ಮೇಲೆ
ಉಗುರಿನಿಂದ ಕೆತ್ತಿದ್ದೇನೆ
ನಿನ್ನ ಹೆಸರು.
ನಾನಿರುವಲ್ಲಿ ರತ್ನಖಚಿತ ಹಿಡಿಯ
ಚಂದದ ಚಾಕು ಇಲ್ಲ,
ಇಲ್ಲಿನ ಮಂದಿ ಚೂಪಾದ ಏನನ್ನೂ
ನನ್ನ ಬಳಿ ಇರಗೊಡುವುದಿಲ್ಲ!
ನಾನಿರುವಲ್ಲಿ ಮೋಡಗಳನ್ನು ತಲೆಯಲ್ಲಿ ಮುಡಿದ
ಪೈನ್ ಮರಗಳೂ ಇಲ್ಲ.



ನನ್ನ ಪ್ರೀತಿಯ ಮಡದಿ!
ನನ್ನ ಶೃತಿ ತಪ್ಪಿದ ದನಿ
ನನ್ನದೇ ಎದೆಯ ಕಲಕಿ
ಹೃದಯ ಚೂರು ಚೂರಾಗಿದೆ.
ಆರ್ದ್ರ ನೀಲಿ ಕಣ್ಣುಗಳ,
ಕೆಂಪು ಸೊರ ಸೊರ ಮೂಗಿನ,
ಕಾಲಿಗೆ ಚಪ್ಪಲಿ ಇಲ್ಲದೆ

ಹಿಮದಲ್ಲಲೆವ
ಹಳೆಯ ಕತೆಗಳ ಹುಡುಗನ ಹಾಗೆ
ನಿನ್ನ ಅಪ್ಪುಗೆಯಲ್ಲಿ ಬೆಚ್ಚಗಾಗುವ ಆಸೆ.
ಈ ಗಳಿಗೆಯಲ್ಲಿ ಇಷ್ಟು ಶಕ್ತಿಹೀನ,
ಇಷ್ಟು ಸ್ವಾರ್ಥಿ
ಇಷ್ಟು ಹುಲುಮಾನವನಾಗಿರುವ ಬಗ್ಗೆ
ನಾಚಿಕೆಯೂ ಆಗುತ್ತಿಲ್ಲ.
ನನ್ನ ಈ ಸ್ಥಿತಿಯ ಬಗ್ಗೆ
ವೈದ್ಯಕೀಯ, ಮನಶಾಸ್ತ್ರೀಯ
ವಿವರಣೆಗಳಿರಬಹುದು.
ಕಿಟಕಿಯ ಸರಳುಗಳು,
ಮೂಲೆಯ ಮಣ್ಣಿನ ಹೂಜಿ,
ಎಲ್ಲಿ ಮನುಷ್ಯ ದನಿಗಳ
ದೂರ ಇಡುವ ಈ ನಾಲ್ಕು ಗೋಡೆಗಳು
ಬುದ್ಧಿಯ ಮೇಲೆ ಹೂಡಿದ ಕುಟಿಲ ಆಟವೇ
ಇದು ಇರಬಹುದು.
ಈಗ ಗಂಟೆ ಐದು.
ಎಲ್ಲಿ ಬರಡು ಬರಡು.
ನಿಗೂಢ ಪಿಸುಮಾತು.
ಮಣ್ಣಿನ ಚಾವಣಿ.
ದೂರ ಅನಂತದಲ್ಲಿ
ಅಲ್ಲಾಡದೆ ನಿಂತ
ಡೊಂಕು ಕಾಲಿನ ಬಡಕಲು ಕುದುರೆ.
ಒಳಗೊಳಗೇ ದುಃಖದ ಗೆದ್ದಲು ಹಿಡಿದು
ಟುಬ್ಬು ಹಿಡಿಸಲಿಕ್ಕೆ ಇಷ್ಟೇ ಸಾಕು.
ಭವ್ಯ ಮಶೀನುಗಳ, ಕವಿ, ಕಾವ್ಯ, ಕಲೆಗಳ
ಆ ಹೊರಗಿನ ಬೆರಗಿಲ್ಲದ ಲೋಕದ ಮೇಲೆ
ಹಾಸುತ್ತಿದೆ ಕತ್ತಲೆಯ ಕೌದಿ.

ನೆನ್ನೆಯಂತೆ ಇಂದೂ ಇದ್ದಕ್ಕಿದ್ದಂತೆ ಕವಿಯುತ್ತದೆ ಕತ್ತಲು.
ಬೆಳಕಿನ ಕೊನೆಯ ಕಿರಣ ಬಡಕಲು ಕುದುರೆಯ
ಸುತ್ತಿ
ಮತ್ತೆ ಮರೆಯಾಗುತ್ತದೆ.
ಸುಮ್ಮನೆ ಮಲಗಿದ ಗಡಸು ಗಂಡಿನಂತೆ ಕಾಣುವ
ಮರಗಳಿಲ್ಲದ ಈ ಬರಡು ಸೀಮೆ
ಇದ್ದಕ್ಕಿದ್ದಂತೆ ಚುಕ್ಕಿಗಳಿಂದ ತುಂಬಿ ತೂಗುತ್ತದೆ.
ಮತ್ತೂ ಒಮ್ಮೆ ಹಳೆಯದೆಲ್ಲ ಮೆಲುಕು ಹಾಕಲು
ರಂಗ ಸಿದ್ಧ.
ನನ್ನೊಳಗಿನ ಕಲಾವಿದ ಎದ್ದಿದ್ದಾನೆ
ತನ್ನೆಲ್ಲ ಪ್ರತಿಭೆಯ ಮೆರೆದು
ಹಳೆಯ ದುಃಖದ ರಾಗಗಳ
ಬಾಲ್ಯದ ಅದೇ ಕೀರಲು ದನಿಯಲ್ಲಿ
ಮತ್ತೆ ಹಾಡಲಿಕ್ಕೆ.
ಮತ್ತೊಮ್ಮೆ ನನ್ನ ಹತಾಶ ಹೃದಯವ ಬಾಯ್ಮುಚ್ಚಿಸಿ
ನನ್ನ ಮನದೊಳಗೆ ನಿನ್ನ ದನಿಯ ಮೂಡಿಸುವ
ಪ್ರಯತ್ನದಲ್ಲಿ ತೊಡಗಿದ್ದೇನೆ.
ಅದೆಷ್ಟು ದೂರ?
ಕಂಡ ಹಾಗಿದೆ ನಿನ್ನ ರೂಪ
ಒಡೆದ, ಹೊಗೆ ಹಿಡಿದ
ಕನ್ನಡಿಯಲ್ಲಿ.

೨

ಹೊರಗೆಲ್ಲ ವಸಂತದ ಹುಯಿಲು.
ಹಸಿ ಮಣ್ಣಿನ ವಾಸನೆ.



ಹಕ್ಕಿಗಳ ಹಾಡಿನ ಹೊನಲು.
ಬಂದಿದೆ ವಸಂತ, ನನ್ನ ಪ್ರಿಯ ಮಡದಿ.
ಥಳಥಳಿಸುತ್ತಿದೆ ಹೊರಗೆ ಭೂಮಿಯೆಲ್ಲ.
ಒಳಗೆ ಹಾಸಿಗೆಯ ತುಂಬ ತಿಗಣೆಗಳ ಸಂತೆ.
ಹೂಜಿಯ ನೀರು ಇನ್ನು ಹೆಪ್ಪು ಗಟ್ಟುವುದಿಲ್ಲ.
ಬೆಳಗ್ಗೆ ಸಿಮೆಂಟು ಗೋಡೆಗಳ ಮೇಲೆ
ಸೂರ್ಯ ಕಿರಣಗಳ ಚೆಲ್ಲಾಟ.
ಮಧ್ಯಾಹ್ನದವರೆಗೂ ಆಗಾಗ
ಬಂದು ಹೋಗುವ ಅತಿಥಿ ಸೂರ್ಯ.
ಸೂರ್ಯನೇರಿದ ಹಾಗೆ
ಸರಸರ ಗೋಡೆ ಹತ್ತುವ ನೆರಳುಗಳು.
ಕಿಟಕಿಯ ಗಾಜಿಗೆ ಹತ್ತಿದೆ ಬೆಳಕ ಬೆಂಕಿ.
ಹೊರಗೆ ಸಂಜೆ ಮಾಗಿ ಕತ್ತಲಾದಂತೆ
ಮೋಡಗಳಿಲ್ಲದ ಶುಭ್ರ ಆಗಸ.
ಒಳಗೆ ವಸಂತದ ಕಾರ್ಗತ್ತಲ ರಾತ್ರಿ
ಸ್ವಾತಂತ್ರ ಎಂಬ ಮಿರುಗುವ ಮೈ
ಬೆಂಕಿ ಕಣ್ಣಿನ ದೈತ್ಯ
ಮೈಮೇಲೆ ಬರುವವನಿದ್ದಾನೆ.
ಬಂದೇ ಬರುತ್ತಾನ ಪ್ರತಿ ವಸಂತ
ಗೊತ್ತು ನನಗದು ಖಚಿತ
ಹಳೆಯ ಅನುಭವದಿಂದ.

೩

ಇಂದು ಭಾನುವಾರ.
ಸೂರ್ಯನಿಗೆ ಮೈ ಒಡ್ಡುವ
ಅವಕಾಶ ಕೊಟ್ಟಿದ್ದಾರೆ
ಮೊಟ್ಟ ಮೊದಲ ಬಾರಿ.
ಹೊರಗೆ ಹೋದವ ಗರ ಬಡಿದು ನಿಂತುಬಿಟ್ಟೆ.
ಆಕಾಶ ಅದೆಷ್ಟು ದೂರ, ಅದೆಷ್ಟು ನೀಲಿ
ಅದೆಷ್ಟು ಅಗಾಧ
ಅಂತ ಅನ್ನಿಸಿತು ಮೊದಲ ಬಾರಿ.
ನಮ್ರತೆಯಿಂದ ಭೂಮಿಯ ಮೇಲೆ ಕೂತು
ಗೋಡೆಗೊರಗಿದೆ.
ಒಂದು ಗಳಿಗೆ ಏನೇನೂ ಇಲ್ಲ,
ಹೋರಾಟವಿಲ್ಲ, ಬಿಡುಗಡೆ ಇಲ್ಲ, ಮಡದಿ ಇಲ್ಲ
ಬರೀ ಖುಷಿ.

ಜೈಲಿನಿಂದಾಚೆ


ಧಿಗ್ಗನೆದ್ದೆ.
ಎಲ್ಲಿದ್ದೇನೆ?
ಇಲ್ಲೇ, ಮನೆಯಲ್ಲೇ?
ನಿದ್ದೆಯೋ ಎಚ್ಚರವೋ
ಒಟ್ಟಲ್ಲಿ
ಮನೆಯಲ್ಲಿರುವ ಅಭ್ಯಾಸ
ತಪ್ಪಿ ಹೋಗಿದೆ.
ಹದಿಮೂರು ವರ್ಷ
ಜೈಲೊಳಗಿದ್ದು ಬಂದ ಮೇಲೆ
ಎಲ್ಲ ಹೀಗೇ
ಭ್ರಾಂತಿ ದಿಗ್ಭ್ರಾಂತಿಗಳ ಸಾಲು ಸರಮಾಲೆ
ಅರೆ! ಯಾರಿಲ್ಲಿ ಪಕ್ಕದಲ್ಲಿ?
ಓಹೋ?
ಒಂಟಿತನದ ಕರಿನೆರಳೆಲ್ಲ,
ಮುಗ್ಧ ಕಿನ್ನರಿಯ ಹಾಗೆ
ಮಲಗಿದ ಮುದ್ದು ಮಡದಿ.
ತುಂಬು ಬಸಿರು
ಅವಳಿಗದೆಷ್ಟು ಒಪ್ಪುತ್ತದಲ್ಲ!
ಗಂಟೆ ಈಗೆಷ್ಟು?
ಮುಂಜಾನೆ ಎಂಟು.
ಸಮಯ ಉಂಟು
ಪರವಾಗಿಲ್ಲ?
ಬೆಳ್ಳಂಬೆಳಕಲ್ಲಿ ಮನೆ ಹೊಗ್ಗುವ ರಿವಾಜು
ನಮ್ಮೂರ ಪೋಲೀಸರಿಗೆ ಇನ್ನೂ ಒಗ್ಗಿಲ್ಲ

...ದಿಗಳಿಗೆ ...ದಿಮಾತು

...ನ್ನ ವಿಶಾಲ ಜಗ,
...ಊರು, ಕೇರಿಯ ಜನದ ಮೇಲೆ
...ಷದ ನಂಬಿಕೆ ಹೊಂದಿದ ತಪ್ಪಿಗೆ
... ಕುಣಿಕೆ ಹೇಗೋ ತಪ್ಪಿ
...ನೆ ವಾಸ ಖಾತ್ರಿಯಾದರೆ,
...ಹತ್ತಿಪ್ಪತ್ತು ವರ್ಷ ಕಳೆದು
...ಂದಷ್ಟು ಬಾಕಿ ಉಳಿದರೆ,
...ಯ್ಯೋ, ನೇಣುಗಂಬಕ್ಕೆ ಪತಾಕೆಯಂತೆ
...ಬಿಗಿದು ಏರಿಸಿದ್ದರೇ ಎಷ್ಟೋ ಛೇಪಿತ್ತು!"
... ಖಂಡಿತ ಹೇಳಬೇಡ.
...ಬಿಡದೆ ಬದುಕು.

... ಅದೇನು ಭಾರಿ ಆನಂದದ ಬದುಕಲ್ಲ,
... ಅವುಡುಗಚ್ಚಿ ಮತ್ತೂ ಒಂದು ದಿನ
...ಯೇಬಿಡುವುದು
...ವೈರಿಯ ಹೊಟ್ಟೆ ಉರಿಸಲು
... ಮಾಡಬೇಕಾದ ಕರ್ತವ್ಯ.

...ಳಗಿನ ಒಂದರ್ಥ
...ಯೊಳಗಿನ ಬಂಡೆಯಂತೆ
... ಒಂಟಿಯಾಗಿರಲಿ.
... ಇನ್ನರ್ಧ ಹೊರಗಿನ ಬಿರುಗಾಳಿಗೆ
...ತ್ತು ಹರಿದಾರಿಗಳ ದೂರದಲ್ಲೊಂದು
...ನೆ ಉದುರಿಬಿದ್ದರೂ ಕಂಪಿಸಲಿ.



...ಗ್ಗಿ ಕಾಯುತ್ತಾ
... ಗೀತೆಗಳ ಗುನುಗುತ್ತಾ
...ಮೆಲ್ಲ ಸೂರು ನೋಡುತ್ತಾ
...ನೆ ಮಲಗುವುದು ಸುಂದರ,
... ಅಷ್ಟೇ ಅಪಾಯಕರ.

... ಮಾಡುವಾಗ ಕನ್ನಡಿ ನಿರುಕಿಸಿ ನೋಡು,
...ಯುತ್ತಿರುವ ವಯಸ್ಸ ಮರೆತುಬಿಡು,
...ದ್ದರೆ ಹೆಕ್ಕಿ ತೆಗೆ,
...ಸು ವಸಂತ ರಾತ್ರಿಗಳ ನಡೆ,

... ಮರೆಯಬೇಡ
...ಯ ಕಟ್ಟಕಡೆ ತುಣುಕು.
...ಬಿಚ್ಚಿ ನಗುವ ಅಭ್ಯಾಸ
...ಹೋಗದಿರಲಿ ಕೊಂಚ ಜೋಕೆ.

...ಗೆ ಗೊತ್ತು!
...ಪ್ರೀತಿಯ ಹುಡುಗಿ
...ಸ ಸಾಕು ಅಂದುಬಿಡಬಹುದು.
...ವ ದೊಡ್ಡ ಮಾತು ಅನ್ನಬೇಡ.
...ನ ಮನುಷ್ಯನಿಗದು
...ದ ಚಪ್ಪಟದಂತ ನೋವು.
...ರುವಾಗ ಗುಲಾಬಿ ತೋಟಗಳ ಯೋಚನೆ ಕೇಡು.

...ದ ಸಮುದ್ರ, ಮೇರುಪರ್ವತಗಳ ಯೋಚನೆ ಮೇಲು.
...ಡದೆ ಬರೆ, ಓದು.
...ಷ್ಟು ಬಟ್ಟೆ ನೇಯಿ, ಕನ್ನಡಿ ಮಾಡು.
...ಲ್ಲ,
...ತ್ತು ವರ್ಷ ಒಳಗೆ ಕಳೆಯುವುದು
... ಕೆಲಸವೇನಲ್ಲ,
...ದೆಯ ಗೂಡ ಎಡ ಬದಿಯ
...ನ ಬೆರಳಷ್ಟು ಮುಂಗಾಗದಸಕ.

ಆಯಾಮ

ಕಿರುಗತೆ



"ಈ ರೀತಿ ದಿನಗಟ್ಟಲೆ ಮಳೆ ಸುರಿದಿದ್ದೇ ಇಲ್ಲ ನಮ್ಮೂರಲ್ಲಿ" ಸಂಜೆ ಆಫೀಸಿನಲ್ಯಾರೋ ಹೇಳಿದ ಮಾತುಗಳನ್ನು ಮೆಲುಕುಹಾಕುತ್ತ ಕಿಟಕಿಯ ಬಳಿ ನಿಂತಿದ್ದ ರಾಜು ಮೌಳೀಶ್ವರ್. ಭೂರಮೆಯನ್ನೇ ಸೀಳಿಹಾಕುವಂತಹ ಗುಡುಗಿನ ಶಬ್ಧಕ್ಕೆ ಎಚ್ಚರವಾಗಿ ರೂಮಿನಿಂದ ಹೊರಬಂದು ಮಳೆಯ ಆರ್ಭಟವನ್ನು ವೀಕ್ಷಿಸುತ್ತಿದ್ದ. ಯಾವ ಫೋನೂ ಬರದಿದ್ದರೆ ಸಾಕಪ್ಪ ಎಂದುಕೊಳ್ಳುವಷ್ಟರಲ್ಲಿ ಲ್ಯಾಂಡ್ ಲೈನ್ ರಿಂಗಣಿಸಿತು. ಈ ಲ್ಯಾಂಡ್ ಲೈನನ್ನೂ ಸ್ವಿಚ್ ಆಫ್ ಮಾಡುವ ಹಾಗಿದ್ದಿದ್ದರೆ ಚೆನ್ನಾಗಿತ್ತು ಎಂದುಕೊಂಡು ರಿಸೀವರ್ ತೆಗೆದುಕೊಂಡ.

"ಹಲೋ?"

"ಹಲೋ ಕಮಿಷನರ್ ಸರ್ರಾ?"

"ಹೌದು ಹೇಳಿ."

"ನಾನು ಸರ್ ರವಿ. ದೊಡ್ಮೋರೀಲಿ ಜೋರು ಮಳೆಗೆ ಸ್ಲಮ್ಮೋರು ನಾಲ್ಕು ಜನ ಕೊಚ್ಚಿಕೊಂಡು ಹೋಗಿದ್ದಾರೆ ಸರ್."

'ಸಾಯ್ಲಿ ಬಿಡಿ' ನಾಲಗೆಯ ತುದಿಗೆ ಬಂದ ಮಾತನ್ನು ತಡೆಹಿಡಿದುಕೊಂಡು...

****

ಬೆಳಗಿನಿಂದ ತುಂತುರುವಿನಂತೆ ಉದುರುತ್ತಿದ್ದ ಮಳೆ ಸಂಜೆ ವೇಳೆಗೆ ರಭಸ ಕಂಡುಕೊಂಡಿತ್ತು. ಅದು ಆ ವರ್ಷದ ಮೊದಲ ಮುಂಗಾರು ಮಳೆ. ಮನೆಗೆ ಹೋಗಲು ಅಣಿಯಾಗುತ್ತಿದ್ದ ರಾಜು ಮೌಳೀಶ್ವರ್. ದೊಡ್ಮೋರೀಲಿ ನೀರು ಕಟ್ಟಿಕೊಂಡು ದೊಡ್ಮೋರಿ ಸ್ಲಮ್ಮಿಗೆಲ್ಲ ನೀರು ನುಗ್ತಾ ಇದೆ ಎಂಬ ಸುದ್ದಿ ಬಂತು. ಐದು ನಿಮಿಷಗಳಲ್ಲಿ ಸ್ಲಮ್ಮಿನ ಬಳಿಗೆ ಬಂದಿದ್ದ ರಾಜು ಮೌಳೀಶ್ವರ್. ಮೊದಲ ಮಳೆಗೆ ಈ ರೀತಿಯಾದರೆ ಮುಂದೆ ಹೇಗೆ ಎಂದು ಯೋಚಿಸುತ್ತಾ ತಾತ್ಕಾಲಿಕವಾಗಿಯಾದರೂ ಇವರನ್ನೆಲ್ಲ ಒಂದೆಡೆಗೆ ಸ್ಥಳಾಂತರಿಸಬೇಕೆಂದು ಯೋಚಿಸುತ್ತ ನಿಂತಿದ್ದ.

'ಇಲ್ನೀರು ನಿಂತಿದೆ ಸರ್', 'ಅಲ್ನೀರು ನುಗ್ತಾ ಇದೆ ಸರ್" ಎಂದ್ಹೇಳುತ್ತಿದ್ದರು ಅಲ್ಲಿನ ಜನ. ಆ ಭಾಗದ ಎಂಎಲ್ಎ ಬಂದ ತಕ್ಷಣ ಅಲ್ಲಿಯವರೆಗೂ ಸುಮ್ಮನೆ ಒಂದೆಡೆ ಮಳೆಯಿಂದ ಮರೆಗೆ ನಿಂತಿದ್ದ ಇಬ್ಬರು ಶಾಸಕರ ಬಳಿ ಓಡೋಡಿ ಬಂದರು. ಒಬ್ಬ ಎತ್ತರಕ್ಕಿದ್ದ ದಾಂಡಿಗ. ಮತ್ತೊಬ್ಬ ಅವನಷ್ಟೇ ಎತ್ತರ ವಿಪರೀತವೆನಿಸುವಷ್ಟು ಸಣ್ಣಕ್ಕಿದ್ದ. ಕಣ್ಣಲ್ಲಿ ನೀರು ಹರಿಸುತ್ತ "ನೋಡಿ ಸರ್. ಈ ಆಫೀಸರ್‌ಗಳು ಮೋರಿ ಕ್ಲೀನ್ ಮಾಡ್ದೆ ನಮಗೊಂದು ಸೂರೂ ಇಲ್ದಂಗೆ ಮಾಡ್ ಬುಟ್ರು" ಎಂದು ಎದೆ ಬಡಿದುಕೊಳ್ಳುತ್ತ ಗೋಳಾಡಲಾರಂಭಿಸಿದರು. ರಾಜು ಅವರೆಡೆಗೆ ಅಚ್ಚರಿಯಿಂದ ನೋಡುತ್ತಿರುವಾಗಲೇ ಎಂಎಲ್ಎ ಸಾಹೇಬ್ರು ಕಮಿಷನರ್ ಬಳಿಗೆ ಬಂದರು.

"ಏನ್ರೀ. ರಾಜು ಅವ್ರೇ, ಮಳೆಗಾಲ ಬರೋದಿಕ್ಕೆ ಮುಂಚೆ ಮೋರಿಗಳನ್ನೆಲ್ಲ ಕ್ಲೀನ್ ಮಾಡಿಸ್ಬೇಕು ಅನ್ನೋದನ್ನ ನಾವೇ ಹೇಳ್ಕೊಡಬೇಕೇನ್ರಿ?"

****

ಪ್ರತೀ ವರುಷದ ಮಳೆಗಾಲದಲ್ಲಿ ಸ್ವಲ್ಪ ಮಳೆಗೂ ನೀರು ದೊಡ್ಡ ಮೋರಿ ಸ್ಲಮ್ಮಿಗೆ ನುಗ್ಗುತ್ತಿತ್ತು. ದೊಡ್ಮೋರೀನ ಸರಿಯಾಗಿ ಕ್ಲೀನ್ ಮಾಡ್ಸೊಲ್ಲ ಅನ್ನೋದನ್ನ ಕೇಳಿ ಕೇಳಿ ರೋಸಿ ಹೋಗಿತ್ತು ರಾಜುಗೆ. ಅದಕ್ಕಾಗೇ ಈ ಬಾರಿ ಖುದ್ದಾಗಿ ಕ್ಲೀನಿಂಗ್ ನಡೀತಾ ಇರೋ ಜಾಗಕ್ಕೆ ಹೋಗಿದ್ದ. ಹವಾಮಾನ ಇಲಾಖೆ ಪ್ರಕಾರ ಮಳೆ ಪ್ರಾರಂಭವಾಗೋದಿಕ್ಕೆ ಇನ್ನೂ ಹದಿನೈದು ದಿನಗಳು ಬಾಕಿಯಿದ್ದವು. ಕ್ಲೀನ್ ಮಾಡಲು ಮೋರಿಯೊಳಗೇ ಇಳಿದಿದ್ದ ಜೆಸಿಬಿಯ ಬಾಯಿಗೆ ದೊಡ್ಡ ಕಲ್ಲುಗಳು, ಸಿಮೆಂಟ್ ಚೂರುಗಳು ಸಿಗುತ್ತಿತ್ತು. "ಈ ಸಲ ಮಳೆಗಾಲದಲ್ಲಿ ಸ್ವಲ್ಪಾನೂ ನೀರು ನಿಲ್ಲಬಾರದು ನೋಡಿ" ರಾಜು ಮೌಳೀಶ್ವರ್ ಹೇಳುತ್ತಿದುದನ್ನು ಕೇಳಿಸಿಕೊಂಡ ಕಾರ್ಮಿಕನೊಬ್ಬ "ಪ್ರತೀ ವರುಷಾನೂ ಸರಿಯಾಗೇ ಕ್ಲೀನ್ ಮಾಡ್ತೀವಿ ಸರ್. ಅಲ್ಲಿ ಹಿಂದೆ ನೋಡಿ... ಆ ಮಣ್ಣು ದೊಡ್ಡೊಡ್ಡ ಇಟ್ಟಿಗೆ ಸಿಮೆಂಟು ಚೂರು ಮೋರಿಯೊಳಗೆ ಬಿದ್ದೂ ಬಿದ್ದೂ ಹಿಂಗಾಯ್ತದೆ ಸರ್" ಎಂದ.

"ಯಾರದದು?"

"ಎಂಎಲ್ಎ ಸಾಹೇಬರ ತಮ್ಮನ್ದು ಸರ್. ಕಂಟ್ರ್ಯಾಕ್ಟರ್ ಅವ್ರು. ಎಲ್ಲೇ ಮಣ್ಣು ಕೀಳ್ಲೀ, ಹಳೆ ಮನೆಗಳನ್ನು ಒಡ್ದುಹಾಕ್ಲಿ ಅದೆಲ್ಲ ತಂದು ಮೋರಿ ಪಕ್ಕ ಕೆಲ್ವೊಮ್ಮೆ ಮೋರಿಯೊಳಗೇ ಸುರೀತಾರೆ ಸರ್. ಸುಮ್ಮನೆ ನಾವು ಕೆಲಸ ಮಾಡೋದಿಲ್ಲ ಅಂತೀರ ನೀವು."

****

"ಈ ಬಾರಿ ನಾನೇ ಸ್ಪಾಟಿನಲ್ಲಿ ನಿಂತು ಕ್ಲೀನ್ ಮಾಡ್ಸಿದ್ದೆ ಸರ್. ಒಬ್ಬ ಕಂಟ್ರ್ಯಾಕ್ಟರ್ ದಿನಾ ಕಲ್ಲು ಮಣ್ಣು ತಂದು ಸುರೀತಾರೆ ಸರ್. ಎಷ್ಟು ಸಲ ಹೇಳಿದ್ರೂ ಕೇಳೋದಿಲ್ಲ ಸರ್. ಇನ್ಫ್ಲುಯೆನ್ಸ್ ಅದೂ ಇದೂ ಅಂತಾರೆ."

"ಯಾರ್ರೀ ಅದು?"

"ನಿಮ್ಮ ತಮ್ಮ ಸರ್" ಮೆಲುದನಿಯಲ್ಲಿ ಸುತ್ತಲಿನವರಿಗೆ ಕೇಳಿಸದಂತೆ ಹೇಳಿದ.

ಉತ್ತರ ಕೇಳಿದ ಶಾಸಕರೇನೂ ವಿಚಲಿತರಾದಂತೆ ಕಾಣಲಿಲ್ಲ. ದನಿಯೇರಿಸುತ್ತ "ನೀವು ಸೇವೆ ಮಾಡಬೇಕಿರುವುದು ಜನಗಳಿಗೇ ಹೊರ್ತು ನನ್ನ ತಮ್ಮನಿಗಲ್ಲ. ಮೊದ್ಲು ಅವನಿಗೆ ನೋಟೀಸ್ ಕೊಡಿ" ಸುತ್ತಲಿನವರಿಗೆಲ್ಲ ಕೇಳಿಸುವಂತೆ ಹೇಳಿದರು.

ಹತ್ತು ದಿನದ ನಂತರ ಎಂಎಲ್ಎ ಕಮಿಷನರನ್ನು ನೋಡಲು ಖುದ್ದು ಅವರ ಕಚೇರಿಗೇ ಬಂದರು. ಕಚೇರಿಯ ಹೊರಗೆ ನಾನಾ ಕೆಲಸಕ್ಕೆ ಕಾಯುತ್ತಿದ್ದ ಜನರ ಜೊತೆ ಒಂದಷ್ಟು ಸಮಯ ಕಳೆದು ಒಳಗೆ ಬಂದರು. ಅವರು ಕುಳಿತ ನಂತರ ರಾಜು ಕುಳಿತ.

"ನನ್ನ ತಮ್ಮನಿಗೆ ನೋಟೀಸ್ ಕಳುಹಿಸಿದ್ದೀರಂತೆ" ನಗುತ್ತಾ ಕೇಳಿದರು.

"ನೀವೇ ಹೇಳಿದ್ರಲ್ಲ ಸರ್".

ಗಹಗಹಿಸಿ ನಕ್ಕು "ನಿಮಗೇನು ಕಮಿಷನರ್ರೇ? ಹಂಗೂ ಹಿಂಗೂ ಒಂದ್ಸಲ ಪರೀಕ್ಷೇಲೀ ಪಾಸಾಗಿಬಿಟ್ಟರೆ ರಿಟೈರಾಗೋವರೆಗೂ ಅಧಿಕಾರದಲ್ಲೇ ಇರ್ತೀರ. ನಮ್ದಂಗಲ್ಲವಲ್ಲ, ಐದೈದು ವರ್ಷಕ್ಕೂ ಕೆಲವೊಮ್ಮೆ ಇನ್ನೂ ಬೇಗ ಜನಗಳ ಮುಂದೆ ಮಣ್ಣು ಹೊರಬೇಕು. ಜನಗಳ ಮುಂದೆ ಒಂದಷ್ಟು ಇಮೇಜ್ ಹೆಚ್ಚಾಗಲಿ ಅಂತ ನಾಲ್ಕು ಮಾತಾಡಬಹುದು. ಅದನ್ನೆಲ್ಲ ಸೀರಿಯಸ್ಸಾಗಿ ತಗೋಬಾರದು."

ಆಯಿತೆಂಬಂತೆ ತಲೆಯಾಡಿಸಿದ.

"ಪರ್ವಾಗಿಲ್ಲ ಬಿಡಿ. ನೀವೂ ಹೊಸಬ್ರು. ಯಾರ್ ಏನ್ ಹೇಳಿದ್ರೂ ಮನಸ್ಸಿಗ್ಹಾಕಿಕೊಂಡು ಮಾಡ್ಬಿಡ್ತೀರ. ಅಂದ್ಹಾಗೆ ಸ್ಲಮ್ಮಿನ ಕಡೆ ಹೋಗಿದ್ರಾ?"

"ಹ್ಞೂ ಸರ್ ಹೋಗಿದ್ದೆ. ಆ ಸ್ಲಂ ಅಲ್ಲಿರೋತನಕ ಈ ತೊಂದರೆ ತಪ್ಪಿದಲ್ಲ ಸರ್. ಅದಿಕ್ಕೆ ಅವರನ್ನೆಲ್ಲ ಬೇರೆಡೆಗೆ ಸ್ಥಳಾಂತರಿಸಿದರೆ ಹೇಗೆ ಅಂತ?"

"ಎಲ್ಲಿಗೇಂತ ನಿಮ್ಮ ಮನಸ್ಸಿನಲ್ಲಿರೋದು?"

"ಐದು ವರ್ಷದ ಹಿಂದೆ ಆಶ್ರಯ ಮನೆಗಳನ್ನು ಅರ್ಧಂಬರ್ಧ ಕಟ್ಟಿತ್ತಲ್ಲ ಸರ್. ಆಗೇನೋ ಊರಿಂದಾಚೆ ಅಂತ ಯಾರೂ ಹೋಗದೆ ಪಾಳುಬಿದ್ದೋಯ್ತು. ಈಗ ಆ ಮನೆಗಳನ್ನೂ ದಾಟಿ ಊರು ಬೆಳೆದುಬಿಟ್ಟಿದೆ. ಅಲ್ಲಿಗೆ ಸ್ಥಳಾಂತರಿಸಿದ್ರೆ ಚೆನ್ನಾಗಿರುತ್ತೆ ಅಂತ ನನ್ನ ಅಭಿಪ್ರಾಯ. ನೀವೇನಂತೀರ ಸರ್".

"ಒಳ್ಳೇದು ಒಳ್ಳೇದು. ಒಳ್ಳೇ ಕೆಲಸಕ್ಕೆ ನನ್ನ ಬೆಂಬಲ ಯಾವತ್ತೂ ಇದೆ."

****

"ಏನ್ ಸರ್ ನೀವು. ಆ ಕಮಿಷನರ್ ಹೇಳಿದ್ದಕ್ಕೆ ಒಳ್ಳೇದು ಒಳ್ಳೇದು ಅಂತ ತಲೆಯಾಡಿಸಿಬಿಟ್ರಲ್ಲ" ಶಾಸಕರ ಪಿಎ ಕಾರಿನಲ್ಲಿ ಹೇಳಿದ.

"ಅವರು ಹೇಳಿದ್ರಲ್ಲೂ ಅರ್ಥ ಇದೆಯಲ್ಲವಾ? ಈ ಸ್ಲಂನಲ್ಲಿ ನರಕವಾಸ ಅನುಭವಿಸೋದಕ್ಕಿಂತ ಅಲ್ಲೇ ಇರಲಿ ಬಿಡು".

ಪಿಎ ಹಣೆ ಬಡಿದುಕೊಳ್ಳುತ್ತ "ನಿಮ್ಮ ತಮ್ಮನೋರು ಮುಂದಿನ ಸಲ ಕಾರ್ಪೋರೇಟರ್ ಎಲೆಕ್ಷನ್ನಿಗೆ ನಿಲ್ಲಬೇಕು ಅಂತಿದ್ದಾರಲ್ಲ ಸರ್. ಅವರು ನಿಲ್ಲಬೇಕೂ ಅಂತಿರೋ ವಾರ್ಡಿನಲ್ಲೇ ಅಲ್ವ ಸರ್ ಈ ಸ್ಲಂ ಬರೋದು?"

"ಹೌದಲ್ಲ! ಏನೋ ಜನರಿಗೆ ಅನುಕೂಲವಾಗುತ್ತೆ ಅಂತಾ ಆ ಕಮಿಷನರ್ ಹೇಳಿದ್ದಕ್ಕೆ ಹ್ಞೂಂಗುಟ್ಟಿದೆ! ಇದನ್ನು ನಾನು ಯೋಚಿಸಲೇ ಇಲ್ಲ ನೋಡು."

****

"ದೊಡ್ಮೋರಿ ಸ್ಲಂನೋರು ಒಂದ್ಹತ್ತದಿನೈದು ಜನ ಬಂದಿದ್ದಾರೆ ಸರ್. ನಿಮ್ಮನ್ನು ಕಾಣ್ಬೇಕಂತೆ."

"ಸರಿ ಕಳಿಸು."

ಒಳಬಂದವರನ್ನು ಗಮನಿಸಿದ ರಾಜು ಮೌಳೀಶ್ವರ್. ಹತ್ತು ಜನರ ಗುಂಪಿನ ಮುಂದೆ ನಿಂತಿದ್ದ ದಾಂಡಿಗ ಮತ್ತು ಸಣಕಲನ ಗುರುತು ಹತ್ತುವುದು ಕಷ್ಟವಾಗಲಿಲ್ಲ. ಏನೋ ತೊಂದರೆಯಿದೆ ಎಂಬ ಭಾವ ಬಂತು. ಏನು ವಿಷಯ ಎಂಬಂತೆ ಅವರೆಡೆಗೆ ನೋಡಿದ.

"ನಮ್ಮನ್ನೆಲ್ಲ ಬೇರೆ ಕಡೆಗೆ ಶಿಫ್ಟ್ ಮಾಡ್ತೀರಂತೆ" ದಾಂಡಿಗ ಕೇಳಿದ.

"ಹೌದು ಆ ರೀತಿ ಒಂದು ಪ್ಲಾನ್ ಇದೆ. ಇನ್ನೂ ತೀರ್ಮಾನವಾಗಿಲ್ಲ."

"ಬೇಡಿ ಸರ್. ನಾವಿಲ್ಲೇ ಇರ್ತೀವಿ" ಇನ್ನೊಬ್ಬ ಹೇಳಿದ.

"ಯಾಕಪ್ಪ? ನಾವೇನೂ ಊರಿಂದಾಚೆ ಕಳಿಸಬೇಕು ಅಂತಿಲ್ಲ. ಆಶ್ರಯ ಮನೆಗಳಿವೆ. ಒಂದಷ್ಟು ಕಿಟಕಿ ಬಾಗಿಲು ಹಾಕಿಸಿ ಪೈಂಟು ಹೊಡಿಸಿಬಿಟ್ರೆ ಹೊಸಾ ಮನೆಗಳ್ದಂಗೆ ಕಾಣುತ್ತೆ, ಅನುಕೂಲಗಳು ಚೆನ್ನಾಗಿವೆ ಅಲ್ಲಿ."

"ನಮಗೆ ಹೊಸ ಮನೆ ಬೇಡಿ ಸರ್."

"ಪ್ರತಿ ಮಳೆಗಾಲದಲ್ಲೂ ಮನೆಗಳಿಗೆ ನೀರು ನುಗ್ಗುತ್ತೆ ಇಲ್ಲಿ, ಅಲ್ಲಾ ಪ್ರಾಬ್ಲಮ್ಮೇ ಇಲ್ಲ."

"ಆದ್ರೂ ಪರವಾಗಿಲ್ಲ ಸರ್. ನಾವಿಲ್ಲೇ ಇರ್ತೀವಿ."

ರಾಜು ತಾಳ್ಮೆ ಮಾಯವಾಗುತ್ತಾ ಸಾಗಿತು. "ಯಾಕ್ರೀ ಬೇಡ ಅಂತೀರಾ? ನಿಮ್ಮ ಉಪಯೋಗಕ್ಕೆ ಮಾಡ್ತಿರೋದಕ್ಕೂ ಅಡ್ಡಬಾಯಿ ಹಾಕ್ತೀರಲ್ಲ?"

"ನಮಗೆ ಬೇಡ ಸರ್".

"ಬೇಡ ಬೇಡ. ಅಲ್ಲೇನೂ ದೆವ್ವ ಕುಣೀತಿದ್ಯಾ ಬೇಡ ಅನ್ನೋದಿಕ್ಕೆ?"

ಹಿಂದೆ ನಿಂತಿದ್ದವರಲ್ಲಿ ಕೆಲವರು ತಲೆಯಾಡಿಸಿದರು. ರಾಜು ಉಕ್ಕುತ್ತಿದ್ದ ಕೋಪದ ಜಾಗದಲ್ಲಿ ಈಗ ಆಶ್ಚರ್ಯ, ಗಾಬರಿ. "ಏನು?" ಹೆಚ್ಚುಕಡಿಮೆ ಕಿರುಚಿದ.

"ಅವು ಸ್ಮಶಾನದ ಮೇಲೆ ಕಟ್ಟಿದ ಮನೆಗಳಂತಲ್ಲ ಸರ್. ಅದಿಕ್ಕೆ ಇಷ್ಟು ವರ್ಷದಿಂದ ಖಾಲಿ ಇದ್ದಿದ್ದಂತೆ. ರಾತ್ರಿಯೆಲ್ಲ ಏನೇನೋ ಶಬ್ದಗಳು ಬೇರೆ ಬರುತ್ತಂತಲ್ಲ ಸರ್" ದಾಂಡಿಗ ಹೆದರಿದ ದನಿಯಲ್ಲಿ ಹೇಳಿದನಾದರೂ ಮುಖದಲ್ಲಿ ಹೆದರಿಕೆಯ ಭಾವವಿರಲಿಲ್ಲ.

"ಇದನ್ನೆಲ್ಲ ಯಾರ್ ಹಬ್ಸಿದ್ದು?"

ಒಂದಿಬ್ಬರು ದಾಂಡಿಗನ ಕಡೆ ನೋಡಿದರೆ ಮಿಕ್ಕವರು ಒಬ್ಬರ ಮುಖವನ್ನೊಬ್ಬರು ನೋಡಿ ತಲೆತಗ್ಗಿಸಿದರು.

"ಇದಕ್ಕೆ ನಾನೇನೂ ಮಾಡೋದಿಕ್ಕಾಗಲ್ಲ. ನೋಡಿ ಯಾರಿಗೆ ಹೊಸ ಮನೆಗಳಿಗೆ ಬರಲು ಮನಸ್ಸಿದೆಯೋ ಅವರು ಬನ್ನಿ. ಮಿಕ್ಕವ್ರು......ಏನಾದ್ರೂ ಮಾಡ್ಕೊಳ್ಳಿ. ಸದ್ಯಕ್ಕೆ ನಿಮಗೆ ಆ ಮನೆಗಳಿಗೆ ಬಿಟ್ಟು ಬೇರೆ ಕಡೆಗೆ ಶಿಫ್ಟ್ ಮಾಡೋದಿಕ್ಕೆ ಜಾಗವಿಲ್ಲ" ಕೋಪದಿಂದಲೇ ಹೇಳಿದ.

"ಪರವಾಗಿಲ್ಲ ಸರ್. ನಾವಿಲ್ಲೇ ಇರ್ತೀವಿ" ದಾಂಡಿಗನ ಮುಖದಲ್ಲಿದ್ದ ನಗು ವಿವಿಧಾರ್ಥಗಳನ್ನು ಸೂಚಿಸುತ್ತಿತ್ತು. ವರುಷದೊಳಗೆ ಮೂರೇ ಮೂರು ಕುಟುಂಬದವರು ಆಶ್ರಯ ಮನೆಗಳಿಗೆ ಬಂದರು.

****

ಫೋನ್ ರಿಂಗಣಿಸಿತು. ಈ ಲ್ಯಾಂಡ್ ಲೈನನ್ನೂ ಸ್ವಿಚ್ ಆಫ್ ಮಾಡೋ ಹಾಗಿದ್ರೆ ಚೆನ್ನಾಗಿತ್ತು ಎಂದುಕೊಂಡು ರಿಸೀವರ್ ತೆಗೆದುಕೊಂಡು

"ಹಲೋ?"

"ಹಲೋ ಕಮಿಷನರ್ ಸರ್ರಾ?"

"ಹೌದು ಹೇಳಿ."


"ನಾನು ಸರ್ ರವಿ. ದೊಡ್ಮೋರೀಲಿ ಜೋರು ಮಳೆಗೆ ಸ್ಲಮ್ಮೋರು ನಾಲ್ಕು ಜನ ಕೊಚ್ಚಿಕೊಂಡು ಹೋಗಿದ್ದಾರೆ ಸರ್."

'ಸಾಯ್ಲಿ ಬಿಡಿ' ನಾಲಗೆಯ ತುದಿಗೆ ಬಂದ ಮಾತನ್ನು ತಡೆಹಿಡಿದುಕೊಂಡು ಕರ್ತವ್ಯಪ್ರಜ್ಞೆಯನ್ನು ನೆನಪು ಮಾಡಿಕೊಂಡು ಕೊಡಬೇಕಾದ ಆದೇಶಗಳನ್ನೆಲ್ಲಾ ಕೊಟ್ಟು, ಹತ್ತು ನಿಮಿಷದಲ್ಲಿ ಅಲ್ಲಿರ್ತೀನಿ ಎಂದು ತಿಳಿಸಿದ.


ಎಂಎಲ್ಎ ಸಾಹೇಬ್ರು ಮತ್ತು ಹೋದ ವಾರ ಕಾರ್ಪೋರೇಟರ್ ಎಲೆಕ್ಷನ್ನಿನಲ್ಲಿ ಗೆದ್ದ ಅವರ ತಮ್ಮ ಆದಾಗಲೇ ಘಟನಾ ಸ್ಥಳಕ್ಕೆ ಬಂದಿದ್ದರು.


"ಏನ್ರೀ ರಾಜು ಅವ್ರೆ. ಮಳೆಗಾಲ ಬರೋದಿಕ್ಕೆ ಮುಂಚೆ ಮೋರಿಗಳೆಲ್ಲಾ ಕ್ಲೀನಾಗಿ ಬಿಡಬೇಕು......"

● ಡಾ. ಅಶೋಕ್.ಕೆ.ಆರ್



ರೈತ ಪರ ಹೋರಾಟದಲ್ಲಿ ಡಾ.ರೆಡ್ಡಿ...





ಮನೆ-ಮನಗಳ ವೈದ್ಯ: ರೆಡ್ಡಿ ಡಾಕ್ಟ್ರು

ದೊಡ್ಡಬಳ್ಳಾಪುರ ಪಟ್ಟಣ ಮತ್ತು ಸುತ್ತಮುತ್ತಲ ನೂರಾರು ಹಳ್ಳಿಗಳ ಲಕ್ಷಾಂತರ ಜನಸಾಮಾನ್ಯರ ಪ್ರೀತಿಯ ರೆಡ್ಡಿ ಡಾಕ್ಟ್ರು ಇದೇ ಭಾನುವಾರ ತಾರೀಕು 21.10.2012 ರಂದು ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಇದ್ದಕ್ಕಿದ್ದಂತೆ ತೀರಿಕೊಂಡಿದ್ದಾರೆ. ಈ ಆಘಾತಕಾರಿ ಸುದ್ದಿ ತಿಳಿದ ಗಂಟೆಯ ಒಳಗೆ ದೊಡ್ಡಬಳ್ಳಾಪುರದ ಅವರ ಮನೆಯ ಮುಂಭಾಗದಲ್ಲಿ ಜನಸಾಗರವೇ ನೆರೆದಿತ್ತು. ನೆರೆದಿದ್ದ ಎಲ್ಲರ ಮನದಲ್ಲಿ ದುಃಖ ಹೆಪ್ಪುಗಟ್ಟಿತ್ತು, ವಿವರಿಸಲು ಸಾಧ್ಯವಾಗದ ನೋವು. ದುಃಖ ತಾಳಲಾರದೆ ವಿಲಪಿಸುತ್ತಿದ್ದ ರೈತ ಮಹಿಳೆಯರ ಗೋಳಂತೂ ಹೇಳತೀರದಾಗಿತ್ತು. ರೆಡ್ಡಿ ಡಾಕ್ಟ್ರ ನೆರೆದಿದ್ದ ಜನರ ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಿದ್ದದ್ದು ಮಾತ್ರವಲ್ಲ; ಕಳೆದ 3-4 ದಶಕಗಳಿಂದ ಅವರೆಲ್ಲರ ಹಿತೈಷಿಯಾಗಿದ್ದರು, ಆತ್ಮೀಯ ಬಂಧುವಾಗಿದ್ದರು, ಬುದ್ಧಿ ಹೇಳುವ ಗುರುವಾಗಿದ್ದರು, ಎಲ್ಲಕ್ಕಿಂತಲೂ ಹೆಚ್ಚಾಗಿ ಆ ಜನರ ಮೇಲಿನ ಯಾವುದೇ ಥರದ ಅನ್ಯಾಯವನ್ನು ಪ್ರತಿಭಟಿಸಿ ಹೋರಾಡುವ ನಾಯಕರಾಗಿದ್ದರು. ಅಂಥಾ ಡಾಕ್ಟ್ರು ಇದ್ದಕ್ಕಿದ್ದಂತೆ ಕಣ್ಮರೆಯಾಗಿಬಿಟ್ಟರೆ?

ಜಗತ್ತಿನಲ್ಲಿ ಸಾವು ಎಂಬುದು ಅತ್ಯಂತ ಸಹಜವಾದ ಕ್ರಿಯೆ. ಸಾಮಾನ್ಯವಾಗಿ ಒಬ್ಬರು ಸತ್ತಾಗ ಅವರ ಸ್ಥಾನವನ್ನು ತುಂಬಲು ಬೇರೆ ಯಾರಾದರೂ ಇದ್ದೇ ಇರುತ್ತಾರೆ. ಆದರೆ ನಮ್ಮ ಡಾಕ್ಟರ್ ವೆಂಕಟರೆಡ್ಡಿಯವರ ಸ್ಥಾನಕ್ಕೆ? ಇಲ್ಲ, ಇಲ್ಲವೇ ಇಲ್ಲ, ಅವರ ಸ್ಥಾನವನ್ನು ಭರ್ತಿ ಮಾಡಬಹುದಾದ ಮನುಷ್ಯ ಆ ಪರಿಸರದಲ್ಲಿ ಇಲ್ಲವೇ ಇಲ್ಲ. ಡಾ.ವೆಂಕಟರೆಡ್ಡಿಯವರು ಮೂಲತಃ ಬಳ್ಳಾರಿ ಜಿಲ್ಲೆಯವರು. ಬಳ್ಳಾರಿ ತಾಲೂಕಿನ ಗುಡದೂರು ಗ್ರಾಮದ ಸಾಮಾನ್ಯ ಕೃಷಿಕ ಕುಟುಂಬದ ಹಿನ್ನಲೆ ಅವರದು. 1978ರಲ್ಲಿ ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಮುಗಿಸಿ ದೊಡ್ಡಬಳ್ಳಾಪುರದಲ್ಲಿ ಕ್ಲಿನಿಕ್ ಶುರು ಮಾಡಿದ್ದ ಗೆಳೆಯರೊಬ್ಬರ ಜೊತೆ ತಾತ್ಕಾಲಿಕವಾಗಿ ಕೆಲಸ ಮಾಡಲೆಂದು ಬಂದವರು ರೆಡ್ಡಿ ಡಾಕ್ಟರ್. ಆ ನಂತರ ರೆಡ್ಡಿಯವರನ್ನು ಅದೇನು ಸೆಳೆಯಿತೋ ಅವರು ಅಂದಿನಿಂದ ಇಂದಿನವರೆಗೂ ದೊಡ್ಡಬಳ್ಳಾಪುರದಲ್ಲೇ ನೆಲೆ ನಿಂತದ್ದು ಮಾತ್ರ ದೊಡ್ಡಬಳ್ಳಾಪುರ ಮತ್ತು ಸುತ್ತಮುತ್ತಲ ಹಳ್ಳಿಗರ ಅದೃಷ್ಟವೇ ಎನ್ನಬೇಕು.

ಹೀಗೆ ಡಾಕ್ಟರ್ ಆಗಿ ಇಲ್ಲಿ ನೆಲೆನಿಂತ ರೆಡ್ಡಿಯವರೊಳಗಿದ್ದ ಅಪ್ಪಟ ಮನುಷ್ಯ ಅನಾವರಣಗೊಳ್ಳಲು ಬಹಳ ಸಮಯ ಹಿಡಿಯಲಿಲ್ಲ. ಬಹುಬೇಗನೇ ಅವರು ಜನಪ್ರಿಯ ವೈದ್ಯರಾಗಿ ತಾಲೂಕಿನಾದ್ಯಂತ ಮನೆಮಾತಾದರು. ಯಾಕೆಂದರೆ ಅವರು ಕೇವಲ ದೇಹದ ಸಮಸ್ಯೆಗಳಿಗೆ ಮಾತ್ರ ಮದ್ದು ಕೊಡುತ್ತಿರಲಿಲ್ಲ. ಮಾನಸಿಕ ಸಮಸ್ಯೆಗಳಿಗೆ, ಕೌಟುಂಬಿಕ ಸಮಸ್ಯೆಗಳಿಗೆ, ಸಾಮಾಜಿಕ ಸಮಸ್ಯೆಗಳಿಗೆ ಎಲ್ಲವಕ್ಕೂ ಪರಿಹಾರ ನೀಡಲು ಅವರು ತುಡಿಯುತ್ತಿದ್ದ ರೀತಿ, ಸ್ವಾರ್ಥರಹಿತ ವಿಶ್ರಾಂತಿರಹಿತ ಸೇವೆ ಅನನ್ಯವಾದದ್ದು. ದಶಕಗಳ ಕಾಲ ಕೇವಲ ಐದು ರೂಪಾಯಿ ಇದ್ದ ಡಾಕ್ಟರ್ ಫೀಸ್, ತೀರಾ ಇತ್ತೀಚೆಗೆ 10 ರೂಪಾಯಿಗೇರಿ ಕೊನೆಯ ದಿನಗಳಲ್ಲಿ 20 ರೂಪಾಯಿಯಾಗಿತ್ತು. ಯಾವುದೇ ಸಂಭಾವನೆ ಪಡೆಯದೆ ಅದೆಷ್ಟು ಮಂದಿಗೆ ಚಿಕಿತ್ಸೆ ನೀಡಿದ್ದಾರೋ, ಅದೆಷ್ಟು ಮಂದಿಗೆ ಔಷಧಿ ನೀಡಿದ್ದಾರೋ ಲೆಕ್ಕವಿಲ್ಲ.

ಅವರು ತಮ್ಮ ಕ್ಲಿನಿಕ್‌ಗೆ ಇಟ್ಟಿದ್ದ ಹೆಸರೂ ನಮ್ಮ ಗಮನ ಸೆಳೆಯುತ್ತದೆ. ಸಾಮಾಜಿಕ ಕಳಕಳಿಯ ಮಿತ್ರ ಸಾರಥಿ ಎಂಬುವವರ ನೆನಪಿನಲ್ಲಿ "ಸಾರಥಿ ಪುಟ್ಟಾಸ್ಪತ್ರೆ". ಬಡಜನರಿಗೆ ಚಿಕಿತ್ಸೆ ನೀಡುವ ಉದ್ದೇಶ ಸಾರುವ "ಚೋಮನ ಔಷಧಿ ಅಂಗಡಿ". ಅಗಲಿದ ಕನ್ನಡ ಹೋರಾಟಗಾರ ಮಿತ್ರನ ನೆನಪಿನಲ್ಲಿ "ರಹಮಾನ್‌ಖಾನ್ ಸಂಶೋಧನಾ ಕೇಂದ್ರ". ಹತ್ತಿರದ ಹಳ್ಳಿಯೊಂದರಲ್ಲಿ ಅವರು ಮಾಡಿದ್ದ ತೋಟದ ಹೆಸರೂ "ತಬರನ ತೋಟ". ಈ ಮೇಲಿನ ಹೆಸರುಗಳನ್ನು ಕಂಡು ಕೆಲವರಿಗೆ ಇದು ತೋರಿಕೆಗಾಗಿ ಅಥವಾ ಪ್ರದರ್ಶನಕ್ಕಾಗಿ ಇಟ್ಟುಕೊಂಡ ಹೆಸರುಗಳು ಅನಿಸಿಬಿಡುವ ಅಪಾಯವಿದೆ. ಆದರೆ ಒಂದು ಮಾತನ್ನಂತೂ ಸ್ಪಷ್ಟವಾಗಿ ಹೇಳಬಹುದು. ಅಂಥಾ ಮಾತು ರೆಡ್ಡಿಯವರಿಗೆ ಅಪರಿಚಿತರಾಗಿದ್ದವರಿಂದ ಮಾತ್ರ ಬರಲು ಸಾಧ್ಯ. ಅವರ ನಿಸ್ಪೃಹ ಕಾಳಜಿ, ನಿರಾಡಂಬರದ ವ್ಯಕ್ತಿತ್ವದ ಬಗ್ಗೆ ಎರಡನೇ ಅಭಿಪ್ರಾಯ ಇರಲು ಸಾಧ್ಯವೇ ಇಲ್ಲ. ಇದು ಕೇವಲ ನನ್ನೊಬ್ಬನ ಅಭಿಪ್ರಾಯವಲ್ಲ, ಅವರನ್ನು ಹತ್ತಿರದಿಂದ ಬಲ್ಲ ನೂರಾರು ಜನರ ಅಭಿಪ್ರಾಯ.

ಇಡೀ ಜೀವನವನ್ನು ಅವರು ಜನರ ನಡುವೆಯೇ ಕಳೆದವರು. ಕ್ಲಿನಿಕ್ ತೆರೆಯುವ ವೇಳೆಗೆ ಅವರಾಗಲೇ ಒಂದು ಶಿಫ್ಟ್‌ನ ಡ್ಯೂಟಿ ಮುಗಿಸಿರುತ್ತಿದ್ದರು. ಮುಂಜಾನೆ ಮನೆಯಿಂದ ಹೊರಟವರು ಯಾರದೋ ತಾಯಿಯ ಮಗನಿಗೆ ಬುದ್ಧಿ ಹೇಳಲೆಂದೋ ಅಥವಾ ಯಾವುದೋ ಕುಟುಂಬದ ಜಗಳ ಬಗೆಹರಿಸಲೆಂದೋ, ಮತ್ತಾವುದೋ ಆಸ್ತಿ ವಿವಾದ ಬಗೆಹರಿಸಲೆಂದೋ ಹೋಗಿ ಪಂಚಾಯತಿ ಮಾಡಿಯೇ ಕ್ಲಿನಿಕ್‌ಗೆ ಬರುತ್ತಿದ್ದರು.

ಈ ಪುಟ್ಟಾಸ್ಪತ್ರೆಯಲ್ಲಿ ಬಿಡುವಾಗಿದ್ದ ಸಮಯದಲ್ಲೂ ಜನರ ಮನ ಮನೆಗಳ ಸಮಸ್ಯೆಗಳ ಸುತ್ತಲೇ ಮಾತುಕತೆ ಸಾಗುತ್ತಿತ್ತು. ಗಂಡ ಹೆಂಡಿರ ಸಾಂಸಾರಿಕ ಸಮಸ್ಯೆಗಳ ಬಗ್ಗೆ ಪಂಚಾಯ್ತಿ ಮಾಡಿ ಅದೆಷ್ಟು ಸಂಸಾರಗಳನ್ನು ಕೂಡಿಸಿದ್ದಾರೋ ಲೆಕ್ಕವಿಟ್ಟವರಿಲ್ಲ.

ಮತ್ತೆ ಸಂಜೆ ಕ್ಲಿನಿಕ್ ಮುಗಿಯುವ ವೇಳೆಗೆ ಡಾಕ್ಟರ್‌ರನ್ನು ಕರೆದೊಯ್ಯಲು ಮತ್ತಷ್ಟು ಮಂದಿ ನಿಂತಿರುತ್ತಿದ್ದರು. ಯಾವ ಯಾವ ಮನೆಯ ಮನದ ಸಮಸ್ಯೆಗಳನ್ನು ಬಿಡಿಸುತ್ತಿದ್ದರೋ?



ಹೀಗೆ ತಮ್ಮ ಕಣ್ಣೆದುರಿಗೆ ಜೀವಿಸುತ್ತಿದ್ದ ಜನರ ನಾನಾ ಸಮಸ್ಯೆಗಳಿಗೆ ತನ್ನದೇ ರೀತಿಯಲ್ಲಿ ಸ್ಪಂದಿಸುತ್ತಿದ್ದ ರೆಡ್ಡಿಯವರು, ಈ ಜನರ ಸಮಸ್ಯೆಗಳಿಗೆ ಸಾಮಾಜಿಕ, ರಾಜಕೀಯ ಆಯಾಮವಿರುವುದನ್ನು ಚೆನ್ನಾಗಿ ಬಲ್ಲವರಾಗಿದ್ದರು. ಹಾಗಾಗಿಯೇ ತಮ್ಮ ಜೀವನದುದ್ದಕ್ಕೂ ಹಲವಾರು ಜನಪರ ಚಳವಳಿಗಳಲ್ಲಿ, ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ನನಗೆ ತಿಳಿದ ಮಟ್ಟಿಗೆ ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ರಹಮಾನ್‌ಖಾನ್‌ರಂಥಾ ಚಳವಳಿಗಾರರ ಜೊತೆ ಆತ್ಮೀಯವಾಗಿ ಒಡನಾಡಿದವರು.

ದೊಡ್ಡಬಳ್ಳಾಪುರದ ಕನ್ನಡ ಜಾಗೃತ ಪರಿಷತ್ ಹಮ್ಮಿಕೊಂಡ ಎಲ್ಲಾ ಕಾರ್ಯಕ್ರಮಗಳಲ್ಲೂ ರೆಡ್ಡಿಯವರ ಶ್ರಮ ಎದ್ದು ಕಾಣುತ್ತಿತ್ತು. ಹಾಗೆ ಕೆಲವು ಸಮಾನ ಮನಸ್ಕರ ಜೊತೆಗೂಡಿ ದೊಡ್ಡಬಳ್ಳಾಪುರದಲ್ಲಿ ಒಂದು ವಿಶಿಷ್ಟ ರಾಜಕೀಯ ಪ್ರಯೋಗ ಮಾಡಿದರು. ಕನ್ನಡ ಪಕ್ಷ ಎಂಬ ರಾಜಕೀಯ ಪಕ್ಷವೊಂದನ್ನು ಸ್ಥಾಪಿಸಿ ಚುನಾವಣೆಗಳಲ್ಲಿ ಸ್ಪರ್ಧಿಸಿದರು. ಅಂದಿನಿಂದ ಇಂದಿನವರೆಗೂ ದೊಡ್ಡಬಳ್ಳಾಪುರ ಮುನಿಸಿಪಾಲಿಟಿಯಲ್ಲಿ ಕನ್ನಡ ಪಕ್ಷದಿಂದ ಆರಿಸಿಬಂದ ಕೌನ್ಸಿಲರ್‌ಗಳ ಹಾಜರಿಯಿದ್ದೇ ಇದೆ.

ದೊಡ್ಡಬಳ್ಳಾಪುರದಲ್ಲಿ ಪೌರಕಾರ್ಮಿಕರ ಸಮಸ್ಯೆಯೆಂದರೂ, ಹಮಾಲಿಗಳ ಸಮಸ್ಯೆಯೆಂದರೂ ಅವರಿಗೆಲ್ಲಾ ನಾಯಕತ್ವ ವಹಿಸುತ್ತಿದ್ದವರು ಇದೇ ಡಾಕ್ಟ್ರು. ಪಟ್ಟಣದಲ್ಲಿ ಹೆಚ್ಚಾಗಿ ವಾಸಿಸುವ ನೇಕಾರರ ಹೋರಾಟಕ್ಕೂ ಇವರದೇ ನೇತೃತ್ವ. ಹೀಗಾಗಿ ಪಟ್ಟಭದ್ರರ ವಿರುದ್ಧ ನಿರಂತರ ಸೆಣಸಾಟ. ದೊಡ್ಡಬಳ್ಳಾಪುರದ ಪ್ರಮುಖ ರಾಜಕಾರಣಿಗಳಿಗೂ ಇವರಿಗೂ ಸಂಬಂಧ ಎಂದೂ ಕುದುರುತ್ತಲೇ ಇರಲಿಲ್ಲ, ಯಾಕೆಂದರೆ ಇವರದು ಮೌಲ್ಯಬದ್ಧ ಜೀವನ, ಮೌಲ್ಯಬದ್ಧ ರಾಜಕಾರಣ.

ದಲಿತ ಚಳವಳಿ, ರೈತ ಚಳವಳಿಗಳಲ್ಲಿ ನಿರಂತರವಾಗಿ ದುಡಿದಿದ್ದ ಡಾಕ್ಟ್ರು 1999ರ ನಂತರ ಅಧಿಕೃತವಾಗಿ ಹಸಿರುಶಾಲು ಹೆಗಲಿಗೇರಿಸಿ ಕರ್ನಾಟಕ ರಾಜ್ಯ ರೈತಸಂಘದಲ್ಲಿ ಅತ್ಯಂತ ಸಕ್ರಿಯರಾದರು. ಯಾಕೆಂದರೆ ಅವರು ವೈದ್ಯ ವೃತ್ತಿಯನ್ನು ಕೈಗೊಂಡರೂ ಕೂಡ ಅವರೊಳಗಿದ್ದ ರೈತನ ಮಗ ಸದಾ ಜಾಗೃತವಾಗಿಯೇ ಇದ್ದ. ಅವರ ಕೊನೆಯವರೆಗೂ ಅವರ ಹೆಗಲ ಮೇಲಿದ್ದ ಹಸಿರುಶಾಲು ಅದಕ್ಕೆ ಸಾಕ್ಷಿಯಾಗಿತ್ತು. ನೀರಾವರಿ ಸಮಸ್ಯೆ ಮಾರುಕಟ್ಟೆ ಸಮಸ್ಯೆ ಕಬ್ಬುಬೆಳೆಗಾರರ ಸಮಸ್ಯೆ ಬ್ಯಾಂಕ್ ಸಾಲದ ಸಮಸ್ಯೆ ಮುಂತಾದ ನಾನಾ ಸಮಸ್ಯೆಗಳ ವಿರುದ್ಧ ತಾಲೂಕಿನಲ್ಲಿ ಚಳವಳಿಯನ್ನು ಸಂಘಟಿಸಿದ ಮೊದಲಿಗರೆಂದರೆ ನಮ್ಮ ರೆಡ್ಡಿ ಡಾಕ್ಟರೆ. ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ರೈತಸಂಘಟನೆಯ ಜವಾಬ್ದಾರಿ ಹೊತ್ತು ಸುತ್ತಾಡಿದರು. ಈ ಹೋರಾಟದ ಪ್ರಕ್ರಿಯೆಯಲ್ಲಿ ರಾಜ್ಯ ರೈತ ಸಂಘದ ಉಪಾಧ್ಯಕ್ಷರೂ ಆದರು.

ಕೆಲವು ನಾಯಕರ ವೈಯುಕ್ತಿಕ ಕಾರಣಗಳಿಗಾಗಿ ರೈತ ಸಂಘ ಇಬ್ಭಾಗವಾಗುವುದನ್ನು ಕಂಡು ತೀವ್ರ ವೇದನೆಗೊಳಗಾಗಿ ರೈತ ಸಂಘದ ಒಗ್ಗಟ್ಟನ್ನು ಉಳಿಸಲು ಏನಾದರೂ ಮಾಡಬೇಕೆಂದು ಇನ್ನಿಲ್ಲದ ಪ್ರಯತ್ನ ಮಾಡಿದರು. ಈ ವಿಷಯಕ್ಕಾಗಿ ಅವರು ಸಂಪರ್ಕಿಸದ ನಾಯಕರಿಲ್ಲ, ಮಾಡದ ಪ್ರಯತ್ನಗಳಿಲ್ಲ, ಇಂಥಾ ಅವಿರತ ಪ್ರಯತ್ನದ ಪರಿಣಾಮವಾಗಿ ರೈತ ಸಂಘದ ಐಕ್ಯತೆ ಕಾಪಾಡಲೆಂದು ಒಂದು ಕೋರ್ ಕಮಿಟಿ ರಚನೆಯಾಯಿತು. ರೆಡ್ಡಿಯವರನ್ನೇ ಅದರ ಅಧ್ಯಕ್ಷರೆಂದು ಸರ್ವಾನುಮತದ ತೀರ್ಮಾನವೂ ಆಯಿತು. ಆದರೆ ಪರಿಣಾಮ ಮಾತ್ರ ಶೂನ್ಯ.

ತಮ್ಮತಮ್ಮ ಮೂಗಿನ ನೇರಕ್ಕೆ ವಾದಗಳನ್ನು ಹೂಡುತ್ತಿದ್ದ ಕೆಲವು ನಾಯಕರು ದಿನೇದಿನೇ ಹೊಸಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಲೇ ಇದ್ದರು. ಅಂತಿಮವಾಗಿ ಸಂಘ ಹೋಳಾದಾಗ



ಡಾ.ರೆಡ್ಡಿ ಮೃತರಾದಾಗ ನೆರೆದ ಜನ..

ರೆಡ್ಡಿಯವರು ಅನಿವಾರ್ಯವಾಗಿ ಯಾವುದೋ ಒಂದು ಬಣದಲ್ಲಿದ್ದುಕೊಂಡು ಚಳವಳಿ ಮುನ್ನಡೆಸಿದರೂ ಅವರಿಗೆ ಈ ಕೀಳುಮಟ್ಟದ ಗುಂಪು ರಾಜಕೀಯ ಎಂದಿಗೂ ಅಂಟಿಕೊಳ್ಳಲೇ ಇಲ್ಲ. ಯಾಕೆಂದರೆ ರೈತರ ಪರವಾದ, ರೈತ ಚಳವಳಿ ಪರವಾದ ಅವರ ಕಾಳಜಿ ಅತ್ಯಂತ ನಿಸ್ವಾರ್ಥದಿಂದ ಕೂಡಿದ್ದು. ತಂತಮ್ಮ ಬೇಳೆ ಬೇಯಿಸಿಕೊಳ್ಳಲು ಹೆಣಗುತ್ತಿರುವ ನಾಯಕರಂತೆ ಎಂದಿಗೂ ಆಗಿರಲಿಲ್ಲ.

ಇಷ್ಟೆಲ್ಲಾ ಒತ್ತಡಗಳ ನಡುವೆ ಸಂಘದ ಕಾರ್ಯಕರ್ತರಿಗೆ ರಾಜಕೀಯ ತರಬೇತಿ ನೀಡಬೇಕೆಂಬ ಅವರ ತುಡಿತ ಬೇರೊಬ್ಬ ನಾಯಕರಲ್ಲಿ ಕಾಣಲು ಸಾಧ್ಯವೇ ಇಲ್ಲ. ಹೀಗಾಗಿ ಆಗಿಂದಾಗ್ಗೆ ಯಾವುದಾದರೊಂದು ವಿಷಯದ ಮೇಲೆ ಚರ್ಚೆಗಳನ್ನು ಏರ್ಪಡಿಸುತ್ತಿದ್ದರು. ಹೀಗಿದ್ದಾಗ ಇದ್ದಕ್ಕಿದ್ದಂತೆ ಫೋನ್ ಮಾಡಿ "ಹಲೋ ರಂಗಾ, ಎಲ್ಲಿದ್ದೀಯೋ ಕಾರ್ಯಕರ್ತರ ಸಭೆಯಲ್ಲಿ ಮಾತಾಡಬೇಕು, ಮುಕ್ತ ಆರ್ಥಿ[ಕ] ನೀತಿಗಳ ಬಗ್ಗೆ ಯಾವುದಾದರೂ ಪುಸ್ತಕ ತಂದು ಕೊಡೋ" ಎಂದು ವಿನಮ್ರವಾಗಿಯೇ ಆದೇಶಿಸುತ್ತಿದ್ದರು. ಹೀಗೆ ತಮ[ಗೆ] ತಿಳಿಯದ ವಿಷಯಗಳನ್ನು ಅರಿಯುವ ಹಸಿವೆಯನ[್ನು] ಇಂಗಿಸಿಕೊಳ್ಳಲು ತಮಗೆ ಪರಿಚಿತರಾಗಿರು[ವ] ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳಿಗೋ, ಚಳವಳಿ ನಿರ[ತ] ಕಾರ್ಯಕರ್ತರಿಗೋ ಫೋನಾಯಿಸಿ ತಿಳಿಯುವ ಪ್ರಯ[ತ್ನ] ಮಾಡುವುದು ಅವರ ಒಂದು ದೊಡ್ಡ ಗುಣ.

ಅವರಿಗೆ ಯಾವುದೋ ಒಂದು ಸೀಮಿತ ವಿಷಯ[ದ] ಸುತ್ತ ಕೆಲಸ ಮಾಡಬೇಕೆಂಬ ದೃಷ್ಟಿಕೋನವಿರಲಿ[ಲ್ಲ] ಮನುಷ್ಯರನ್ನು ಬಾಧಿಸುವ ಪ್ರತಿಯೊಂದು ಸಮಸ್ಯೆಯ ಬಗ್ಗೆಯೂ ಅವರಿಗೆ ಸಮಾನ ಕಾಳಜಿಗಳಿದ್ದವು. ಇತ್ತೀಚಿ[ನ] ದಿನಗಳಲ್ಲಿ ಕೆಲವು ಎಡಪಂಥೀಯ ಸಂಘಟನೆಗಳ ಜೊತೆ ಒಡನಾಟ ಹೆಚ್ಚಿಸಿಕೊಂಡಿದ್ದರು. ಸದ್ಯದ ರೈತ ಸಂಘ[ದ] ನಾಯಕತ್ವ ನೈತಿಕವಾಗಿ ಅಧಃಪತನಗೊಂಡಿದ್ದನ್ನು ಕಂಡಿ[ದ್ದ] ಅವರಿಗೆ ಇದು ಹೊಸದಾರಿಗಳನ್ನು ಹುಡುಕುವ ಪ್ರಯತ್ನ[ದ] ಭಾಗವಾಗಿತ್ತು.

ಅವರಲ್ಲಿ ಒಬ್ಬ ಅಪ್ಪಟ ಮನುಷ್ಯ ಮತ್ತು ಹೋರಾಟಗಾ[ರ] ಸದಾ ಉಸಿರಾಡುತ್ತಲೇ ಇದ್ದ. ಗುದ್ದಾಡಲ[ು] ಸಾಧ್ಯವಿಲ್ಲವೆನಿಸಿದರೆ ತಾವು ಕೆಲಸ ಮಾಡುವ ಸಂಸ್ಥೆಯನ[್ನು] ಬಿಟ್ಟು ಬೇರೊಂದು ಸಂಸ್ಥೆಯಲ್ಲಿ ತಮ್ಮ ನೆ[ಲೆ] ಹುಡುಕುತ್ತಿದ್ದರು. ತಮ್ಮ ಜೀವನದುದ್ದಕ್ಕೂ ಪ್ರಾಮಾಣಿಕ[ತೆ] ಮತ್ತು ಭ್ರಷ್ಟತೆಯಿಲ್ಲದ ಪರಿಸರಕ್ಕಾಗಿ ಹಾತೊರೆದರು. ತಮ[್ಮ] ಚಳವಳಿಯ ಪಯಣದಲ್ಲಿ ಹಲವು ಏರಿಳಿತವನ್ನು ಕಂ[ಡರೂ] ಅವರಲ್ಲಿ ಇದ್ದ ಹೋರಾಟಗಾರ, ಜನಪರ ವೈದ್ಯ ಮಾ[ತ್ರ] ಯಾವತ್ತೂ ಸೋತಿರಲೇ ಇಲ್ಲ.

ಕಿರಂ ಅವರ ನಂತರ ನಾನು ಕಳೆದುಕೊಂಡ ಬಹ[ಳ] ದೊಡ್ಡ ವ್ಯಕ್ತಿತ್ವ ಡಾಕ್ಟರ್ ಅವರದು. ತಾವು ಕೆಲಸ ಮಾಡುತ್ತಿ[ದ್ದ] ಪ್ರದೇಶದಲ್ಲಿ ಕಿರಂ ಅವರು ಜಾತಿ ವರ್ಗಗಳನ್ನು ಮೀ[ರಿ] ಜನರ ಜೊತೆ ಬೆರೆಯುತ್ತಿದ್ದ ರೀತಿ; ಮತ್ತು ತಮ್ಮ ಹತ್ತಿರ ಬರುತ್ತಿದ್ದ ಜನರನ್ನು ಹೃದಯ ಮುಟ್ಟಿ ಮಾತನಾಡಿಸುತ್ತಿ[ದ್ದ] ಬಗೆ ಡಾಕ್ಟರರಲ್ಲಿಯೂ ಇತ್ತು. ಆದರೆ ಇವರು ತಮ[್ಮ] ವೃತ್ತಿಯನ್ನು ಮೀರಿ ನಂಟು ಬೆಳೆಸುತ್ತಿದ್ದರು[.] ನಂತರ ಅವರ ಮನೆಯ ಸದಸ್ಯರೆ ಆಗಿರುತ್ತಿದ್ದರು. ಅವರು ಜನರ ಜೊ[ತೆ] ಏರ್ಪಡಿಸಿಕೊಳ್ಳುತ್ತಿದ್ದ ನಂಟಿಗೆ ವಯಸ್ಸು ಜಾ[ತಿ] ವರ್ಗ ಹೆಣ್ಣು ಗಂಡು ಯಾವ ಅಂತರವೂ ಇರಲಿಲ್ಲ. ಯಾರಲ್ಲಿ ಪ್ರಾಮಾಣಿಕವಾ[ಗಿ] ತುಡಿಯುವ ಗುಣವಿತ್ತೊ ಅವರನ[್ನು] ಮನಮುಟ್ಟಿ ಪ್ರೀತಿಸುವುದು ರೆಡ್ಡಿ ಡಾಕ್ಟರ್[ರ] ಹುಟ್ಟುಗುಣ. ಹಾಗಂತ ಪ್ರಾಮಾಣಿಕರಲ್ಲದವ[ರ] ಜೊತೆ ಅಷ್ಟೇನು ಕಟುವಾಗಿ ವರ್ತಿಸುತ್ತಿರಲಿಲ್ಲ[.] ತಮ್ಮ ವೃತ್ತಿ ಧರ್ಮ ಬೋಧಿಸಿದಂತೆ ಎಲ್ಲರನ್ನೂ ಮನುಷ್ಯರೆಂದೇ ಭಾವಿಸಿ ಅವರ ಜೊತೆಗೂ ಬೆರೆಯುತ್ತಿದ್ದರು. ಆದರೆ ಕ್ರಮೇಣ ಅಂಥವರನ[್ನು] ಹಿಂದಕ್ಕೆ ಸರಿಸುತ್ತ ಚಳವಳಿಯ ದಾರಿಯಲ[್ಲಿ] ಮುಂದೆ ನಡೆಯುವವರ ಜೊತೆಗೆ ಸಜೀವ ಸಂಬಂಧಗಳನ[್ನು] ಏರ್ಪಡಿಸಿಕೊಳ್ಳುವ ಕಲೆ ಅವರಿಗೆ ಚೆನ್ನಾಗಿ ತಿಳಿದಿತ್ತು.

ಹೀಗೆ ವೃತ್ತಿಪರ ವೈದ್ಯರಾಗಿ, ಸಾಮಾಜಿ[ಕ] ಹೋರಾಟಗಾರರಾಗಿ ದುಡಿದ ವ್ಯಕ್ತಿಗಳು ಕರ್ನಾಟಕದ ಇತಿಹಾಸದಲ್ಲಿ ಅಪರೂಪ. ಈ ನಾಡು ಒಬ್ಬ ಅಪ್ರತಿಮ ಹೋರಾಟಗಾರನನ್ನು ಕಳೆದುಕೊಂಡಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಸದಾ ಮಾನವೀಯ ಗುಣಗಳನ್ನು ಸ್ಫುರಿಸುತ್ತಿ[ದ್ದ] ಒಬ್ಬ ನಿಜವಾದ ಮಾನವ ಮೂರ್ತಿಯನ್ನು ಕಳೆದುಕೊಂಡಿದೆ[.] ಡಾಕ್ಟರ್ ಅವರ ನಿರ್ಗಮನದಿಂದ ಅಸಂಖ್ಯ ಚೋಮ[ನ] ಮನೆಯ ಬೆಳಕು ಮಸುಕಾಗಿದೆ. ಚೋಮನ ಮನೆಯನ್ನು ಬೆಳಗಿಸಬೇಕೆಂಬ ಅವರ ಕನಸು, ಅತೀವ ತುಡಿತ ನಮ[್ಮ] ನೆನಪಾಗಿ ಉಳಿದಿದೆ.

● ರಂಗನಾಥ ಕಂಟನಕುಂಟೆ

ಮಾಸ್ಟರ್ ಹಿರಣ್ಣಯ್ಯನಿಗೆ ಮೈಂಡ್ ಸರಿಲ್ಲವಂತೆ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಕುಮಾರಸ್ವಾಮಿಗೆ ಉಸಾರಿಲ್ಲವಂತೆ" ಎಂದುಕೊಂಡು ಬಂದ.

"ಯಾರ್ನ ಅಂಗಂದೋರು?" ಎಂದಳು ಜುಮ್ಮಿ.

"ಅವುನೆ ಅಂಗಂದವುನೆ ಕಣೆ. ಅದೂ ಸಾರ್ವಜನಿಕ ... ಹೇಳಿಬುಟ್ಟವುನೆ ನನಿಗೆ ಆರ್ಟ್ ಪ್ರಾಬ್ಲಮ್ಮು ಅಂತ."

"ಮತ್ತೆ ಚನ್ನಾಗೇ ಅವುನಲ್ಲಾ" ಎಂದ ಸೀರ.

"ಚನ್ನಾಗೆ ಅಂದ್ರೆ ಯಂಗೊ ಸೀರಮಾವ. ಆರ್ಟ್ ... ವರಗಡೆ ಕಂಡತೆ? ಅದೇನಿದ್ರು ವಳಗಾಯಲ ..."

"ಅದೂ ಇಬ್ರು ಹೆಡತಿರ ಕಟಿಗಂಡ ನೋಡು, ... ಯದೆನವ್ನ ಬಂದಿರದು. ಇಲ್ಲ ಅಂದ್ರೆ ... ತಕಲ್ಲಿದ್ದಂಗಿರೋನು."

"ಇಬ್ಬುರು ಹೆಡತಿರ ಮದಿವಾದ್ರೆ ಯದೆನವ್ವ... ಅಂತ ಯಾರೊ ನಿನಿಗೇಳಿದೋರು. ಇವುನಿಗೆ ... ಪಾಸ್ ಸರ್ಜರಿ ಆಗ್ಯದೆ ಕಣೊ."

"ಅಂಗಂದ್ರೇನ್ನ?" ಎಂದಳು ಜುಮ್ಮಿ.

"ಅಂಗಂದ್ರೆ ಯಂಗೇಳನವ್ವ. ಈಗ ಮನುಸುನ ... ಯು ಅದೆ ನೋಡು ಅದರ್ವಳಿಕೆ ರಗತ ಹೋಗಿ ... ಗೆ ಬರಬೇಕು. ಅಲ್ಲಿ ದಾರಿ ಸರಿಲ್ಲ ಅಂದ್ರೆ ... ಡೆಯಿಂದ ಬೈಪಾಸ್ ಮಾಡ್ತರೆ. ಅದ್ಯಂಗೆ ಅಂದ್ರೇ ... ಊರೊಳ್ಳಗಾಸಿ ಹೋಗಬೇಕಾದಾಗ, ದಾರಿ ... ಊರೊರಗೆ ಒಂದು ರೋಡು ಮಾಡ್ತರೆ ... ದು, ಅಂತೆದಕೆ ಬೈಪಾಸ್ ಅಂತರೆ. ಅದ ಈ ... ಮಾರಸ್ವಾಮಿ ಮಾಡಿಸಿಗಂಡವುನೆ. ಅದ್ನೆ ನನಿಗೆ ಅರಟು ... ಅಂತ ಹೇಳಿರದು."

"ಅದ್ಯಾಕಂಗೆ ಬಯಿರಂಗವಾಗಿ ಕಾಯಿಲೆ ಹೇಳಿಕಂಡಾ" ... ದ ಕಾಳಮಾವ.

"ನಮ್ಮ ಜನ ಕಷ್ಟ ಹೇಳಿಕಂಡ್ರೆ ಮರುಗುತರೆ ಅಂತ ... ಕಂದವುನೆ ಕಣಮಾವ. ನನಿಗೆ ಕಾಯಲ ಅಂದ್ರೆ ಪಾಪ ... ದಿನಿದ್ದನೊ ಏನೊ ಓಟಾಕನ ಅತ್ತಗೆ ಅಂತರೆ ... ಅಂಗೇಳ್ಳವುನೆ. ಮದ್ನೆ ಅಪ್ಪ ಮಕ್ಕಳು ಓಟು ಕೇಳದ್ರಲ್ಲಿ ... ನಾಟಗ ಮಾಡ್ತರೆ."


"ಅದೇನೊ ನಿಜಕಂಡ್ರ. ದ್ಯಾವೇಗೌಡಾಗ್ನೆ ಅಳಕ್ಕೆ ... ಮಾಡಿದ್ದನಂತೆ" ಎಂದ ಸೀರ.

"ಅವುನ್ಯಾಕತ್ತವುನೆ ಗೊತ್ತೇನೊ? ಯಮರ್ಜೆನ್ಸಿಲಿ ಅವುನ್ನ ... ಗಾಕಿದ್ರು. ಆಗ ಅವುರಪ್ಪ ಸತ್ತೊದನಂತೆ. ಅದ ... ಗಂಡು ಈಗತ್ತವುನೆ."

"ನೋಡು ಮತ್ತೆ ಅಪ್ಪ ಸತ್ತ ಏಟು ದಿನಕತ್ತವುನೆ. ... ಇದ್ದಿ" ಎಂದಳು ಜುಮ್ಮಿ.

"ನಾನು ನಮ್ಮಪ್ಪ ಸತ್ತಾಗ ಬೇಕಾದೋಟು ಅತ್ತೆ ಕಣೆ. ನಾವ್ಯಂಥೋರೂ ಸತ್ತಾಗ ಅಳತಿವಿ. ತಿಥಿ ದಿನ ಅಳತಿವಿ. ಅದು ಬುಟ್ರೆ ಇನ್ಯಾವಾಗ್ಲು ಅಳದಿಲ್ಲ, ಅಂಗೇನಾರ ಅತ್ರೆ ನಾವು ಸರಿಲ್ಲ ಅಂತ. ದ್ಯಾವೇಗೌಡನಿಗೆ ಈಗ ಯಂಬತ್ತು ವರ್ಷ. ಈಗ ನ್ಯನಿಸಿಗಂಡು ಅಳತನೆ ಅಂದ್ರೆ ಅದು ನಿಜವಾಗ್ಲು ದುಃಖ ಅಲ್ಲ, ಏನೋ ದೋಖ."

"ಆಮಿಕ್ಕಂಡು ಕುತಗಳ್ಳ ಕಂಡಿದ್ದಿನಿ. ನನಿಗೂ ಒಂದೊಂದು ಸತಿ ನಮ್ಮಪ್ಪ ಗೆಪ್ನ ಬತ್ತನೆ. ನನಿಗೂ ಒಂಥರಾಗ್ಯದೆ. ಅದ್ನೆ ದೊಕ ಅಂತೀಯೇನ್ನ?" ಎಂದ ಕಾಳಮಾವ.



"ಸರಿ ಕಣಮಾವ, ಅಪ್ಪದೀರ ಕಾಲ ಮುಗುದು ನೀವೂ ಕಾಲವಾಗೊ ಟೈಮಲ್ಲಿ ನ್ಯನಿಸಿಗಂಡು ಅಳುತಿರಿ ಅಂದ್ರೆ ಏನೇಳನಾ. ಅದೂ ಸಾರ್ವಜನಿಕವಾಗಿ."

"ಏನೊ ಬುಡ್ರೊ ಹೋಗಲತ್ತಗೆ. ಪಾಪ ಅಪ್ಪ ಸತ್ತಾಗ ಜೈಲಲ್ಲಿದ್ದು ಕಡೆ ಸತಿ ಮುಖ ನೋಡಕ್ಯಾಗಲಿಲ್ಲ ಅಂತ ಅಳುಬತ್ತದೇನೊ. ಅಳ್ಳಿ ಬುಡಿ" ಎಂದ ಸೀರ ಮಾವ.

"ಸುಳ್ಳೇಳಿಕಂಡು ಅಳುಬಾರ್ದು ಕಣೊ ಮಾವ."

"ಸುಳ್ಳೇನೇಳಿದನಪ್ಪ?"

"ದ್ಯಾವೇಗೌಡ ಜೈಲಲ್ಲಿದ್ದಾಗ ಮಂತ್ರಿ ಮಾಡ್ತಿನಿ ಬತ್ತಿಯಾ ಅಂತ ದೇವರಾಜ ಅರಸ್ ಕರದನಂತೆ. ಇವುನು ಹೋಗಲಿಲವಂತೆ. ನಿಜವಾಗ್ಲು ನ್ಯಡದದ್ದೇನು ಅಂದ್ರೆ ಇಬ್ರಾಹಿಂನೂ ಹೆಚ್‌ಟಿ ಕಿಷ್ಣಪ್ಪಾರೂ ಹೋಗಿ ಕಾಂಗ್ರೆಸ್ಸಿಗೆ ಬತ್ತಿರಾ ಅಂದರಂತೆ. ಹಾಸನದಲ್ಲಿ ದೊಡ್ಡ ಸಭೆ ಏರ್ಪಾಟು ಮಾಡಿ ಬತ್ತಿನಿ ಅಂತ ಹೇಳಿ ಕೈ ಕೊಟ್ಟನಂತೆ. ಇದಕ್ಕೆಲ್ಲಾ ಸಾಕ್ಷಿ ಇರುವಾಗ ಏನೇನೊ ಹೇಳಿಕಂಡು ಅಳುಬಾರ್ದು."

"ಯಾರ್ರೊ ಉಗ್ರಿ ಅಳೋರು?" ಎಂದು ವಾಟಿಸ್ನೆ ಬಂದ.

"ದ್ಯಾವೇಗೌಡ್ರು ಕಣೊ."

"ಅವುರು ನಗಾಡಿದ್ದು ಯಾವಾಗ್ಲೊ, ಇನ್ನೊಬ್ಬ ಮಾಸ್ಟರ್ ಹಿರಣ್ಣಯ್ಯ ಅಂತ ಅಬ್ಬವ್ರನೆ. ಮಾತಾಡಿ ಮಾತಾಡಿ ಬಾಯಿನೆ ಅಗಲ ಮಾಡಿಕಂಡವುನೆ. ಅವುನು ಏನು ಮಾಡನಪ್ಪಾ ಅಂದ್ರೆ ಮಾತಾಡ್ತ ಸ್ಟೈಜ್ ಮ್ಯಾಲೆ ಅವರಪ್ಪನ್ನ ನ್ಯನಿಸಿಗಂಡು ಅಳಕ್ಕೆ ಸುರುಮಾಡೋನು. ಬಳ್ಳಾರಿ ಲಲಿತ ಅನ್ನೋಳು ನಮ್ಮಪ್ಪನ್ನ ಹಾಳು ಮಾಡಿದ್ಲು ಅಂತ ಹೇಳೋನು. ನಾಟಕ ಮಾಡದು ಬುಟ್ಟು ಏನೇನೋ ಹೇಳೊನು. ನ್ಯನ್ನೆ ದಿನ ಯಂತ ಮಾತಂದ ಗೊತ್ತೇನೊ ಉಗ್ರಿ? ನಮ್ಮ ಜುಮ್ಮಿ ಇದ್ದಿದ್ರೆ ಮಕ್ಕುಗಿತಿದ್ಲು ಕಣೊ."

"ಏನಂದುನ್ನ?"

"ಮನ್ನೆ ದಿನ ಜಯರಾಮನ ಮನೆಲಿ ಟಿ.ವಿ. ನೈನ್ ನೋಡ್ತಯಿದ್ದೆ ಕಣೊ. ಮಾಸ್ಟರ್ ಹಿರಣ್ಣಯ್ಯ ಹಂದಿ ತರ ಕುಂತಗಂಡು ಏನೇನೊ ಹೇಳತಿದ್ದ. ಬ್ಯಾರೆಯೋರು ಪಾರ್ಟಿ ಮಾಡಿದ್ರೆ ದುಡ್ಡು ಕೊಡಬೇಕಾಯ್ತದೆ ಅಂತ ಅವುನ ಮಗನಿಗೆ ಮೇಕಪ್ ಮಾಡಿ ತಂದು ನಿಲ್ಲಿಸಿಗಂಡಿದ್ದ."

"ಅಂಗರವುನ ಮಗನೂ ತಯಾರಾಗಿದ್ದನೆ?"

"ಏನು ಮಾಡಿದ್ರೂ ತಯಾರು ಮಾಡಕ್ಯಾಗಲಿಲ್ಲ ದೊಡಪ್ಪ, ಆದ್ರು ಇವುನು ಬುಡ್ತಯಿಲ್ಲ, ಅದಿರ್ಲಿ ಸೋನಿಯಾಗಾಂಧಿ ಬಳ್ಳಾರಿಗೆ ಬಂದಿದ್ದಾಗ ಭಾಸಣ ಮಾಡ್ತ ದೇಶಕ್ಯಾಗಿ ನನ್ನ ಗಂಡನ್ನ ಕಳಕಂಡೆ, ದಯವಿಟ್ಟು ನೀವೇ ನನ್ನ ಕೈ ಹಿಡಿರಿ ಅಂದ್ಲಂತೆ. ಅದ್ಕೆ ಇವುನೇಳ್ತನೆ? ಒಬ್ಬ ಕೈಹಿಡಿದು ಸುದರಾಯಿಸಿಕೊ ಬೇಕು. ಇನ್ನು ಅಷ್ಟೊ ಜನ ಕೈ ಹಿಡಿದ್ರೆ ಅವುಳ ಕೈ ಏನಾಗಬೇಕು ಅಂತನಲ್ಲಕ್ಕ?"

"ಈ ಕಡಿಕೆಲ್ಲಾರ ಬಂದಾಗೇಳ್ಳ, ಹೋಗಿ ಬರ್ಲಿ ತಗಂಡು ಬಾರುಸ್ತಿನಿ."

"ಇನ್ನೂ ಒಂದು ಮಾತಂದ ಕಣಕ್ಕ, ಪ್ರಿಯಾಂಕ ಗಾಂಧಿ ಬಂದಿದ್ದಂತೆ. ಆಗ ಭಾಸಣ ಮಾಡ್ತ ನಮ್ಮಮ್ಮನ್ನ ತಂದು ನಿಮ್ಮ ಕೈಗೆ ಒಪ್ಪುಸ್ತಿನಿ, ನೀವು ಏನಾರ ಮಾಡಿಕಳಿ ಅಂದಳಂತೆ. ಹಿಂಗೂ ಹಾಸ್ಯ ಮಾಡ್ತರಾ?"

"ಆ ಮುಂಡೆ ಮಗನಿಗೆ ಹೆಡತಿ ಮಗಳಿಲ್ಲವೆ?"

"ಇದ್ರೂ ಅವುರನೂ ಆಡಿಕಳೊ ಅಂತ ಹೇಸ್ಸಿಗೆ ಮನ್ಸ ಅವುನು. ನಾನು ಸುಮಾರು ಅವುನ ನಾಟಕ ನೋಡಿದ್ದಿನಿ. ಅದ್ಯಾಂಗೊ ಮಾಡಿ ವಾಜಪೇಯಿ ಹೊಗಳೋನು. ಶೂದ್ರ ರಾಜಕಾರಣಿಗಳ ತೆಗಳೋನು. ನಾವು ಕುರಿ ನುಗ್ಗಿದಂಗೆ ನುಗ್ಗಿ ನಾಟಕ ನೋಡಿದ್ದು ನೋಡಿದ್ದೆಯಾ. ಅದರಾದಾಯದಲ್ಲಿ ಅವುನೇನು ಮಾಡಿದ ಗೊತ್ತೆ? ಬ್ರಾಹ್ಮಣರ ಸಂಘ ಮಾಡಿದ."

"ಅದೇನಾರ ಮಾಡಿಕಂಡು ಹಾಳಾಗೋಗ್ಲಿ, ಸೋನಿಯಾ ಗಾಂಧಿಯ ಅಷ್ಟು ಕೀಳಾಗಿ ಆಡಿಕತ್ತನೆ ಅಂದ್ರೆ, ಆ ನನ ಮಗ ತಾಯಿ ಆಲು ಕುಡುದು ಬ್ಯಳದೊನಲ್ಲ ಕಂಡ್ರ."

"ಕರಟ್ಟಾಗೇಳಿದೆ ದೊಡಪ್ಪ, ಅವುನಿಗೆ ಚಿಕ್ಕವಯಸ್ಸಿನಲ್ಲೆ ತಾಯಿ ತೀರೊಗಿದ್ಲಂತೆ."

"ನೋಡೋ ವಾಟಿಸ್ಸೆ ಆ ಇಡೀ ಬಿಜೆಪಿ ಆರೆಸ್ಸೆಸ್‌ನೋರ ಕ್ಯಲಸವೇ ಆ ಸೋನಿಯಾಗಾಂಧಿ ಆಡಿಕಳದು. ನನಿಗೊಬ್ಬ ಏನಂದ ಗೊತ್ತಾ? ಇಲ್ಲೊಂದು ಹೆಣ್ಣದೆ ಮದಿವಾಯ್ತಿಯಾ ಅಂದ. ಆದ್ರೆ ಅವುಳು ವಿಧವೆ, ಒಂದು ಗಂಡು ಒಂದು ಹೆಣ್ಣು ಮಗದೆ ಅಂದ. ಯಾರೇಳು ಅಂದ್ರೆ ಸೋನಿಯಾ ಗಾಂಧಿ ಅಂದು ನಾದಕೆ ತಯಾರಾಗಿದ್ದ ಒಂದು ಹೊಡದೆ ನೋಡು ಅವತ್ತಿಂದ ನನ್ನತ್ರ ಮಾತಾಡದಿಲ್ಲ."

"ಆ ಸೂಳೆ ಮಕ್ಕಳು ಹಾಳಾಗೋಯ್ತರೆ ಸುಮ್ಮನಿರು" ಎಂದಳು ಜುಮ್ಮಿ.

"ಅವುರ ಹಾಳು ಮಾಡೊ ಶಕ್ತಿ ಎಡೂರಪ್ಪನಿಗೆ ಮಾತ್ರ ಕಣಕ್ಕ ಇರದು. ನೋಡಾಗ್ಲೆ ಬಿಲ್ಲು ಬಾಣ ತಯಾರು ಮಾಡ್ತಾ ಅವುನಂತೆ. ಬಿಜೆಪಿ ಕಮಲದ ಒಂದೊಂದೇ ದಳವ ಯಂಗುದುರುಸ್ತನೆ ನೋಡ್ತಯಿರು."

"ಸೋನಿಯಾ ಗಾಂಧಿ ಮಂಗಳೂರಿಗೆ ಬಂದು ಹೊದಲಂತೆ ನಿಜವೆ?"

"ಊ ಕಣಕ್ಕ, ತಲಿಕೆಟ್ಟ ಸಾಬರು ಇಡೀ ಪ್ರಪಂಚದಲ್ಲಿ ಹ್ಯಂಗೆ ಸುದ್ದಿ ಮಾಡಿದ್ದರೊ, ಅದೇ ತರ ಮಂಗಳೂರು ಕಡೆ ಬಿಜೆಪಿಗಳು ಸುದ್ದಿ ಮಾಡ್ತ ಅವುರೆ. ಒಂದು ಕಾಲ್ದಲ್ಲಿ ಪೂಜಾರಿ, ಮೊಯ್ಲಿ, ಆಸ್ಕರ್ ಫರ್ನಾಂಡಿಸ್ ಸಾಂರಾಜ್ಯನೆ ಆಗಿತ್ತು. ಈಗ ಮತಾಂಧರ ವಟಾರದ ತರ ಆಗ್ಯದೆ. ಆದ್ರೂ ಸೋನಿಯಾ ಗಾಂಧಿ ಬಂದು ಹೋದ್ಲು. ಅವುಳು ಬಂದು ಹೋದ ಮ್ಯಾಲೆ ಕಾಂಗ್ರೆಸ್‌ನೋರ ಗಲಾಟಿ ಜಾಸ್ತಿಯಾಗಿದ್ದತಂತೆ."


"ಯಾರ ಮ್ಯಾಲೆ?"


"ಅವುರ ಮ್ಯಾಲೆಯ. ಸಾಮಾನ್ಯವಾಗಿ ಕಾಂಗ್ರೆಸ್‌ನವ್ರು ಪಾರ್ಟಿ ಕೆಲಸಕ್ಕಿಂತ ಫ್ಲೆಕ್ಸಲ್ಲಿ ನನ್ನ ಫೋಟಾ ಇದ್ದತೆ, ಇನ್ವಿಟೇಶನ್ನಲ್ಲಿ ನನ್ನ ಹೆಸರ ಎಲ್ಯಾಕ್ಯವುರೆ, ಸೋನಿಗಾಂಧಿ ಬಂದಾಗ ಕುರ್ಚಿ ಎಲ್ಲಾಕಿದ್ರು ಅನ್ನದ ಪತ್ತೆ ಹಚ್ಚಗಂಡು ಜಗಳ ತಗಿತವೆ. ಅದೇ ಜೆಡಿಎಸ್ಸಲ್ಲಿ ನೋಡು, ದೇವೇಗೌಡ್ರು, ಕುಮಾರಣ್ಣ, ರೇವಣ್ಣ ಅನಿತಕ್ಕ ಆದ ಮ್ಯಾಲೆ ಉಳದೋರ ಫೋಟ ಇರತದೆ. ಯಾರೂ ಮಾತಾಡಂಗಿಲ್ಲ."

"ರೇವಣ್ಣನ ಹೆಡತಿನೂ ರಾಜಕೀಯಕೆ ಬಂದಳಂತಲ್ಲಾ?"

"ಬರ್ಲಿ ಕಣಕ್ಕ. ರಿಯಲಿ ಭ್ಯೂಟಿಫುಲ್ ವುಮನ್. ನಾನಂತು ಕೆಲವು ದಿನ ಕ್ಯಾನುವಾಸಿಗೆ ಹೋಗಿ ಬತ್ತಿನಿ!" ●

...ಸ್ಟಾರ್ ತನ್ನ ಹೊಳಪು ಕಳೆದು ಕೊಂಡರೆ





ಆತ ಈಗ ಸೂಪರ್‌ಸ್ಟಾರ್. ಆ ಸಂಜೆ ನೇರವಾಗಿ ನನ್ನ ಕೋಣೆ ಪ್ರವೇಶಿಸಿದ. 'ಹೇಗಿದ್ದೀರಿ ಸಾರ್?' ... ದು ನೋಡುತ್ತಾ ನಿಂತ. ಕಣ್ಣು ಕದಲಿಸದೆ ನೋಡಿ, 'ನಿಮ್ಮನ್ನು ನೋಡ್ತಾನೇ ಇರಬೇಕು ಅನ್ನುತ್ತೆ' ... ದ. ಅದರಿಂದ ನನಗೆ ಖುಷಿಯಾಗುತ್ತದೆ ಎಂದು ತಿಳಿದಿದ್ದ. 'ಸುಮ್ನೆ ಕೂತ್ಕೊ ಮರಿ. ಹ್ಯಾಗಿದ್ದೀ. ನಿನ್ನ ... ಮಾಗಳನ್ನು ನಾನು ನೋಡಿಲ್ಲ ಸಾರಿ. ನೋಡಬೇಕು ಅಂತ ಆಶೆಯಾಗುತ್ತೆ. ಅಲ್ಲ, ನೀನು ಸ್ವಲ್ಪ ದಪ್ಪ ಆಗಿದ್ದೀ, ಆದರೆ ನೋಡಲು ಮುಂಚೆಗಿಂತ ಚೆನ್ನಾಗಿದ್ದೀ. ನಿನ್ನ ಯಶಸ್ಸು ತುಂಬ ಖುಷಿ ತಂದಿರಬೇಕಲ್ಲವೇ?' ಅಂದೆ.

'ನಾನೀಗ ಅಮೆರಿಕಾಕ್ಕೆ ಹೊರಟಿದ್ದೇನೆ. ಅಲ್ಲಿ ನನ್ನದೊಂದು ಚಿತ್ರವನ್ನು ವಿಮರ್ಶಕರು ತುಂಬ ಇಷ್ಟಪಟ್ಟಿದ್ದಾರೆ. ಸಿನಿಮಾರಂಗದಲ್ಲಿ ತುಂಬ ಹಣವಿದೆ, ಹೊಗಳುಭಟ್ಟರಿದ್ದಾರೆ. ಆದರೆ ಅಲ್ಲಿ ಅಸಹ್ಯ ಹುಟ್ಟಿಸುವ ವಿಷಯಗಳೂ ಇವೆ. ನಾನು ಸಾಹಿತ್ಯ ತುಂಬ ಓದ್ತೇನೆ.'

'ಸಂತೋಷ' ಅಂದೆ. ಆದರೆ ಆತ ಶೇಕ್ಸ್‌ಪಿಯರ್, ಮಾರ್ಕ್ವೆಸ್ ಎಲ್ಲರ ಬಗ್ಗೆ ಏನೇನೋ ಮಾತಾಡುತ್ತಲೇ ಇದ್ದ. ಕೇಳುತ್ತಿದ್ದವರು ಪೆದ್ದುಗಳು ... ನ್ನುವಂತೆ ವಿಸ್ತಾರವಾಗಿ ವರ್ಣಿಸುತ್ತಲೇ ಇದ್ದ. ನನ್ನ ಛೇಂಬರ್‌ನಲ್ಲಿದ್ದ ಕೆಲವರು ಎದ್ದುಹೋದರು. ಕೆಲವರು ... ಚಡಪಡಿಸುತ್ತಿದ್ದರು. ನಾನು 'ಸಂಗ್ರಹವಾಗಿ ಹೇಳು. ಸಂಭಾಷಣೆಯಲ್ಲಿ ಎರಡು ವಿಷಯ ಮುಖ್ಯ: ಕೇಳುವುದು, ... ಳುವುದನ್ನು ಚುಟುಕವಾಗಿ ಹೇಳುವುದು...' ಅಂದೆ.

ಆತ ವಿವರವಾಗಿ ಹೇಳುತ್ತಲೇ ಹೋದ. ಆದರೆ ಅವನಿಗೆ ಗೊತ್ತಿರಲಿಲ್ಲ, ಪ್ರತಿಯೊಬ್ಬ ಪ್ರಸಿದ್ಧ ಹರಟೆಮಲ್ಲನಲ್ಲೂ ... ಸೂಕ್ಷ್ಮ ಸರಕುಗಳಿರುತ್ತವೆ; ಪಟಾಕಿ, ಮತಾಪುಗಳಿರುತ್ತವೆ; ಪುಟ್ಟ ಕತೆಗಳಿರುತ್ತವೆ. ಎದುರಿಗೆ ಇರುವವರು ಮಾತಾಡುವುದನ್ನು ... ಳಿಸಿಕೊಂಡು ನಲಿಯುವ ಸಹಾನುಭೂತಿ ಇರುತ್ತದೆ. ಹಕ್ಕಿಗಳು ಹೇಗೋ ಗೊತ್ತಿಲ್ಲ; ಮನುಷ್ಯ ಮಾತ್ರ ಆಡುವ ... ಮಾತನ್ನು ಯಕ್ಷಿಣಿ ಮಟ್ಟಕ್ಕೆ ಒಯ್ಯಬಲ್ಲ, ಅದ್ಭುತ ನಾಟಕವಾಗಿಸಬಲ್ಲ, ಎಲ್ಲ ಆಟದಂತಿದ್ದರೂ ಗಂಭೀರವಾಗಿಸಿ ... ಮನುಷ್ಯನ ಹರಟೆಯು ಚಾಳಿ ಮಹಾನ್ ಕಲೆಯನ್ನಾಗಿಸಬಲ್ಲ.

'ನೋಡಯ್ಯ ಮಿತ್ರ' ಎಂದು ಸೂಪರ್‌ಸ್ಟಾರ್‌ಗೆ ಹೇಳಿದೆ, 'ನೀನು ತುಂಬ ಒಳ್ಳೆಯವನು. ಈಗ ಹೋಗು. ನೀನು ... ಅಮೆರಿಕಾದಿಂದ ಬಂದ ಮೇಲೆ ಭೇಟಿಯಾಗೋಣ. ಅಲ್ಲಿಂದ ಭಾರತಕ್ಕೆ ಬಂದೊಡನೆ ನನಗೆ ಫೋನ್ ಮಾಡು, ... ಯಾವ ದಿನ ಬಾ ಎಂದು ತಿಳಿಸ್ತೇನೆ' ಅಂದೆ.

'ನೀವು ತಿಳಿಸಲಿಕ್ಕಿಲ್ಲ' ಅಂದ.

ನಾನು ಸುಮ್ಮನೆ ಕೂತೆ. ಸುಳ್ಳು ಹೇಳಲು ಇಷ್ಟವಿರಲಿಲ್ಲ, ಆದರೆ ಆತ ಏಳುವಂತೆ ಕಾಣಲಿಲ್ಲ, ಅವನ ... ನೋಯಿಸುವುದಕ್ಕೂ ಇಷ್ಟವಿರಲಿಲ್ಲ. 'ಬಂದೊಡನೆ ನೇರ ಬಂದುಬಿಡು. ಒಂದು ಪದ್ಯ ಬರೆದುಕೊಂಡು ಬಾ. ... ನಿನ್ನ ಅಮೆರಿಕನ್ ಅನುಭವ ಕುರಿತು ಮಾತಾಡಬಹುದು, ಈಗ ಹೋಗು' ಅಂದೆ. ಆತ ಹೊರಟುಹೋದ.

ನನ್ನ ಕುಟುತ್ವಕ್ಕೆ ನನಗೆ ಬೇಸರವಾಗಿತ್ತು, ಪ್ರಖ್ಯಾತರು, ಸೂಪರ್‌ಸ್ಟಾರ್‌ಗಳು ಹೇಗೆ ಒಳಗಡೆ ಬೂದಿಯಾಗಿರುತ್ತಾರೆ ಎಂದು ಚಿಂತಿಸತೊಡಗಿದೆ. ಒಬ್ಬ ನಟ ಪ್ರೇಕ್ಷಕರೆದುರು ನಿಂತಾಗಲೇ ಕರ್ಪೂರದಂತೆ ಉರಿಯತೊಡಗುತ್ತಾನೆ. ಈತ ಕೂಡ ಹಾಗೇ ಇರಬಹುದು.

ಇನ್ನೊಬ್ಬನ ತಾಳಕ್ಕೆ ತಕ್ಕಂತೆ

ಮೇಲಿನದನ್ನು ಹೇಳುವಾಗಲೇ ಇದಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಹೇಳಿಬಿಡಬಹುದು. ಅದು ಜನರನ್ನು ನೋಡುವುದನ್ನು ಕುರಿತದ್ದು. ಮೊನ್ನೆ ಒಬ್ಬ ಶ್ರೀಮಂತ ವ್ಯಕ್ತಿ ನನ್ನನ್ನು ತನ್ನ ಮಗನ ಮದುವೆಗೆ ಆಹ್ವಾನಿಸಿದ. ಆಹ್ವಾನ ಪತ್ರಿಕೆಯನ್ನು ತಂದ ಹುಡುಗ ಆ ಪತ್ರಿಕೆಯ ಜೊತೆಗೆ ಒಂದು ಪ್ಯಾಕೆಟ್ ತಂದಿದ್ದ. ಆ ಪ್ಯಾಕೆಟ್ಟನ್ನು ತಿರಸ್ಕರಿಸಿ ಆಹ್ವಾನ ಪತ್ರಿಕೆ ನೋಡಿದೆ. ನಾನೂ ಗಣ್ಯವ್ಯಕ್ತಿಯಾಗುತ್ತಿರಬಹುದು ಎಂದು ಭಯ ಶುರುವಾಯಿತು. ಆ ಮದುವೆಗೆ ಹೋಗಲಿಲ್ಲ. ಆ ಪ್ಯಾಕೆಟ್‌ನಲ್ಲಿ ಬೆಳ್ಳಿಯ ತಟ್ಟೆ ಇದ್ದುದಾಗಿ ಆಮೇಲೆ ಯಾರೋ ಹೇಳಿದರು. ಬಾಂಬ್‌ನಿಂದ ತಪ್ಪಿಸಿಕೊಂಡ ವ್ಯಕ್ತಿಯಂತೆ ಕೂತೆ.

ನೀವು ಸ್ವಲ್ಪ ಹೆಸರು ಗಳಿಸಿದೊಡನೆ 'ದೊಡ್ಡವರ' ಗಮನ ನಿಮ್ಮ ಮೇಲೆ ಬೀಳುತ್ತದೆ. ಅಂಥ ದೊಡ್ಡವರು ಬಂದರೆ ಅವರನ್ನು ಭೇಟಿಯಾಗಲಾಗುವುದಿಲ್ಲ ಎಂದು ಹೇಳಲಾಗುವುದಿಲ್ಲ. ಅವರು ಫೋನ್ ಮಾಡಿದರೆ ಅದನ್ನು ಸ್ವೀಕರಿಸದಿರುವುದು ಕಷ್ಟ. ನನ್ನ ಗೆಳೆಯರೊಬ್ಬರಿಗೆ ಮುಂಬೈನ ಪ್ರಸಿದ್ಧ ಉದ್ಯಮಿಯೊಬ್ಬರ ಮಗನ ಮದುವೆಗೆ ಆಹ್ವಾನ ಬಂತು. ಅವರು ಮದುವೆಗೆ ಎಂಥ ಬಟ್ಟೆ ಹಾಕಿಕೊಳ್ಳುವುದು, ಮುಂಬೈಗೆ ವಿಮಾನದಲ್ಲಿ ಹೋಗುವುದೋ, ರೈಲಿನಲ್ಲಿ ಹೋಗುವುದೋ, ಉಡುಗೊರೆಯಾಗಿ ಏನು ತೆಗೆದುಕೊಳ್ಳಬೇಕು ಎಂದು ಪರದಾಡುತ್ತಿದ್ದರು. ನಾನು ಸರಳವಾಗಿ, 'ಮದುವೆಗೆ ಹೋಗಬೇಡಿ' ಅಂದೆ. 'ಅಂಥ ದೊಡ್ಡವರ ಮಗನ ಮದುವೆ, ನಾನು ಅವರ ಕ್ಲಬ್ಬಿನ ಸದಸ್ಯ ಹೋಗದಿರಲು ಹೇಗೆ ಸಾಧ್ಯ?' ಅಂದರು.

'ನೋಡಿ, ನನ್ನ ನಂಬಿಕೆಗೆ ತಕ್ಕಂತೆ ಹೇಳುತ್ತಿದ್ದೇನೆ, ಕೇಳಿ. ಅನೇಕ ಸಂಗೀತಗಾರರು, ಸಾಹಿತಿಗಳು, ಚಿತ್ರಕಲಾವಿದರು ಯಾಕೆ eccentric (ತಿಕ್ಕಲು)ಗಳಾಗಿ ಕಾಣುತ್ತಾರೆ ಗೊತ್ತೆ, ಅವರಿಗೆ ತಮ್ಮ ಜೀವಶಕ್ತಿ, ಅಂತರಂಗದ ಸಂಪತ್ತು ಮುಖ್ಯವಾಗಿರುತ್ತದೆ; ಮೌನ ಮತ್ತು ಏಕಾಗ್ರತೆ ಅನಿವಾರ್ಯವಾಗಿರುತ್ತದೆ. ಆದ್ದರಿಂದ ಅವರು ಕಂಡವರ ಕೈಕುಲುಕಿ ... ಇಷ್ಟವಿಲ್ಲದಿದ್ದರೂ ಮುಗುಳ್ನಕ್ಕು, ಅಸಹ್ಯವಾದರೂ ಹೊಗಳಿ ತಮ್ಮ ಒಳತೋಟವನ್ನು ಸೊರಗಿಸಿಕೊಳ್ಳುವುದಿಲ್ಲ; ಬೇಕೆಂದಾಗ ಮಾತ್ರ ಮಾತಾಡುತ್ತಾರೆ; ತಮ್ಮ ಇಷ್ಟಕ್ಕೆ ತಮ್ಮ ನರಮಂಡಲ ಕುಸಿಯುವಂತೆ ಮಾಡಿಕೊಳ್ಳುವುದಿಲ್ಲ. ... ಇದು ಪ್ರತಿಭಾವಂತರ ಮಟ್ಟಿಗೆ ಮಾತ್ರ ನಿಜವಲ್ಲ; ಎಲ್ಲ ಮನುಷ್ಯರಿಗೂ ಅನ್ವಯಿಸುವ ತಕ್ಕಂತೆ ವರ್ತಿಸುತ್ತಾರೆ. ... ಮೌನ, ಚಿಂತನೆ ಮುಖ್ಯ ವಿಷಯ. ನಮ್ಮ ವೈಯಕ್ತಿಕ, ಸಾಮಾಜಿಕ ಕೆಲಸಗಳು ಅರ್ಥಪೂರ್ಣವಾಗಬೇಕಾದರೆ ... ನಮ್ಮ ಮನಸ್ಸು ನಮ್ಮನ್ನು ಮೀರಿದ ಅದ್ಭುತವನ್ನು ಸಾಧಿಸುತ್ತದೆ. ಅದಕ್ಕೆ ಬದಲು ವಿವೇಚನೆ ಮುಖ್ಯ, ಮೌನದಲ್ಲಿ ನಮ್ಮ ... ದಿನವಿಡೀ ಇಷ್ಟವಿಲ್ಲದ್ದನ್ನು ಮಾಡುವ, ಇನ್ನೊಬ್ಬರ ತಾಳಕ್ಕೆ ತಕ್ಕಂತೆ ಕುಣಿಯುವ ವ್ಯಕ್ತಿ ಅಂತರಂಗದಲ್ಲಿ ದಿವಾಳಿಯೇಳುತ್ತಾನೆ...

● ಫೆಬ್ರವರಿ 11, 1998

ಟಾಯಿಲೆಟ್ ದೇವಸ್ಥಾನ ಜಟಾಪಟಿ

ಅಣಕ



• ಎಚ್.ಎಲ್.ಕೇಶವಮೂರ್ತಿ

'ಶೌಚಾಲಯಗಳಿಗಿಂತ ದೇವಸ್ಥಾನಗಳು ಹೆಚ್ಚಿಗೆ ಇವೆ' ಹೌದೆ! ಯಾವ ದೇಶದಲ್ಲಂತೆ?

ಭವ್ಯ ಭಾರತದಲ್ಲಿ.

ಇರಬಹುದು. ಕೆಲವು ಹಳ್ಳಿಗಳಲ್ಲಿ, ಅನೇಕ ಸ್ಲಂಗಳಲ್ಲಿ ಒಂದೂ ಶೌಚಾಲಯ ಇರುವುದಿಲ್ಲ. ಆದರೆ ಕನಿಷ್ಠ ಒಂದಾದರೂ ದೇವಸ್ಥಾನ ಇರುತ್ತೆ! ಅಷ್ಟು ಮಾತ್ರ ಅಲ್ಲ, 2011 ಸೆನ್ಸಸ್ ಪ್ರಕಾರ ಶೇ. 49.8 ಮನೆಗಳಲ್ಲಿ ಶೌಚಾಲಯಗಳೇ ಇಲ್ಲವಂತೆ! ಹೀಗಿದ್ದೂ ಶೇ. 53.2 ಮನೆಗಳಲ್ಲಿ ಮೊಬೈಲ್ ಫೋನ್ ಇವೆಯಂತೆ! ಅಲ್ಲದೆ ಶೇಕಡ ಐವತ್ತಕ್ಕೂ ಹೆಚ್ಚಿನ ಮನೆಯಲ್ಲಿ ಟಿವಿ ರಾರಾಜಿಸುತ್ತವಂತೆ!

ಹಾಗಿದ್ದ ಮೇಲೆ ಈ ಹೇಳಿಕೆ ಸತ್ಯ ಎಂದ ಹಾಗಾಯಿತು.

ಯಾರ ಹೇಳಿಕೆ ಇದು?

ಕೇಂದ್ರ ಸಚಿವ ಜೈರಾಂ ರಮೇಶ್‌ದು.

ಜನ ಮೆಚ್ಚಿಕೊಂಡಿರಬೇಕಲ್ಲ?

ಇಲ್ಲ, ಸಿಡಿದೆದ್ದರು!

ಸಹಜ. ಇದ್ದದ್ದು ಇದ್ದ ಹಾಗೆ ಹೇಳಿದರೆ ಸಿದ್ದಪ್ಪನಿಗೆ ಸಿಡಿಲು ಬಡಿದಂತಾಗುತ್ತದೆ.

ಸತ್ಯ ನುಡಿದದ್ದಕ್ಕಲ್ಲ ಅವರ ಆಕ್ರೋಶ.

ಮತ್ತೇನು? ಪ್ರಕೃತಿಯ ಒಡನಾಟ ನಮ್ಮ ಪರಂಪರೆ. ಬಯಲ ವಿಸರ್ಜನೆ ಅದರ ಮುಂದುವರಿಕೆ. ಅದನ್ನು ತಡೆಯುವ ಪ್ರಯತ್ನ ಇದು ಎಂದೆ?

ಅದೂ ಹೌದು. ಮತ್ತೂ ಒಂದು ಇದೆ. ಅದೇ ಬಲವಾದ ಕಾರಣ.

ಏನದು?

ಹೋಲಿಕೆ. ದೇವಸ್ಥಾನಗಳನ್ನು ಶೌಚಾಲಯಕ್ಕೆ ಹೋಲಿಸಿದ್ದು!

ಹೋಲಿಸಿದರೆ ಏನು ತಪ್ಪು?

ಧಾರ್ಮಿಕ ನಂಬಿಕೆಗೆ ನೋವು! ಹಿಂದೂ ಧರ್ಮಕ್ಕೆ ಅಪಮಾನ!


ಮಂತ್ರಿಗಳ ಮಾತಿನ ಹಿಂದಿನ ಕಾಳಜಿ ಅರ್ಥಮಾಡಿಕೊಳ್ಳಿ. ಶುಚಿತ್ವದ ಮಹತ್ವ ಕುರಿತು ಹೇಳಿರುವವರ ಮಾತು ಇದು;

ಇರಬಹುದು. ಅದನ್ನು ಹೇಳಲು ಶೌಚಾಲಯಗಳಿಗೆ ದೇವಸ್ಥಾನಗಳನ್ನೇ ಹೋಲಿಸಬೇಕಾಗಿತ್ತೆ?

ಇನ್ನು ಏನು ಮಾಡಬಹುದಿತ್ತು? ಯಾವುದಕ್ಕೆ ಹೋಲಿಸಿದರೆ ಈ ಪರಿಣಾಮ ಉಂಟಾಗುತ್ತಿತ್ತು?

ಮಸೀದಿಗೆ ! ಚರ್ಚಿಗೆ !

ಬೆಂಗಳೂರಿನಲ್ಲಿ ನನಗೆ ಪರಿಚಯದ ಹಿರಿಯ ವಕೀಲರೊಬ್ಬರು ಇದ್ದಾರೆ. ಅವರಿಗೆ ರಾಜಕಾರಣಿಗಳ ನಿಕಟ ಸಂಪರ್ಕ ಇದೆ. ಅವರೊಡನೆ ಚಳವಳಿಗಳ ಕುರಿತು ಪ್ರಸ್ತಾಪಿಸುತ್ತಿದ್ದೆ. 'ಚಳವಳಿಗಾರರಿಗೆ ಬಹಳ ಕಷ್ಟ ಸಾರ್' ಅಂದೆ. 'ಯಾಕ್ರಿ' ಅಂದರು. 'ಅವರ ಮೇಲೆ ಎಷ್ಟೊಂದು ಕೇಸುಗಳಿದ್ದಾವೋ. ಕೋರ್ಟಿಗೆ ಅಲೆಯುವುದರಲ್ಲೇ ಅವರ ಜೀವನ ಕಳೆದು ಹೋಗುತ್ತೆ' ಅಂದೆ. ಅವರು ವ್ಯಂಗ್ಯದ ನಗೆ ಬೀರಿದರು. 'ಅವರ ವಿಷಯ ಗೊತ್ತಾ ನಿಮಗೆ'



ಅಂದರು. 'ಇಲ್ಲ' ಅಂದೆ. 'ಕಾನೂನು ಉಲ್ಲಂಘನೆ ಮಾಡಿ ಹೀರೋಗಳಂತೆ ಮೆರೆಯೋ ಅವರು ಜೀರೋ ಆಗೋ ಕತೆ ಗೊತ್ತಾ' ಎಂದು ಕೇಳಿದರು. ತಲೆ ಬಗೆದೆ. 'ಅವರ ಮೇಲೆ ಪೊಲೀಸ್ ಕೇಸ್ ಆಗುತ್ತಲ್ಲಾ ಅದನ್ನು ಹಿಂಪಡೆಯಿರಿ ಅಂತ ಮಂತ್ರಿಗಳ ಮುಂದೆ ಹಲ್ಲು ಗಿಂಜುತ್ತಾ ಕಾಲು ಹಿಡಿಯುತ್ತಾರೆ' ಅಂದರು!

ಇದು ಈಗ ಯಾಕೆ ನೆನಪಾಗುತ್ತಿದೆ ಅಂದರೆ ರಾಜಕಾರಣಿಗಳ ಇತ್ತೀಚಿನ ಹೇಳಿಕೆ ನೋಡಿ. ಭ್ರಷ್ಟಾಚಾರ ಅನ್ನೋದು ಅವರಿಗೆ ರಕ್ತಗತವಾಗಿದೆಯೇನೋ ಎನ್ನುವ ಅನುಮಾನ ಬರುವಂತೆ ನೂರಾರು ಆರೋಪಗಳು ಅವರ ಸುತ್ತಲೇ ಗಿರಕಿ ಹೊಡೆಯುತ್ತಾ ಇವೆ. ಯಡ್ಯೂರಪ್ಪನವರ ಭಕ್ಷಣೆ ಬಲೇ ಜೋರಾಗೇ ನಡೀತಿದ್ದು ಜೈಲಿಗೆ ಹೋಗಿಬಂದೂ ಆಯಿತು. 'ಇದೇನ್ರಿ ಇವರೆ ಹಿಂಗಾಯಿತಲ್ಲ ನಿಮ್ಮ ಕತೆ' ಅಂತ ಕೇಳಿದರೆ ಹಸಿಗೂಸಿನಂತೆ 'ಭ್ರಷ್ಟಾಚಾರ ಅಂದ್ರೇನು ಅನ್ನೋದು ಕಾಣಾಕೆ ಕಾಣೆ' ಅಂತಾರೆ. 'ಊರು ತುಂಬ ಪುರಾವೆ ತುಂಬಿವಲ್ರೀ' ಅಂದರೆ 'ಅವೆಲ್ಲ ಸುಳ್ಳು' ನಾನು ಯಾವ ತನಿಖೆಗೂ ಸಿದ್ಧ' ಅಂತಾರೆ!

ವಾದ್ರಾ ಸಾಹೇಬರು ಅಂದರೆ 'ಯಾವೋನು ಅವ್ನು' ಅಂತಾರೆ ಜನ. ಅದೇ ಸೋನಿಯಾ ಅಳಿಯ ಅಂದ್ರೆ 'ಓ ಪ್ರಿಯಾಂಕ ಗಂಡ್ನಾ' ಅಂತಾರೆ. ಅಷ್ಟು ಫೇಮಸ್ಸು ಅವನು! ಆತನ ಹೊಟ್ಟೆಗೆ ದೆವ್ವ ಹೊಕ್ಕಿದ್ದತ್ತೋ ಏನೋ ಕಾಣೆ. ಎಷ್ಟು ನುಂಗಿದರೂ ಹಸಿವೇ ಹಿಂಗಲ್ಲವಂತೆ. ಹಿಗ್ಗಾಮುಗ್ಗಾ ನುಂಗೋಕೆ ಹೋಗಿ ಈಗ ತಗುಲಾಕಿಕೊಂಡವನಂತೆ. ಹಿಂಗೆ ಮಾಡಿಕೊಂಡನಲ್ಲ, 'ಏನೋ ಮಣ್ಣು ತಿನ್ನೋ ಕೆಲ್ಸ ಮಾಡಿಬಿಟ್ಟೆ ಬುಡ್ರಪ್ಪ' ಅನ್ನಬಾರದಾ. ಉಹುಂ. ಯಾಕಂಗೆ ಅಂದಾನು?' 'ಎಂತಹ ತನಿಖೆಗೂ ಸಿದ್ಧ' ಅಂತಾನೆ!' ಎಲಎಲಾ ಇವನ ಧಿಮಾಕೆ. ತನಿಖೆ ಮಾಡೇ ಬಿಡ್ತೀನಿ' ಅಂತ ಹೊರಟು ನಿಂತವನ್ನ ಅಲ್ಲಿಂದ ಕಿತ್ತು ಬಿಸಾಕವ್ರಂತೆ! ಇರಲಿ.

ಇನ್ನು ಕೇಂದ್ರದ ಕಾನೂನು ಸಚಿವರು. ಅವರೇನು ಭೂಮಿಬಾಕರಲ್ಲ, ಅದೇನೋ ಅಂಗವಿಕಲರಿಗೆ ಸೌಲಭ್ಯ ಒದಗುಸ್ತೀನಿ ಅಂತ ಹೊಂಟ್ರಂತೆ. ಇಂತಹವರಿಗೆ ಯಾರು ಸಹಾಯ ಮಾಡಲ್ಲ, ಕೇಂದ್ರ ಸರ್ಕಾರಾನೂ ಎಪ್ಪತ್ತೊಂದು ಲಕ್ಷ ರೂಪಾಯಿಗಳನ್ನು ಧಾರಾಳವಾಗೇ ನೀಡ್ತಂತೆ. ಸೌಲಭ್ಯ ಸಿಕ್ಕಿರಬೇಕು ಅಂತ ಅಂಗವಿಕಲರನ್ನು ಕೇಳಿದರೆ 'ಹಂಗಂದ್ರೇನು ಸಾ' ಅಂತವಂತೆ! ಲೆಕ್ಕದ ಪುಸ್ತಕದಲ್ಲಿ ಮಾತ್ರ ಕರಾರುವಾಕ್ಕಾಗಿ ಹಂಚಿದ್ದಾರಂತೆ! ಈ ಎಲ್ಲ ಗೋಲ್‌ಮಾಲ್‌ಗಳು ಅವಲ್ಲ ಅವ್ರೊಂದ್ ರೀತಿ ಜಾಯಿಂಟ್ ವೆಂಚರ್ರು. ಅವರ ಹೆಂಡತೀನೂ ಸೇರ್ಕಂಡವ್ರಂತೆ. 'ಇದೇನ್ರಿ ಇದು ಅನ್ಯಾಯ. ಗಂಡಹೆಂಡತಿ ಶಾಮೀಲಾಗಿ ಹಿಂಗೆ ಮಾಡುದ್ರಲ್ಲ' ಅಂತ ಕೇಂದ್ರದ ಉಕ್ಕು ಸಚಿವರನ್ನ ಕೇಳಿದರೆ 'ಕೇಂದ್ರ ಸಚಿವರು ಅಂದ್ರೆ ಏನು ಅಂದುಕೊಂಡಿದ್ದೀರಿ? ಘನತೆ ಗೌರವ ಇರೋರು ಕಣ್ರಿ. ಲಕ್ಷಲಕ್ಷ ಎಲ್ಲ ಅವರಿಗೆ ಜುಜುಬಿ. ಏನಿದ್ರೂ ಕೋಟಿ ಲೆಕ್ಕದಲ್ಲಿ ಇದ್ದರೆ ಹೇಳಿ. ಹೋಗಿ ಹೋಗಿ ಇಂತಹ ಚಿಲ್ಲರೆ ಆರೋಪನೇನ್ರಿ ಮಾಡೋದು' ಅಂತ ಕೇಸ್ ಡಿಸ್‌ಮಿಸ್ಸೇ ಮಾಡ್ತಾರೆ! ಯಾರ ಮೇಲೆ ಎಷ್ಟು ರೂಪಾಯಿನ ಭ್ರಷ್ಟಾಚಾರದ ಆರೋಪ ಮಾಡಬಹುದು ಎನ್ನುವುದನ್ನು ಮಾನ್ಯ ಸಚಿವರು ತಿಳಿಸಿದ್ದರೆ ಮುಂದೆ ಎಚ್ಚರಿಕೆ ವಹಿಸಲು ಅನುಕೂಲ ಆಗುತ್ತಿತ್ತು! ಇರಲಿ. ಕಾನೂನು ಮಂತ್ರಿಗಳೂ 'ಎಂತಹ ತನಿಖೆಗೂ ಸಿದ್ಧ' ಅಂತಾನೆ ಅಂತಾರೆ!

ಗಡ್ಕರಿ ಸಾಹೇಬರ ಪಕ್ಷ ಅಂದರೆ ಜನ್ಮಭೂಮಿ ತಾಯಿಗಿಂತ ಮಿಗಿಲು ಅನ್ನೋದು. ಆದರೆ ವಿಸಾಗ[illegible] ಅಂದರೆ ಸಾಹೇಬರು ತಾಯಿಗ್ಗಂಡ ಆಗವ್ರಂತೆ. ಅದೆಂಗಾಯ್ತಂತೆ ಅಂದ್ರೆ ಮಹಾರಾಷ್ಟ್ರ ಸರ್ಕಾರಕ್ಕೆ ಏಕ್‌ದ[illegible] ರೈತರ ಮೇಲೆ ಯದ್ವಾತದ್ವಾ ಕಾಳಜಿ ಉಕ್ಕೇರಿತಂತೆ. ನೀರಾವರಿ ಸೌಲಭ್ಯ ಒದಗಿಸಬೇಕು ಅಂದುಕೊಂಡಿತಂತೆ. ಅದಕ್ಕೆ ಜಮೀನು ಬೇಕಲ್ಲವಾ. ರೈತರ ಬಳಿ ಬೇಜಾನಾಗಿತ್ತು. ರೈತ ಪರ ಸರ್ಕಾರ ಅಲ್ಲವಾ. ಅದನ್ನು ವಶಪಡಿಸಿಕೊಂಡಿತು. ಹೇಳಿದಂತೇನೇ ಸೌಲಭ್ಯನೂ ಒದಗಿಸಿತ[illegible] ವಶಪಡಿಸಿಕೊಂಡಿತ್ತಲ್ಲಾ ಸರ್ಕಾರ ಅದ್ರಲ್ಲಿ ಒಂದಷ್ಟು ಭೂಮಿ ಉಳಿದು ಹೋಗಿತ್ತು, ರೈತರು ಉಳಿಕೆ ಭೂಮಿಯನ್ನು ನಮಗೆ ಹಿಂತಿರುಗಿಸಿ ಅಂತ ಅಲವತ್ತುಕೊಂಡರಂತೆ. ಸರ್ಕಾ[illegible] ಕಂಡರೂ ಕಾಣದಂಗೆ ಸುಮ್ಮನಿತ್ತಂತೆ. ಉತ್ಪಾದನೆ[illegible] ಬಳಸಬೇಕಾಗಿದ್ದ ಭೂಮಿ ಹೀಗೆ ಪಾಳುಬಿದ್ದು ಹಾಳಾಗುತ್ತಿದೆಯಲ್ಲಾ ಅಂತ ಗಡ್ಕರಿ ಸಾಹೇಬರಿಗೆ ಬೇಸ[illegible] ಬಂತಂತೆ. ಅದನ್ನ ನನಗೆ ಕೊಡಿ ಅಂತ ಅರ್ಜಿ ಹಾಕಿದರಂತೆ. ಸರ್ಕಾರಿ ಕೆಲಸ ಅಂದ್ರೆ ವರ್ಷಗಟ್ಟಲೆ ಹಿಡಿಯುತ್ತೆ ಅಂತಾರಲ್ಲ ಹಂಗೇನೂ ಆಗಲೇ ಇಲ್ಲವಂತೆ. ನಾಲಕ್ಕೇ ದಿವಸದಲ್ಲಿ ಮಂಜೂರು ಆಯಿತಂತೆ! ಅದು ಎಷ್ಟು ಎಕರೆ ಅಂತೀರಿ ಒಂದು ನೂರು ಎಕರೆ! ಹರಿಶ್ಚಂದ್ರ ಆದ ಮೇಲೆ ಇವರೇಯ ಆ ಜಾಗ ಭರ್ತಿ ಮಾಡಿರೋದು ಅಂತ ಕಾಣ್ತದೆ. ಭೂಹಗರಣ ಸುತ್ತಿಕೊಂಡಾಗ ಸಾಹೇಬರು 'ಯಾವ ತನಿಖೆಗೂ ಸಿದ್ಧ' ಅಂತಾರೆ!

ಅಲ್ಲ ಭ್ರಷ್ಟಾಚಾರ ಬಟಾಬಯಲಾದ ಮೇಲೂ ಇವರೇ[illegible] ಹಿಂಗೇಳ್ತಾ ಅವರಲ್ಲ ಇವರೂ ಏನಾದರೂ ನಮಗೆ ಲಾಯರ[illegible] ಹೇಳಿದ ಚಳವಳಿಗಾರರ ತರಹಾನೆ ಹಿಂದಿನಿಂದ ಹೋಗಿ ಸಂಬಂಧಿಸಿದವರ ಕಾಲು ಹಿಡೀತಾರಾ ಅನ್ನೋದು ಅನುಮಾನ ಅಷ್ಟೆ!

ಅಲ್ಲೂ ಹೋಲಿಕೆ ಸಮಸ್ಯೆ!

ಹೊಸದರಲ್ಲಿ ಎಲ್ಲ ಚಂದವೇಯ. ದಾಂಪತ್ಯ ಜೀವನ ಪ್ರಾರಂಭ ಆದಾಗ ಹೆಂಡತಿಗೆ ಗಂಡ ಮನ್ಮಥ; ಗಂಡನಿಗೆ ಹೆಂಡತಿ ರತಿ ಅನ್ನಿಸುತ್ತದೆ. ಆಡಿದ ಮಾತು ಕಿವಿಗೆ ಹಿತವಾಗಿರುತ್ತೆ, ಹೆಂಡತಿ ಕಾಯ್ತಿರ್‍ತಾಳೆ ಬೇಗ ಮನೆಗೆ ಹೋಗಬೇಕು ಅನ್ನಿಸುತ್ತೆ. ವರ್ಷಗಳು ಉರುಳಿದಂತೆ ಬಳ್ಳಿಯ[illegible]

ಸ್ವಾತ್ ಕಣಿವೆಯ ಸ್ವಾತಿ ಮುತ್ತು ಮಲಾಲ

ಸ್ವಾತ್ ಕಣಿವೆಯ ಸ್ವಾತಿ ಮುತ್ತು ಸನಾತನಿಗಳ ಗುಂಡಿಗೆ ಸಿಲುಕಿ ಸಾವು ಬದುಕಿನ ನಡುವೆ ಹೋರಾಡುತ್ತಿರುವ ಸಂಗತಿ ಅತ್ಯಂತ ನೋವನ್ನುಂಟು ಮಾಡಿದೆ. ಉಗ್ರರ ದಾಳಿ, ಬೆದರಿಕೆಗಳಿಗೆ ಬೆಚ್ಚದ ಬೆದರದ ಈ ಮುಗ್ಧ ಬಾಲೆಯ ಕೆಚ್ಚು , ಪ್ರತಿಭೆಯ ಕುರಿತು ಬರೆಯಲು ಪದಗಳು ಸಿಗುತ್ತಿಲ್ಲ. ಜಗತ್ತಿನ ಎಲ್ಲಾ ರಾಷ್ಟ್ರಗಳ ತಾಯಿತಂದೆಯರು ತಮ್ಮ ಹೆಣ್ಣು ಮಕ್ಕಳಿಗೆ ಮಲಾಲ ಹೆಸರನ್ನಿಟ್ಟು ಅವಳ ಹೆಸರನ್ನು ಚಿರಾಯುಗೊಳಿಸಬೇಕಾಗಿದೆ.

ಈ ನಮ್ಮ ಮಲಾಲಳ ಸಾಹಸ, ಧೈರ್ಯ ಕಂಡು ಸಾವೇ ಹಿಮ್ಮೆಟ್ಟಿದರೆ ಆಶ್ಚರ್ಯವಿಲ್ಲ.

- ಎನ್.ಕೆ.ವರದರಾಜ್, ಕೋಲಾರ

ಮಾರ್ಕಂಡೇಯ ಕಟ್ಜು ಅವರ ಲೇಕಹನ್ ಬಹಳ ಸಕಾಲಿಕವಾಗಿದೆ. ಅಕ್ಬರ್ ಪ್ರತಿ ವರ್ಷ ತನ್ನ ಅರಮನೆಯಲ್ಲಿ



'ಮೆಡಿಕಲ್, ಡೆಂಟಲ್, ಇಂಜಿನೀಯರಿಂಗ್, ಮ್ಯಾನೇಜ್‌ಮೆಂಟ್... ಇಂತಹ ಒಂದೂ ಕಾಲೇಜ್ ನಿಮ್ಮ ಜಿಲ್ಲೆಯಲ್ಲಿ ಇಲ್ವಾ? ಹಾಗಿದ್ದರೆ ನಿಮ್ಮ ಜನಪ್ರತಿನಿಧಿಗಳು ಮಾಡಿದ್ದಾದರೂ ಏನು? ಸರ್ಕಾರ ಹೋಗಲಿ ಖಾಸಗಿಯವರು ಯಾರೂ ಈ ನಿಟ್ಟಿನಲ್ಲಿ ಏನೂ ಮಾಡಿಲ್ಲವಾ?'

ಎರಡು ಮೂರು ವರ್ಷಗಳ ಹಿಂದೆ ಮೆಡಿಕಲ್-ಇಂಜಿನೀಯರಿಂಗ್ ಸೀಟಿಗಾಗಿ ಪಕ್ಕದ ಜಿಲ್ಲೆಯ ಕಾಲೇಜುಗಳಲ್ಲಿ ಪ್ರಯತ್ನಿಸುವಾಗ ಕೇಳಿ ಬಂದ ಉದ್ಗಾರ ಇದು: ಈ ಜಿಲ್ಲೆಯಲ್ಲಿ ಇಂತಹ ಒಂದೇ ಒಂದು ಕಾಲೇಜು ಇಲ್ಲವೆಂದರೆ ಇಡೀ ಜಿಲ್ಲೆಯವರು ನಾಚಿಕೆಪಡಬೇಕಾದ ವಿಚಾರ. ಖಾಸಗಿಯಾಗಿ ಇಂತಹ ಕಾಲೇಜುಗಳನ್ನು ಸ್ಥಾಪಿಸಿ ಮುನ್ನಡೆಸುವ ಆರ್ಥಿಕ ಚೈತನ್ಯದವರು ವಿರಳವಾದರೂ ಈ ಜಿಲ್ಲೆಯಲ್ಲಿ ಇದ್ದಾರೆ. ಆದರೆ ತಮ್ಮ ಆರ್ಥಿಕ ಶಕ್ತಿಯನ್ನು ಇಂತಹ ಶೈಕ್ಷಣಿಕ ಉದ್ದೇಶಕ್ಕೆ ಬಳಸಲು ಅವರು ಹಿಂದೇಟುಹಾಕುತ್ತಿದ್ದಾರೆ. ವಿಷಾದದ ಸಂಗತಿ ಎಂದರೆ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ರಾಜಕಾರಣಿಗಳು ಈ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ಹಾಕಿ ಸರ್ಕಾರಿ ರಂಗದಲ್ಲಾದರೂ ಇಂತಹ ಕಾಲೇಜುಗಳು ಸ್ಥಾಪನೆಯಾಗುವಂತೆ ಪ್ರಯತ್ನಿಸುವುದರಲ್ಲಿ ವಿಫಲರಾಗಿದ್ದಾರೆ. ಮೊದಲ ಬಾರಿ ಆರಿಸಿ ಬಂದಾಗ ಪ್ರಯತ್ನ ಆರಂಭಿಸಿದ್ದರೆ, ಕನಿಷ್ಠ ನಾಲ್ಕನೇ ಬಾರಿ ಆರಿಸಿ ಬಂದಾಗಲಾದರೂ ಇಂತಹ ಕಾಲೇಜುಗಳು ಆರಂಭವಾಗುತ್ತಿತ್ತೇನೋ?

ಈ ಜಿಲ್ಲೆಯ ವಿದ್ಯಾರ್ಥಿಗಳು ಕೇವಲ ಕಲಾ, ವಿಜ್ಞಾನ, ವಾಣಿಜ್ಯ, ಕಾನೂನು ಮತ್ತು ಇಂಜಿನೀಯರಿಂಗ್ ಪದವಿ-ಡಿಪ್ಲೋಮಾಗಳಿಗೆ ತೃಪ್ತರಾಗಬೇಕು. ವಿಚಿತ್ರವೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಿಲ್ಲೆಗಳಲ್ಲಿ ಸ್ನಾತಕೋತ್ತರ ಕೇಂದ್ರಗಳಿವೆ. ಆದರೆ ಉತ್ತರಕನ್ನಡ ಜಿಲ್ಲೆಯಲ್ಲಿ ಕಾರವಾರ ಮತ್ತು ಕುಮುಟಾದಲ್ಲಿ ತಲಾ ಒಂದೊಂದು ವಿಷಯದಲ್ಲಿ ಸ್ನಾತಕೋತ್ತರ ಕೇಂದ್ರ ಬಿಟ್ಟರೆ ಜಿಲ್ಲೆಯಲ್ಲಿ ಬೇರೆಲ್ಲೂ ಈ ಅವಕಾಶಗಳಿಲ್ಲ, ಈ ಜಿಲ್ಲೆಯಿಂದ ಇಂತಹ ಕೇಂದ್ರಗಳಿಗೆ ಬೇಡಿಕೆಯೇ ಬಂದಿಲ್ಲ ಎಂದು ಕರ್ನಾಟಕ ವಿಶ್ವವಿದ್ಯಾಲಯ ಇತ್ತೀಚೆಗೆ ಹೇಳಿರುವುದನ್ನು ಗಮನಿಸಿದಾಗ ಈ ಜಿಲ್ಲೆಯವರ ಅಲ್ಪ ತೃಪ್ತಿಯು ಅರ್ಥವಾಗದಿರದು. ಉಳ್ಳವರೇನೋ ಪಕ್ಕದ ಹುಬ್ಬಳ್ಳಿ, ಬೆಳಗಾವಿ, ಶಿವಮೊಗ್ಗಾ, ಮಂಗಳೂರು, ಮೈಸೂರು ಮತ್ತು ಬೆಂಗಳೂರಿನಂಥ ನಗರಗಳಿಗೆ ಹೋಗಬಹುದು. ಆದರೆ ಈಗಾಗಲೆ ಆರ್ಥಿಕವಾಗಿ ಬೆನ್ನೆಲುಬು ಮುರಿದುಕೊಂಡಿರುವ ಬಹು ಸಂಖ್ಯಾತ ಮಧ್ಯಮ ಮತ್ತು ಕೆಳವರ್ಗದವರ ಪಾಡೇನು?

ಈ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಲು ಯಾರಾದರೂ ಮುಂದೆ ಬಂದರೆ ತಾವು ಲಕ್ಷಕ್ಕೂ ಮೀರಿ ದೇಣಿಗೆ ಕೊಡಲು ಸಿದ್ಧ ಎಂದು ಪ್ರಜ್ಞಾವಂತರೊಬ್ಬರು ಮುಂದೆ ಬಂದಾಗ 'ನಮಗೆ ಇಂತಹ ಕಾಲೇಜುಗಳು ಬೇಡ. ಇಂತಹ ಕಾಲೇಜಿನಿಂದ ತಮ್ಮ ಮಕ್ಕಳು ಹಾಳಾಗುತ್ತಾರೆ' ಎಂದು ವಾದಿಸಿದವರು ಈ ಜಿಲ್ಲೆಯಲ್ಲಿ

ಬಂದ ಈ ಯೋಜನೆಗಳಲ್ಲಿ ಸ್ಥಳೀಯರಿಗೆ ಸಾಕಷ್ಟು ಉದ್ಯೋಗ ಕೊಡಿಸಲು ಮತ್ತು ಪೂರಕ ಉದ್ಯಮ[illegible] ಸ್ಥಾಪಿಸಲೂ ಸಾಧ್ಯವಾಗಿಲ್ಲ, ಈ ಯೋಜನೆಗಳಿಂದಾ[illegible] ನಿರಾಶ್ರಿತರಾದವರಿಗೆ ಪರಿಹಾರ ಕೊಡಿಸುವ ಸಮಿತಿ[illegible] ಸದಸ್ಯರಾಗಲು ತೋರಿದ ಉತ್ಸಾಹ ಪರಿಹಾರ ವಿತರಣೆಯ[illegible] ಕಾಣದೆ, ಎರಡು ದಶಕಗಳ ನಂತರವೂ ಈ ಸಮಸ್ಯೆ ಜೀವಂತವಾಗಿದೆ. ಈ ಯೋಜನೆಗಳನ್ನು ವಿರೋಧಿ[illegible] ಪ್ರತಿಭಟನೆ, ಮಾನವ ಸರಪಣಿ ಮಾಡಿಸಿದವರು ಇವತ್ತು ಐಷಾರಾಮಿ ಜೀವನ ಸಾಗಿಸುತ್ತಿದ್ದರೆ ಅವರ ಹಿಂದೆ ಜೈಕಾ[illegible] ಹಾಕಿದವರು ಹಾಗೆಯೇ ಇದ್ದಾರೆ.

ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈ ಜಿಲ್ಲೆಯ[illegible] ಹಲವು ರಸ್ತೆ-ಸೇತುವೆ ನಿರ್ಮಾಣ ನಡೆದಿತ್ತು ಮತ್ತು ಒಂದೆರಡು ಕಲಾ-ವಿಜ್ಞಾನ ಕಾಲೇಜುಗಳ ಸ್ಥಾಪನೆಯಾದವು.

ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿ ಗಗನ ಕುಸುಮ?

ಇದ್ದಾರೆ. ವೈಯಕ್ತಿಕ ಅನುಭವಕ್ಕೆ ಸಾರ್ವತ್ರಿಕ ಬಣ್ಣ ಕೊಡುವ ಈ ಪ್ರಯತ್ನವನ್ನು ಯಾರೂ ವಿರೋಧಿಸುವ ಯತ್ನ ಮಾಡಲಿಲ್ಲ.

ಈ ಜಿಲ್ಲೆಯಲ್ಲಿ ಇಂತಹ ಕಾಲೇಜುಗಳಿಲ್ಲ... ಆದರೂ ಹಾಳಾದ ವಿಧ್ಯಾರ್ಥಿಗಳ ಸಂಖ್ಯೆಗೇನು ಕೊರತೆ ಇಲ್ಲ, ಅಕ್ಕಪಕ್ಕದ ಜಿಲ್ಲೆಯವರೂ ಮೂಗಿನ ಮೇಲೆ ಬೆರಳಿಡುವಷ್ಟು ಬಾರ್‌ಗಳು, ವೈನ್ ಶಾಪ್‌ಗಳು, ಮಟಕಾ-ಜೂಜು ಅಡ್ಡೆಗಳು, ಡ್ರಗ್ಸ್ ಜಂಕ್ಷನ್‌ಗಳು, ಕ್ಯಾಬರೆ, ರೇವ್ ಪಾರ್ಟಿಗಳು ಮತ್ತು ವೇಶ್ಯಾವಾಟಿಕೆಗಳು ಅನೈತಿಕ ಪೋಲಿಸರ ಕಣ್ಣೆದುರಿನಲ್ಲಿಯೇ ನಡೆಯುತ್ತಿವೆ. ಈ ಬಗೆಗೆ ಯಾರೂ ತಲೆಕೆಡಿಸಿಕೊಂಡಿಲ್ಲ.

ಈ ಜಿಲ್ಲೆಯಲ್ಲಿ ಕೈಗಾ ಅಣುಸ್ಥಾವರ, ಸೀಬರ್ಡ್ ನೌಕಾನೆಲೆ, ಕಾಸ್ಟಿಕ್ ಸೋಡಾ ಕಾರ್ಖಾನೆ, ದಾಂಡೇಲಿ ಪೇಪರ್ ಮತ್ತು ಮ್ಯಾಂಗನೀಜ್ ಉದ್ದಿಮೆಯಂತಹ ಬೃಹತ್ ಉದ್ಯಮಗಳು ಇವೆ. ಇವು ನಿರ್ವಿವಾದವಾಗಿ ಈ ಜಿಲ್ಲೆಯ ರಾಜಕಾರಣಿಗಳ ಮತ್ತು ಜನಪ್ರತಿನಿಧಿಗಳ ಪ್ರಯತ್ನದಿಂದಾಗಿ ಬಂದದ್ದಲ್ಲ. ಕೊಂಕಣ ರೈಲು ಈ ಜಿಲ್ಲೆಯಲ್ಲಿ ಹಾದುಹೋಗುವ ಅನಿವಾರ್ಯತೆಯಿಂದಾಗಿ ಈ ಜಿಲ್ಲೆಗೆ ಬಂದಿದೆಯೇ ವಿನಃ ಜಿಲ್ಲೆಯ ಧುರೀಣರ ಪ್ರಯತ್ನದಿಂದಲ್ಲ, ಇಂತಹ ಆಯಕಟ್ಟಿನ ಮತ್ತು ಯೋಗ್ಯ ಸ್ಥಳ ಬೇರೆ ಎಲ್ಲೂ ಸಿಗದ ಕಾರಣ ಕೈಗಾ ಅಣು ಸ್ಥಾವರ ಮತ್ತು ಸೀಬರ್ಡ್ ನೌಕಾ ನೆಲೆ ಈ ಜಿಲ್ಲೆಗೆ ಬಂದಿದೆ. ಅನಿವಾರ್ಯವಾಗಿ

ಆನಂತರದ ದಿನಗಳಲ್ಲಿ ಅಂತಹ ಅಭಿವೃದ್ಧಿ ಚಟುವಟಿಕೆಗಳು ಕಾಣಲಿಲ್ಲ, ಹೆಗಡೆ ಅವರು ಮನಸ್ಸು ಮಾಡಿದ್ದರೆ ಈ ಜಿಲ್ಲೆಯಲ್ಲಿ ಇಂಜಿನೀಯರಿಂಗ್-ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಬಹುದಿತ್ತು, ಅವರ ಆಪ್ತ ಮಧುದಂಡಾವತೆ ರೈಲು ಮಂತ್ರಿಯಾದಾಗ ಅಂಕೋಲಾ-ಹುಬ್ಬಳ್ಳಿ, ಹೊನ್ನಾವರ-ತಾಳಗುಪ್ಪಾ ಮತ್ತು

ತಾಳಗುಪ್ಪಾ-ಯಲ್ಲಾಪುರ-ದಾಂಡೇಲಿ ರೈಲು ಮಾರ್ಗಗಳಿಗೆ ಚಾಲನೆ ಕೊಡಬಹುದಿತ್ತು. ಜಿಲ್ಲೆಯವರು ಅವರ ಮೇಲೆ ಒತ್ತಡ ಹಾಕದಿರುವದು ಮತ್ತು ಜಿಲ್ಲೆಯಿಂದ ಅವರಿಗೆ ನಿರೀಕ್ಷಿತ ಸಹಾಯ ಸಿಗದಿರುವುದು ಮತ್ತು ಅವರು ರಾಷ್ಟ್ರರಾಜಕಾರಣದತ್ತ ಹೊರಳಿದ್ದು ಈ ಜಿಲ್ಲೆ ಪ್ರಗತಿಯ ನಕ್ಷೆಯಲ್ಲಿ ಸ್ಥಳ ತಪ್ಪಿಹೋಯಿತು.

ಈ ಜಿಲ್ಲೆಗೆ ಹೊಸ ಉದ್ದಿಮೆಗಳು ಹೋಗಲಿ, ಇದ್ದ ಸಣ್ಣಸಣ್ಣ ಉದ್ದಿಮೆಗಳೂ ಕಣ್ಣು ಮುಚ್ಚುತ್ತಿವೆ. ಇನ್ನು ಕೆಲವು ಕುಂಟುತ್ತಾ ಜೀವ ಹಿಡಿದುಕೊಂಡಿವೆ. ಈ ಮಧ್ಯೆ ಅಳ್ನಾವರದಿಂದ ದಾಂಡೇಲಿವರೆಗಿದ್ದ ರೈಲು ಮಾರ್ಗ ತುಕ್ಕು ಹಿಡಿದಿದೆ. ಸಿದ್ದಾಪುರ ಹತ್ತಿರವಿರುವ ಹುಲ್ಲು ಹಿಂಡಿ ಕಾರ್ಖಾನೆ ಈ ಜಿಲ್ಲೆಯ ರಾಜಕೀಯ ಧುರೀಣತ್ವದ ಪರಿಣಾಮಕತ್ವಕ್ಕೆ ಒಂದು ಉದಾಹರಣೆ. ಆಶ್ಚರ್ಯವೆಂದರೆ ಜಿಲ್ಲೆಗೆ ಯಾವುದೇ ಉದ್ದಿಮೆ ಬಂದರೂ ವಿರೋಧಿಸುವ ಪರಿಸರವಾದಿಗಳು ಈ ಜಿಲ್ಲೆಯ ರಾಜಕಾರಣಿಗಳ ವಿಫಲತೆಗೆ[illegible]

ಬಳುಕುತ್ತಿದ್ದ ಹೆಂಡತಿ ಬೂದುಗುಂಬಳದಂತೆ ಉರು
ತ್ತಾಳೆ ಅನ್ನಿಸುವುದಕ್ಕೆ ಪ್ರಾರಂಭ ಆಗುತ್ತೆ ಹಾಳಾದ ಮನೆಗೆ
ಗಬೇಕಲ್ಲಾ ಅದೇ ಹೆಂಡತಿ ಅದೇ ಮುಖ ನೋಡಬೇಕಲ್ಲ
ಸಂಕಟ ಕಾಮುತ್ತೆ. ಆದಷ್ಟು ಹೊತ್ತು ಹೊರಗೇ ಕಾಲ
ಣೀಣ ಅನ್ನಿಸುತ್ತೆ. ಹಂಗಂತ ಎಷ್ಟು ಹೊತ್ತು ಅಂತ
ಗಡೇ ಇರಲು ಸಾಧ್ಯ? ಪ್ರಾರಬ್ಧ ಕರ್ಮ ಅಂದುಕೊಂಡು
ಗಲೇಬೇಕಾಗುತ್ತೆ. ಮನೆ ಅಂದರೆ ಗಂಡನಿಗೆ ಕಿರಿಕಿರಿ
ಹಾಳಾದ ಹೆಂಡತಿ ತೆಪ್ಪಗಾದರೂ ಇರ್ತಾಳಾ? ಉಹುಂ.
'ಯಾಕ್ರಿ ಲೇಟು' ಅಂತ ದಿನಾ ಕೇಳಿದ್ದನ್ನೇ ಕೇಳ್ತಾಳೆ.
ೀ ಒಂದು ಉತ್ತರ ಹೇಳದೇ ವಿಧಿ ಇರಲ್ಲ. ಇವನು
ತ್ತಿರುವುದು ಸುಳ್ಳು ಅಂತ ಅವಳಿಗೂ ಗೊತ್ತು,
ೂ ಸುಮ್ಮನಿರುತ್ತಾಳೆ. ಹೇಗೋ ಕುರುಕಲು
ವಲ್ಲಿ ಜೀವನಬಂಡಿ ಸಾಗ್ತಾನೆ ಇರುತ್ತೆ.
ಂಸಾರದ ಈ ಗುಟ್ಟನ್ನು ಕೇಂದ್ರದ ಕಲ್ಲಿದ್ದಲು ಸಚಿವರು
ು ಕುಡಿದಿದ್ದರು. ಇಂತಹ ತಿಳುವಳಿಕಸ್ತರು ಯಾವುದೋ
ಕ್ರಮಕ್ಕೆ ಹೋಗಿದ್ದರಂತೆ. ಹೋಗಿಹೋಗಿ ಅವತ್ತು
ಗದೆ ಭಾರತ-ಪಾಕಿಸ್ತಾನ ಕ್ರಿಕೆಟ್ ಮ್ಯಾಚ್ ಅದೆ.
ರ ಗ್ರಹಚಾರವೋ ಏನೋ ಸಮಾರಂಭ
ಯುತ್ತಿದ್ದಾಗಲೇ ಭಾರತ ಗೆದ್ದ ಸುದ್ದಿ ಬಂದದೆ.
ೂ ಹಿತಕರವಾದ ಸುದ್ದಿ ಯಾವುದೂ ಇಲ್ಲವಲ್ಲಾ!
ೆಲ್ಲ ಸಭೆ ಮರೆತು ಗೆಲುವಿನ ಸಂಭ್ರಮ
ಕೊಳ್ಳುವುದರಲ್ಲಿ ತಲ್ಲೀನರಾದರು. ಅವರು ಆಡ್ತಿರೋದ
ತಿ ಸಚಿವರು ಅಯ್ಯೋ ಮುಂಡೇವ ಗೆಲ್ತು ಅಂತ
ಹಾರಾಡ್ತಿದೀರಲ್ಲ, ಹೊಸದಾಗಿ ಮದುವೆಯಾದ
ಹೆಂಡತಿ ಪೆವಿಕಾಲು ಹಾಕಿ ಅಂಟಿಸಿದಂಗೆ ಇರ್ತಾರೆ.
ಾಗುತ್ತಿದ್ದಂಗೆ ಇಬ್ಬರಿಗೂ ಹಳಸಿಕೊಳ್ಳುತ್ತೆ. ಯಾವ
ಮ ಆದರೂ ಅಷ್ಟೇಯ ಎಂದು ಮುಂತಾಗಿ
ನಲ್ಲೇ ಅಂದುಕೊಂಡರು. ಆದರೆ ಬಹಿರಂಗವಾಗಿ
ವಿನ ಸಂಭ್ರಮ ಹೊಸ ಗಂಡಹೆಂಡತಿ ಸಂಭ್ರಮಿಸಿದಂತೆ,
ಕಳೆದಂತೆ ಅದೂ ಹಳಸಲಾಗುತ್ತದೆ' ಅಂದರು.
ಮಾನ್ಯ ಮಂತ್ರಿಗಳು ಹೀಗೆ ಹೇಳಿ ಏನೋ
ಬಾರದ ಅಪರಾಧ ಮಾಡವ್ರೆ ಅಂತ ಮಹಿಳಾ
ಟನೆಗಳು ಹಾರಾಡ್ತಾ ಬಿದ್ದವೆ. 'ತಾಯಂದಿರಾ ನಾನು
ಹೇಳಿದ್ದು ತಪ್ಪಾಯ್ತು' ಅಂತ ಕ್ಷಮಾಪಣೆ
ೇಳಿಸಿದರೂ ಒಪ್ಪಲೊಲ್ಲೊ. ಸಂಗಾತಿ ಅತ್ಯವಶ್ಯಕ
ೋದೆ ಇಳಿವಯಸ್ಸಿನಲ್ಲಿ, ಆಗಲೇ ಅವರಲ್ಲಿ ಅನ್ಯೋನ್ಯತೆ,
ಹೆಚ್ಚಾಗೋದು. ಪವಿತ್ರವಾದ ವಿವಾಹ ಸಂಬಂಧವನ್ನು
ಗೆ ಹೋಲಿಸುವುದು ಸರಿಯಲ್ಲ, ಹಂಗೆ ಹಿಂಗೆ
ಾಡ್ತಾ ಬಿದ್ದವಂತೆ. ಇಂತ ಹುಚ್ಚನೋವನ್ನ ಏನು
ೇದು ಅಂತಾವ...

ರಾಜ್ ಕಪ್: ಸುದೀಪ್ ತಂಡ ಆಡುತ್ತಿಲ್ಲ





ನಾಲ್ಕು ವರ್ಷಗಳ ಹಿಂದೆ ಕನ್ನಡ ಚಿತ್ರರಂಗದ ಡ್ಯಾನ್ಸರ್ಸ್ ಅಸೋಸಿಯೇಷನ್ ಆರಂಭ ಮಾಡಿದ ರಾಜ್ ಕಪ್ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಈ ವರ್ಷ ಬಿರುಕು ಕಾಣಿಸಿಕೊಂಡಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಈ ಟೂರ್ನಮೆಂಟ್‌ನಲ್ಲಿ ಕನ್ನಡ ಸಿನಿಮಾ ಜಗತ್ತಿನ ಎಲ್ಲ ವರ್ಗದ ಜನ ತಮ್ಮೆಲ್ಲ ಭಿನಾಭಿಪ್ರಾಯಗಳನ್ನು ಮರೆತು **10-15** ದಿನ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕ್ರೀಡಾಸ್ಫೂರ್ತಿಯಿಂದ ಆಡಿದ್ದುಂಟು. ಹಾಗೆ ನೋಡಿದರೆ ಕ್ಯಾಮರಾ ತಂಡ, ಡ್ಯಾನ್ಸರ್ಸ್ ತಂಡ, ಸಂಕಲನಕಾರರ ತಂಡ, ನಿರ್ಮಾಪಕರ ಮತ್ತು ನಿರ್ದೇಶಕರ ತಂಡ, ಕಲಾವಿದರ, ಪತ್ರಕರ್ತರ ತಂಡ ಮತ್ತು ಫೈಟ್ ಮಾಸ್ಟರ್ಸ್ ತಂಡ ಹೀಗೆ ಬಣ್ಣದ ಲೋಕದ ಎಲ್ಲ ವಿಭಾಗದವರು ಕ್ರೀಡಾಕಲಿಗಳಂತೆ ಕ್ರಿಕೆಟ್ ಆಡುತ್ತಿದ್ದರು.

ಬರುವ **26** ರಿಂದ **28** ರವರೆಗೆ ಬಾಗಲಕೋಟೆ, ಬಿಜಾಪುರ ಮತ್ತು ಗುಲ್ಬರ್ಗದಲ್ಲಿ ಕ್ರಮವಾಗಿ ಮೂರು ದಿನ ಈ ಟೂರ್ನಮೆಂಟ್ ನಡೆಯಲಿದ್ದು, ಫೈನಲ್ಸ್ ಪಂದ್ಯ ಮಲೇಷಿಯಾದಲ್ಲಿ ನಡೆಯಲಿದೆ ಎಂದು ಘೋಷಿಸಲಾಗಿದೆ. ಆದರೂ ಈ ವರ್ಷ ಈ ಹಿಂದಿನಂತೆ ತಾರಾ ಲೋಕದ ಕ್ರೀಡಾಪಟುಗಳು ಅಷ್ಟೊಂದು ಲವಲವಿಕೆಯಿಂದ ಆಡುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ, ಸುದೀಪ್ ಮತ್ತವರ ತಂಡ ಈ ವರ್ಷದ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಭಾಗವಹಿಸದೇ ಇರುವುದು.

ವಾಸ್ತವವಾಗಿ ರಾಜ್ ಕಪ್ ಆರಂಭವಾಗಲು ಮುಖ್ಯ ಕಾರಣ ನಾಯಕ ನಟ ಸುದೀಪ್. ಹೇಗೆಂದರೆ ಮೊದಲ ವರ್ಷ ಡ್ಯಾನ್ಸರ್ಸ್ ತಂಡದವರು ಇಂತಹ ಒಂದು ಕ್ರಿಕೆಟ್ ಟೂರ್ನಮೆಂಟ್‌ನ ಪರಿಕಲ್ಪನೆಯನ್ನು ಮುಂದಿಟ್ಟಾಗ ಅದನ್ನು ಸಂಪೂರ್ಣವಾಗಿ ಬೆಂಬಲಿಸಿದ್ದು ಸುದೀಪ್. ಆದರೆ ಕಳೆದ ವರ್ಷ ಹುಬ್ಬಳ್ಳಿಯಲ್ಲಿ ನಡೆದ ರಾಜ್ ಕಪ್ ಟೂರ್ನಮೆಂಟ್‌ನಲ್ಲಿ ಶಿವರಾಜ್‌ಕುಮಾರ್ ಮತ್ತು ಸುದೀಪ್ ತಂಡದ ನಡುವೆ ಸಣ್ಣ ಮನಸ್ತಾಪ ಮೈದಾನದಲ್ಲಿ ನಡೆಯಿತು. ಅದು ಬಹುತೇಕ ಎಲ್ಲ ಚಾನಲ್‌ಗಳಲ್ಲಿ ಪ್ರಸಾರವಾಗಿ ಉದ್ಯಮದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದನ್ನು ಬಹಿರಂಗಪಡಿಸಿತ್ತು. ಆ ಒಂದು ಸಣ್ಣ ಮನಸ್ತಾಪವನ್ನು ಬಗೆಹರಿಸಲು ಇನ್ನೂ ಯಾರೂ ಸರಿಯಾಗಿ ಪ್ರಯತ್ನಿಸಿಲ್ಲ. ಈ ಕಾರಣದಿಂದಲೇ ಮನನೊಂದಿರುವ ಸುದೀಪ್ ಮತ್ತು ಅವರ ಬೆಟಾಲಿಯನ್ ಈ ಬಾರಿಯ ರಾಜ್ ಕಪ್ ಟೂರ್ನಮೆಂಟ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಘೋಷಿಸಿದೆ.

ಅಂದಹಾಗೆ, ಸುದೀಪ್ ಮತ್ತು ಶಿವರಾಜ್‌ಕುಮಾರ್ ತಂಡಗಳೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿರುವ ಸಚಿವ ರಾಜೂ ಗೌಡ ಇವರಿಬ್ಬರ ನಡುವಿನ ಮನಸ್ತಾಪವನ್ನು ಬಗೆಹರಿಸಲು ಪ್ರಯತ್ನಿಸುತ್ತಿದ್ದಾರೆ. ರಾಜ್ ಕಪ್ ಆರಂಭವಾದ ದಿನದಿಂದಲೂ ಕ್ರಿಕೆಟ್ ಆಡುತ್ತಿರುವ ಸಚಿವ ರಾಜೂ ಗೌಡ ಅವರ ಸಂಧಾನ ಪ್ರಯತ್ನ ಸಫಲವಾದಲ್ಲಿ ಮತ್ತೆ ರಾಜ್ ಕಪ್ ಕ್ರಿಕೆಟ್ ಟೂರ್ನಮೆಂಟ್‌ಗೆ ಹಿಂದಿನ ವೈಭವ ಮರುಕಳಿಸಬಹುದು.

ಬರುತ್ತಿದ್ದಾನೆ ಕ್ರಾಂತಿವೀರ

ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಅತ್ಯಂತ ಅದ್ದೂರಿ ಸಿನಿಮಾ ಎನಿಸಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಮುಂದಿನ ವಾರ ತೆರೆ ಕಾಣಲಿದೆ.

ಕನ್ನಡ ರಾಜ್ಯೋತ್ಸವ ಹಬ್ಬದ ಮುನ್ನಾದಿನ ಇಂತಹ ಈ ಚಿತ್ರ ಬಿಡುಗಡೆಯಾಗುತ್ತಿರುವುದು ನಿಜಕ್ಕೂ ಸಂತೋಷದ ವಿಷಯ. ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮತ್ತು ಬ್ರಿಟಿಷರ ವಿರುದ್ಧ ಹೋರಾಡಿದ ಕನ್ನಡಿಗ ದೇಶಾಭಿಮಾನಿಯೊಬ್ಬನನ್ನು ಕುರಿತ ಚಿತ್ರವನ್ನು ಬಿಡುಗಡೆ ಮಾಡಲು ರಾಜ್ಯೋತ್ಸವಕ್ಕಿಂತ ಸೂಕ್ತವಾದ ಸಂದರ್ಭ ಬೇರಾವುದಿದೆ? ಹಾಗೆಯೇ ದುಷ್ಟರ ಸಂಹಾರದ ಹಬ್ಬವಾದ 'ದಸರಾ' ಸಂದರ್ಭದಲ್ಲೇ ಈ ಚಿತ್ರ ಬಿಡುಗಡೆ ಆಗುತ್ತಿರುವುದೂ ಸೂಕ್ತ ಎಂದು ಹೇಳಬಹುದು.

• ಶೆಣೈ



ುವಾಡ ಕೊಟ್ಟಿದ್ದಾರೆ. ಈಗ ಪಶ್ಚಿಮ ಘಟ್ಟವನ್ನು
ಪರಂಪರೆ ಸಾಲಿಗೆ ಸೇರಿಸಿದ್ದು ಈ ಜಿಲ್ಲೆಯ
ಕಾರಣಿಗಳಿಗೆ ತಮ್ಮ ವಿಫಲತೆಯನ್ನು ಮರೆಮಾಚಲು
ೊಂದು ಸುವರ್ಣಾವಕಾಶವಾಗಿದೆ.
ಪರಿಸರಕ್ಕೆ ಪೂರಕವಾದ ಉದ್ದಿಮೆಗಳು ಬೇಕೆನ್ನುವ
ಸರವಾದಿಗಳ ವಾದದಲ್ಲಿ ಅರ್ಥವಿಲ್ಲದಿಲ್ಲ. ಆದರೆ ಆ
ಮೆಗಳು ಯಾವುವು, ಅವು ಎಷ್ಟರ ಮಟ್ಟಿಗೆ ಜಿಲ್ಲೆಯ
ವಂತ ನಿರುದ್ಯೋಗಿಗಳ ಹಸಿವನ್ನು ನೀಗಬಲ್ಲವು
ವದನ್ನು ಯಾರೂ ಈವರೆಗೆ ವಿವರಿಸಿಲ್ಲ. ತಮ್ಮ
ಳನ್ನು ಶಿಕ್ಷಣಕ್ಕೆ, ಉದ್ಯೋಗಕ್ಕೆ ಮಹಾ ನಗರಗಳಿಗೆ
ುತ್ತಾ ಇನ್ನೊಬ್ಬರ ಮಕ್ಕಳಿಗೆ ಪರಿಸರ ಸಂಬಂಧದ
ದ್ಯೋಗ ಮಾಡಿಕೊಂಡು ಜಿಲ್ಲೆಯಲ್ಲೇ ಇರುವಂತೆ
ವವರೂ ಇಲ್ಲಿದ್ದಾರೆ. ಪಕ್ಕದ ಕಾಡಿನಿಂದ ಉಪ್ಪಾರಿಗೆ
ಹೆಕ್ಕಿ ತನ್ನಿ, ಜೇನು ವ್ಯವಸಾಯ ಮಾಡಿ, ಹೈನುಗಾರಿಕೆ
ಿ ಎಂದು ಸಲಹೆ ಕೊಡುವರು ಇಲ್ಲಿ ಧಾರಾಳವಾಗಿ
ತ್ತಾರೆ.
ಪ್ರತಿವರ್ಷ ನಡೆಯುವ ಜಿಲ್ಲಾ ಅಭಿವೃದ್ಧಿ ಸಮ್ಮೇಳನದಲ್ಲಿ
ರಕ್ಕೆ ಪೂರಕವಾದ ಉದ್ಯಮವನ್ನು ಜಿಲ್ಲೆಯಲ್ಲಿ
ಸಬೇಕೆನ್ನುವ ಹಳೆಯ ನಿರ್ಣಯವನ್ನೇ ಪುನಃ
ೀಕರಿಸಲಾಗುತ್ತದೆ. ಈ ಜಿಲ್ಲೆಯ ಅಭಿವೃದ್ಧಿಯ ನಗ್ನ
ನೋಡಬೇಕಿದ್ದರೆ ಸಿರ್ಸಿ ನಗರದ ಬಸ್ ನಿಲ್ದಾಣ
ೇ ಸಾಕು. ಕಳೆದ ಮೂರು ದಶಕದಿಂದ ಅಲ್ಲೋ
ಎನ್ನುವಗೊಂದಲದಲ್ಲಿದೆ. ಮೇಲ್ಮಟ್ಟದಲ್ಲಿ
ುವ ವಿಮಾನಗಳು ಸ್ವಲ್ಪ ಕೆಳಮಟ್ಟಕ್ಕೆ ಹಾರಿದರೆ
ವುದೋ ಹೊಸ ಉದ್ದಿಮೆಗೆ ಸರ್ವೆ ನಡೆಯುತ್ತಿದೆ
ು ಅರ್ಜೆನ್ಸಿ ಚಳವಳಿ, ಪ್ರತಿಭಟನೆ, ಮಾನವ ಸರಪಳಿಗೆ
ೋದಿಸುವ ಕುಚೋದ್ಯ ಪ್ರಿಯರಿಗೆ ಇಲ್ಲಿ ಕೊರತೆ
ಎನ್ನುವ ಟೀಕೆಯಲ್ಲಿ ಅರ್ಥವಿಲ್ಲದಿಲ್ಲ. ಕೈಗಾ,
ರ್, ಹುಬ್ಬಳ್ಳಿ-ಅಂಕೋಲಾ ರೈಲು, ತದಡಿ ಬಂದರು,
ಕೋಲಾ ವಿದ್ಯುತ್, ಗೋಕರ್ಣ ವಿಮಾನ ನಿಲ್ದಾಣ
ೀಧಿ ಚಳವಳಿ... ಇಂಥ ಚಳವಳಿಗೆ ಇಲ್ಲಿ ಲೆಕ್ಕವಿಲ್ಲ.
ರೈಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾದ ಹಾವೇರಿ-ಸಿರ್ಸಿ
ಮಾರ್ಗಕ್ಕೆ ಈಗಾಗಲೇ ನ್ಯಾಯಾಲಯಕ್ಕೆ ಹೋಗುವ
ಕೊಡಲಾಗಿದೆ. ಪರಿಸರವಾದಿಗಳ ನೆರಳಿನಲ್ಲಿಯೇ
ಯುತ್ತಿರುವ ಕಾಡುಗಳ್ಳತನ, ಭೂ ಅತಿಕ್ರಮಣ,
ಕೋಲಾ-ಹುಬ್ಬಳ್ಳಿ ಮತ್ತು ಬೆಳಗಾವಿ-ಗೋವಾ ರಸ್ತೆ
ೀಕರಣಕ್ಕೆ ಸಡೆಯುವ ಮರಗಳ ಮಾರಣ ಹೋಮಕ್ಕೆ
ಪ್ರತಿಭಟನೆ ಇಲ್ಲ. ಈ ಜಿಲ್ಲೆಯಲ್ಲಿ ಮೆಡಿಕಲ್,

ಇಂಜಿನೀಯರಿಂಗ್ ಕಾಲೇಜು ಸ್ಥಾಪಿಸಿ, ಐಟಿ ಪಾರ್ಕ್ ಆರಂಭಿಸಿ, ಹೊಸ ರೈಲು ಮಾರ್ಗ, ವಿಮಾನ ನಿಲ್ದಾಣ ನಿರ್ಮಿಸಿ ಎಂದು ಯಾರೂ ಬೊಬ್ಬೆ ಇಡಲಿಲ್ಲ. ಯಾವ ಮಠಾಧೀಶರೂ, ರಾಜಕಾರಣಿಗಳೂ ಈ ಬಗ್ಗೆ ತುಟಿ ಪಿಟಿಕ್ ಮಾಡುವದಿಲ್ಲ. (ಕೊಟ್ಟೂರು-ಹರಿಹರ ರೈಲು ಮಾರ್ಗವನ್ನು ಕೂಡಲೇ ಆರಂಭಿಸಿ ಎಂದು ಇತ್ತೀಚೆಗೆ ಹರಿಹರದಲ್ಲಿ ಸ್ವಾಮಿಗಳೊಬ್ಬರು ಪ್ರತಿಭಟನೆ ಮಾಡಿದ್ದರು). ಮಂಗಳೂರಿನಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆ ಆರಂಭಿಸಿದಾಗ, ಹಾಸನ-ಮಂಗಳೂರು ಮಧ್ಯೆ ದಟ್ಟಡವಿಯ ನಡುವೆ ರೈಲು ಮಾರ್ಗ ನಿರ್ಮಿಸಿದಾಗ ಯಾರೂ ವಿರೋಧಿಸಲಿಲ್ಲ. ಆದರೆ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗಕ್ಕೆ ಕೆಂಪು ನಿಶಾನೆ ತೋರಿಸಲಾಯಿತು.

ಈ ಜಿಲ್ಲೆಯ ಶತಕದ ಕನಸಾದ ಹುಬ್ಬಳ್ಳಿ-ಅಂಕೋಲಾ ರೈಲನ್ನು ಪರಿಸರವಾದಿಗಳು ತಡೆಹಿಡಿದಾಗ ಜಿಲ್ಲೆಯಲ್ಲಿ ಸಂಭ್ರಮದ ವಾತಾವರಣವಿತ್ತು, ಮಾಧ್ಯಮ ಕೂಡಾ ಇದನ್ನು ಹೊಗಳಿ ಬರೆಯಿತು. ಈ ಮಾರ್ಗದ ಉಪಯುಕ್ತತೆಯ ಬಗೆಗೆ, ದೂರಗಾಮಿ ಅವಶ್ಯಕತೆ, ಅಗತ್ಯತೆ ಬಗೆಗೆ ಮಾಧ್ಯಮ ಬರೆಯುವ ಪ್ರಯತ್ನ ಮಾಡಲಿಲ್ಲ. ಈ ಜಿಲ್ಲೆಯ ಸಂಸದರು ಒಂದೆರಡು ಹೇಳಿಕೆಯನ್ನು ತೇಲಿಬಿಟ್ಟರೇ ವಿನಃ ಇನ್ನೇನನ್ನೂ ಮಾಡಿಲ್ಲ. ಈ ಯೋಜನೆಯ ಬಗೆಗೆ ಈವರೆಗೆ ಇವರು ಮಾಡಿದ ಪ್ರಯತ್ನವೇನು? ಈ ಯೋಜನೆ ಈಗ ಯಾವ ಹಂತದಲ್ಲಿದೆ? ಈ ಬಗೆಗೆ ಇವರು ಸ್ಪಷ್ಟವಾಗಿ ವಿವರಿಸಿದ ದಾಖಲೆ ಇಲ್ಲ. ಅವರು ಮೊದಲ ಬಾರಿ ಆಯ್ಕೆಯಾದಾಗಲೇ ಪ್ರಯತ್ನಿಸಿದ್ದರೆ ಈಗ ಈ ಮಾರ್ಗವನ್ನು ದ್ವಿಪಥದ ಬೇಡಿಕೆಯಲ್ಲಿ ಇರಿಸಬಹುದಿತ್ತು. ಈ ಜಿಲ್ಲೆಯ ಸಚಿವರಂತೂ ಈ ವಿಚಾರವಾಗಿ ಒಂದೇ ಒಂದು ಮಾತನ್ನಾಡಿದ ದಾಖಲೆಗಳಿಲ್ಲ. ತಮಗೂ ಈ ಯೋಜನೆಗೂ ಸಂಬಧವಿಲ್ಲದಂತೆ ಮೌನವಾಗಿದ್ದಾರೆ. ಇತ್ತೀಚೆಗೆ ಹತ್ತು ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ಚಿಂತನೆ ನಡೆದಿದೆ ಎನ್ನುವ ಪತ್ರಿಕಾ ವರದಿ ಇದ್ದು, ಈ ಪಟ್ಟಿಯಲ್ಲಿ ಈ ಜಿಲ್ಲೆಯ ಹೆಸರಿಲ್ಲವೆನ್ನುವ ವದಂತಿ ಇದೆ.

ವಿಸ್ಮಯವೆಂದರೆ ಬೆಂಗಳೂರು ಮಾಧ್ಯಮಕ್ಕೆ ಈ ಜಿಲ್ಲೆಯ ಪರಿಚಯವೇ ಇಲ್ಲ, ಅವರ ಪ್ರಕಾರ ಕರಾವಳಿ ಎಂದರೆ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳು, ಶಿವಮೊಗ್ಗ ಜಿಲ್ಲೆಯವರೆಗೆ ಮಲೆನಾಡು, ಹಾವೇರಿಯವರೆಗೆ ಬಯಲು ನಾಡು. ಈ ಜಿಲ್ಲೆಯ ಮಂತ್ರಿಗಳನ್ನು ಬಿಟ್ಟರೆ ಬೇರೆ ಮಂತ್ರಿಗಳ ಭೇಟಿ ಅಪರೂಪ. ಸ್ಥಳೀಯ ಮಾಧ್ಯಮದ ಪ್ರಕಾರ ಕರ್ನಾಟಕದ ೧೬ ಮಂತ್ರಿಗಳು ಈ ಜಿಲ್ಲೆಗೆ ಭೇಟಿ ನೀಡಿಲ್ಲ. ಉನ್ನತ ಸರ್ಕಾರಿ ಉದ್ಯೋಗಿಗಳು ವರ್ಗಾವಣೆ ಮೇಲೆ ಇಲ್ಲಿಗೆ ಬರುವುದಿಲ್ಲ. ಬಂದರೂ ಬಹುಬೇಗ ಬದಲಾಗಿ ಹೋಗುತ್ತಾರೆ. ದಶಕಗಳ ಹಿಂದೆ ಇದು ಮಲೇರಿಯಾ ಜಿಲ್ಲೆ ಎಂದು ಯಾರೂ ಬರುತ್ತಿರಲಿಲ್ಲ. ಈಗ ಬಹುಶಃ ರೈಲು, ರಸ್ತೆ ಶಿಕ್ಷಣ ಕೇಂದ್ರ ಹಾಗೂ ಇನ್ನಿತರ ನಾಗರಿಕ ಮತ್ತು ಆಧುನಿಕ ಸೌಲಭ್ಯಗಳ ಕೊರತೆಗಾಗಿ ಬರುವುದಿಲ್ಲವೇನೋ? ಮಾಧ್ಯಮದಲ್ಲಿ ಈ ಜಿಲ್ಲೆಯ ಸುದ್ದಿಗಳು, ಪರಿಸರ, ಅಡಿಕೆ ದರ, ಸಹಕಾರಿ ಸಂಘಗಳು, ಜೀವ ವೈವಿಧ್ಯ, ಜಲಪಾತ, ಹಳ್ಳ-ಹೊಳ್ಳಗಳು ಮತ್ತು ಕ್ಷುಲ್ಲಕ ರಾಜಕೀಯಕ್ಕೆ ಮಾತ್ರ ಸೀಮಿತ. ಈ ಜಿಲ್ಲೆಯ ಇಂದಿನ ಮತ್ತು ಮುಂದಿನ ಪೀಳಿಗೆಯ ಬದುಕಿಗೆ ಏನು ಬೇಕು ಎನ್ನುವದರ ಬಗೆಗೆ ಮಾಧ್ಯಮದಲ್ಲಿ ಭೂತಗನ್ನಡಿ ಹಾಕಿ ಹುಡುಕಬೇಕು. ಈ ಜಿಲ್ಲೆಯನ್ನು ಪರಿಸರವಾದಿಗಳ ರಿಪಬ್ಲಿಕ್ ಎಂದು ಕೆಲವರು ತಮಾಷೆ ಮಾಡುತ್ತಾರೆ.


ಈ ಜಿಲ್ಲೆಯಲ್ಲಿ ಮುಂದಿನ ಪೀಳಿಗೆ ಜಿಲ್ಲೆಯ ಇಂದಿನ ರಾಜಕೀಯ ಧುರೀಣತ್ವವನ್ನು, ಜನ ಪ್ರತಿನಿಧಿಗಳನ್ನು ಶಪಿಸದಿರುವಂತೆ ಮಾಡಲು, ಅವರು ಬಿಹಾರಿಗಳಂತೆ-ಈಶಾನ್ಯ ಭಾರತೀಯರಂತೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಹೊರಕ್ಕೆ ವಲಸೆ ಹೋಗದಂತೆ ತಡೆಯಲು ರಾಜಕೀಯ ಧುರೀಣತ್ವ, ಮಠಾಧಿಪತಿಗಳು, ಪರಿಸರವಾದಿಗಳು, ಉದ್ದಿಮೆದಾರರು, ವ್ಯವಹಾರಸ್ಥರು ಮತ್ತು ಮಾಧ್ಯಮದವರು ಪ್ರಯತ್ನಿಸಬೇಕು. ಇಲ್ಲಿನ ಜನರಿಗೆ ಬದುಕನ್ನು ಕೊಡುವಂಥ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ನೆರವಾಗುವಂತಹ ರೈಲು, ರಸ್ತೆ, ಕಾಲೇಜು, ಸಾಫ್ಟ್‌ವೇರ್ ಪಾರ್ಕ್‌ಗಾಗಿ ಕಾರ್ಯ ಸೂಚಿ ಪಡೆಯನ್ನು ರಚಿಸಿ ಹೋರಾಡ ಬೇಕಾಗಿದೆ. ಜಿಲ್ಲೆಯ ಚೇಂಬರ್ ಆಫ್ ಕಾಮರ್ಸ್ ಹುಬ್ಬಳ್ಳಿ, ಮಂಗಳೂರು, ಬೆಂಗಳೂರು ಚೇಂಬರ್ ಆಫ್ ಕಾಮರ್ಸ್‌ನಂತೆ ಹೆಚ್ಚು ಕಾರ್ಯಶೀಲವಾಗಬೇಕು. ಇಲ್ಲದಿದ್ದರೆ ಮುಂದಿನ ಪೀಳಿಗೆ ಅಡಕೆ ಮರದ ಚಂಡೆಗೋ, ತಕ್ಕಡಿಯ ಕೊಂಗೋಮ್ ಅಥವಾ ಮೀನಿನ ಬಲೆಯಲ್ಲೋ ಸಿಲುಕಿ ಒದ್ದಾಡಬೇಕು. ಈ ಜಿಲ್ಲೆಯಲ್ಲಿ ಸದಾ ಕಾಣುವ 'ಬೇಡ' ಚಳವಳಿ ಇನ್ನು ಮುಂದೆ 'ಬೇಕು' ಚಳವಳಿಯಾಗಿ ಮಾರ್ಪಾಡಾದಾಗಲೇ ಈ ಜಿಲ್ಲೆಯ ಅಭಿವೃದ್ಧಿ ಸಾಧ್ಯ.

- ಡಾ. ಅನಿಕೇತ್ ಶರ್ಮಾ, ಬೆಂಗಳೂರು

ಹೊಗಳಿಕೆ ತೆಗಳಿಕೆ

ಕೃಷ್ಣಜನ್ಮಾಷ್ಟಮಿಯನ್ನು ಆಚರಿಸುತ್ತಿದ್ದ. ಆದರೆ ಹಿಂದೂ ಅರಸನೊಬ್ಬನ ಅರಮನೆಯಲ್ಲಿ ಈದ್ ಮಿಲಾದ್ ಅಂಗವಾಗಿ ಖವ್ವಾಲಿ ಏರ್ಪಡಿಸಲಾಗುತ್ತಿತ್ತು ಎಂದು ಎಲ್ಲಾದರೂ ದಾಖಲೆ ಇದೆಯೋ ತಿಳಿಯದು. ಯಾಕೆಂದರೆ ಕುಲ ಪುರೋಹಿತನಿಗೆ ಅರಮನೆ ಮೈಲಿಗೆ ಆಗಬಾರದಿತ್ತು. ರಾಜ ಪ್ರತ್ಯಕ್ಷ ದೈವ ಅಲ್ಲವೇ?

- ರವಿಕುಮಾರ್, ಹಾಸನ



ರಾಧಿಕಾ ಮತ್ತು ಕುಮಾರಸ್ವಾಮಿಯದ್ದು ಕಾನೂನು ಬಾಹಿರ ಸಂಬಂಧ. ದರ್ಶನ್ ಹೆಂಡತಿ ವಿಜಯಲಕ್ಷ್ಮಿಯಂತೆ ಕುಮಾರಸ್ವಾಮಿ ಅವರ ಹೆಂಡತಿ ಅನಿತಾ ದುಡುಕಿದಿದ್ದರೆ ಕುಮ್ಮಿಯ ಪಾಡು ನಾಯಿ ಪಾಡಾಗುತ್ತಿತ್ತು.

ಸುದೀಪನ ಗೆಳೆತನವನ್ನು ಕಳೆದುಕೊಳ್ಳದಿರು ದರ್ಶನ್. ಯಾಕೆಂದರೆ ಗಾಂಧಿನಗರದ ಹದ್ದು-ಕಾಗೆಗಳು ನಿನ್ನನ್ನು ಕುಕ್ಕಿ ತಿಂದುಬಿಡುತ್ತವೆ. ಎಚ್ಚರವಾಗಿರು.

- ದರ್ಶನ್ ಅಭಿಮಾನಿ ಕಸ್ತೂರಿ.
ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ [illegible]ಗಳನ್ನು
lankesh70@rediffmail.com ಗೆ
ನುಡಿ ಅಥವಾ ಬರಹ ತಂತ್ರಾಂಶದಲ್ಲಿ [illegible]
ನಿಮ್ಮ [illegible]ಗಳನ್ನು 9980331427
ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ [illegible]

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 07-11-2012

ಮತ್ತೊಮ್ಮೆ 'ಪುಷ್ಪಕ ವಿಮಾನ'



'ಪುಷ್ಪಕ ವಿಮಾನ' ಸಿನಿಮಾ ಬಿಡುಗಡೆಗೊಂಡು ಅಕ್ಟೋಬರ್ 9 ಕ್ಕೆ 25 ವರ್ಷಗಳಾದವು. ಈಗ ಮತ್ತೊಮ್ಮೆ ಆ ಸಿನಿಮಾವನ್ನು ಮಾಡುವ ಸುದ್ದಿ ಕೇಳಿಬರುತ್ತಿದೆ.

ಸಿಂಗೀತಂ ಶ್ರೀನಿವಾಸ್ ನಿರ್ದೇಶನದ, ಶೃಂಗಾರ್ ನಾಗರಾಜ್ ನಿರ್ಮಾಣದ, ಕಮಲಹಾಸನ್ ಮತ್ತು ಅಮಲಾ ನಾಯಕ-ನಾಯಕಿಯಾಗಿ ನಟಿಸಿದ್ದ ಮಾತಿಲ್ಲದ ಚಿತ್ರ 'ಪುಷ್ಪಕ ವಿಮಾನ' ಭಾರತೀಯ ಚಿತ್ರರಂಗದಲ್ಲಿ ಇತಿಹಾಸ ನಿರ್ಮಿಸಿತ್ತು. ಮೂಕಿ ಚಿತ್ರದ ಕಾಲ ಮುಗಿದು ಟಾಕಿ ದುನಿಯಾದಲ್ಲಿ ಮಾತೇ ಬಂಡವಾಳವಾಗಿದ್ದ ಸಂದರ್ಭದಲ್ಲಿ ಇಂತಹ ಒಂದು ಮೂಕಿ ಚಿತ್ರವನ್ನು ನಿರ್ಮಿಸಿ ದಾಖಲೆ ಮಾಡಿದವರು ಕನ್ನಡಿಗರಾದ ನಿರ್ಮಾಪಕ ಶೃಂಗಾರ್ ನಾಗರಾಜ್. ಮಾತಿಲ್ಲದ ಈ ಚಿತ್ರದಲ್ಲಿ ಕಮಲಹಾಸನ್ ಮತ್ತು ಅಮಲಾ ಕಣ್ಣಲ್ಲೇ ಮಾತನಾಡಿ ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದರು. ಅಬ್ಬರದ ಜಮಾನದಲ್ಲಿಯೂ ಈ ಮೌನ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿಯಾಗಿ ಜಯಭೇರಿ ಬಾರಿಸಿತ್ತು. ಮೊನ್ನೆ ಹೈದರಾಬಾದಿನ ಟಾಕಿ ಸಂಸ್ಥೆ ಮತ್ತೊಮ್ಮೆ 'ಪುಷ್ಪಕ ವಿಮಾನ' ಹೆಸರನ್ನು ರಿಜಿಸ್ಟರ್ ಮಾಡಿದೆ. ಸದ್ಯದಲ್ಲೇ ಹಳೆಯ 'ಪುಷ್ಪಕ ವಿಮಾನ'ದ ಮಾದರಿಯಲ್ಲೇ ಒಂದು ಮೂಕಿ ಚಿತ್ರವನ್ನು ಮತ್ತೆ ತೆರೆಗೆ ತರುವ ಆಲೋಚನೆ ಆ ಸಂಸ್ಥೆಯದ್ದು. ಇದರ ಚಿತ್ರೀಕರಣವೆಲ್ಲ ಬೆಂಗಳೂರಿನಲ್ಲೇ ನಡೆಯಲಿದೆಯಂತೆ. ಆದರೆ ಚಿತ್ರದ ತಾರಾಗಣ ಮತ್ತು ನಿರ್ದೇಶಕರ ಹೆಸರನ್ನು ಆ ಸಂಸ್ಥೆಯವರು ಇನ್ನೂ ಬಹಿರಂಗಪಡಿಸಿಲ್ಲ.

25 ವರ್ಷಗಳ ನಂತರ ಭಾರತೀಯ ಚಿತ್ರರಂಗದ ಒಂದು ಮಹೋನ್ನತ ಕೃತಿ ಈಗ ಮತ್ತೊಂದು ಕೃತಿಗೆ ಸ್ಫೂರ್ತಿಯಾಗುತ್ತಿರುವುದು ವಿಶೇಷವೇ ಸರಿ. •



'ಗೋಕುಲ ಕೃಷ್ಣ' ಅನನ್ಯ

ಅಂಬೆಗಾಲಿಡುತ್ತಿರುವ ಕಲ್ಯಾಣ್




ಸಂಗೀತ ನಿರ್ದೇಶಕ ಕಲ್ಯಾಣ್ ನಿರ್ದೇಶನದ 'ಅಂಬೆಗಾಲು' ಚಿತ್ರ ಇಷ್ಟೊತ್ತಿಗೆ ಆರಂಭವಾಗಬೇಕಿತ್ತು, ಆದರೆ ಚಿತ್ರದ ಶೀರ್ಷಿಕೆಯಂತೆ ಕಲ್ಯಾಣ್ ಅಂಬೆಗಾಲಿಡುತ್ತ ನಿರ್ದೇಶನದ ಕೆಲಸ ಆರಂಭಿಸಿದ್ದಾರೆ. ಈಗಾಗಲೇ ಹಾಡುಗಳ ಕಂಪೋಸಿಂಗ್ ಸಂಪೂರ್ಣಗೊಂಡಿದ್ದರೂ ಚಿತ್ರ ಆರಂಭವಾಗುವುದಕ್ಕೆ ಇನ್ನೂ ಬಹಳಷ್ಟು ಸಮಯ ಬೇಕಿದೆ ಎಂಬ ಮಾತು ಕೇಳಿಬಂದಿದೆ.

'ಅಂಬೆಗಾಲು' ಚಿತ್ರವನ್ನು ನಿರ್ಮಿಸಬೇಕಿದ್ದ ಶ್ರೀನಿವಾಸ್ ಈಗಾಗಲೇ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಅಂಗುಲಿಮಾಲ' ಚಿತ್ರವನ್ನು ಆರಂಭಿಸಿದ್ದಾರೆ. ಈ ಹಿಂದೆ ಮೂರು ಚಿತ್ರಗಳನ್ನು ಏಕಕಾಲದಲ್ಲಿ ಆರಂಭಿಸ... ಎಂದು ಹೇಳಿದ್ದ ಶ್ರೀನಿವಾಸ್ ಅವರು ಬರಗೂರರ ಕಲಾತ್ಮಕ ಚಿತ್ರವನ್ನು ಪ್ರಾರಂಭಿಸಿದ್ದಾ... ಹೊರತು ಉಳಿದ ಸಿನಿಮಾಗಳ ಬಗ್ಗೆ ಏನೂ ಹೇಳಿಲ್ಲ, ಹಲವರ ಪ್ರಕಾರ ಮುಂದಿನ ವ... ಆರಂಭದಲ್ಲಿ ಶ್ರೀನಿವಾಸ್ ಅವರು ಎರಡು ಕಮರ್ಷಿಯಲ್ ಚಿತ್ರಗಳನ್ನು ಶುರುಮಾಡಲಿದ್ದಾ...

ಶ್ರೀನಿವಾಸ್ ನಿರ್ಮಾಣದಲ್ಲಿ ಹೊಸಬರಿಗೆ ಅವಕಾಶ ಸಿಗುತ್ತಿರುವುದು, ಅದರಲ್ಲೂ ... ಹಲವಾರು ವರ್ಷಗಳಿಂದ ನಿರ್ದೇಶಕನಾಗಬೇಕೆಂಬ ಕನಸು ಕಾಣುತ್ತಿದ್ದ ಸಂಗೀತ ನಿದೇ... ಕಲ್ಯಾಣ್‌ಗೆ ಅವಕಾಶ ನೀಡಿರುವುದು ನಿಜಕ್ಕೂ ಸ್ವಾಗತಾರ್ಹ.

ಮೂಲತಃ ಮೃದುಜೀವಿ ಮತ್ತು ಭಾವಜೀವಿಯಾದ ಕಲ್ಯಾಣ್ ತನ್ನ ಸಿನಿ... ಕಥೆ-ಚಿತ್ರಕಥೆ, ಸಂಭಾಷಣೆ, ಸಂಗೀತ ನಿರ್ದೇಶನ, ಗೀತರಚನೆ ಮತ್ತು ನಿರ್ದೇಶನ ... ಎಲ್ಲಾ ಜವಾಬ್ದಾರಿಯನ್ನೂ ಹೆಗಲಿಗೇರಿಸಿಕೊಂಡಿದ್ದಾರೆ. ಕಲ್ಯಾಣ್ ಅವರ ನಿರ್ದೇ... ಮೊದಲ ಸಾಹಸಕ್ಕೆ ನಮ್ಮ ಶುಭ ನುಡಿಗಳು.

ಸಿನಿಮಾರಂಗಕ್ಕೆ ಕಾರಂತ್



ರಮೇಶ್ ಅರವಿಂದ್ ಇತ್ತೀಚೆಗೆ ನಟನಾಗಿ, ನಿರ್ದೇಶಕನಾಗಿ ತನ್ನ ಪಾಪ್ಯೂಲಾರಿಟಿಯನ್ನು ಕಳೆದು ಕೊಂಡಿದ್ದರೂ ಅವರಿಗೆ ಗಾಂಧಿನಗರದಲ್ಲಿ ಬೇಡಿಕೆಯೇನೂ ಕಡಿಮೆಯಾಗಿಲ್ಲ.

ಸದ್ಯಕ್ಕೆ, ಸಂದೇಶ್ ನಾಗರಾಜ್ ಅವರ ನಿರ್ಮಾಣದ ಚಿತ್ರವೊಂದರಲ್ಲಿ ಸದ್ದುಗದ್ದಲವಿಲ್ಲದೆ ರಮೇಶ್ ನಾಯಕ ನಟನಾಗಿ ನಟಿಸುತ್ತಿದ್ದಾರೆ. ಈ ಚಿತ್ರವನ್ನು ಅವರ ... ರಾಜೇಂದ್ರ ಕಾರಂತ್ ನಿರ್ದೇಶಿಸುತ್ತಿದ್ದಾರೆ. ಈ ರಾಜೇಂದ್ರ ಕಾ... ಮೂಲತಃ ರಂಗಭೂಮಿಯವರು. ಸಿನಿಮಾದಲ್ಲಿ ಅಲ್ಲೊಂದು, ಇಲ್ಲೊಂ... ಚಿತ್ರಗಳಲ್ಲಿ ಪಾತ್ರ ಮಾಡುವುದರ ಜೊತೆಜೊತೆಗೆ ಕೆಲವು ಚಿತ್ರಗಳಿಗೆ ಸಂಭಾ... ಮತ್ತು ಚಿತ್ರಕಥೆಯನ್ನೂ ಬರೆದಿದ್ದಾರೆ. ಮುಖ್ಯವಾಗಿ ರಮೇಶ್ ನಿರ್ದೇ... ಚಿತ್ರಗಳಲ್ಲಿ ಕಾರಂತ್‌ರವರ ಕೈಚಳಕ ಇದ್ದೇ ಇರುತ್ತಿತ್ತು. ಕೆಲವು ಚಿತ್ರ...





ಖಳನಾಯಕನಾಗಿಯೂ ಒಳ್ಳೆಯ ಅಭಿನಯ... ನೀಡಿರುವ ಕಾರಂತ್ ಇದೇ ಮೊದಲ ... ನಿರ್ದೇಶಕರಾಗುತ್ತಿದ್ದಾರೆ. ಸಾಧಾರಣ... ರಂಗಭೂಮಿ ಕಲಾವಿದರಿಗೆ ಕಮರ್ಷಿ... ಚಿತ್ರಗಳನ್ನು ಮಾಡುವುದು ಕಷ್ಟದ ... ಎಂಬುದು ಗಾಂಧಿನಗರದ ಜನರ ಅ... ಈ ಹಿನ್ನೆಲೆಯಲ್ಲಿ ಕಾರಂತ್‌ರ ಪ್ರ... ಒಂದು ವೇದಿಕೆಯನ್ನು ನಿರ್ಮಿಸಿ... ಸಂದೇಶ್ ನಾಗರಾಜ್ ಮತ್ತು ರ... ಅವರಿಗೆ ಅಭಿನಂದನೆ ಹೇಳಬೇ...

• ಶ...

ಪ್ರೇಕ್ಷಕರನ್ನು ವಂಚಿಸಿದ 'ಮಿಸ್ಟರ್ 420'

'ಮಿಸ್ಟರ್ 420' ಎಂಬ ಚಿತ್ರ ಕಳೆದ ವಾರ ಬಿಡುಗಡೆಯಾಗಿದೆ. ಇದು ಸಂದೇಶ್ ನಾಗರಾಜ್ ನಿರ್ಮಾಣದ, ಗೋಲ್ಡನ್ ಸ್ಟಾರ್ ಗಣೇಶ್ ನಟಿಸಿರುವ ಚಿತ್ರ. ಈಗ ಸೋಲಿನ ಸರಪಳಿಯಲ್ಲಿ ಸಿಲುಕಿಕೊಂಡಿರುವ ಗಣೇಶ್‌ಗೆ ಈ ಚಿತ್ರ ಬ್ರೇಕ್ ನೀಡಬಹುದು ಎಂಬ ನಿರೀಕ್ಷೆಯಿತ್ತು.

ಆದರೆ ಈ ಚಿತ್ರದ ಮೊದಲಾರ್ಧದಲ್ಲಿ ಹಾಸ್ಯದ ಸನ್ನಿವೇಶಗಳು ಪೂರಕವಾಗಿ ಕಾಣಿಸಿಕೊಂಡಿದ್ದರೂ ದ್ವಿತಿಯಾರ್ಧ ಮಾತ್ರ ತುಂಬಾ ಜಾಳುಜಾಳಾಗಿದೆ. ಅಷ್ಟೇ ಅಲ್ಲ, ಸಾಮಾನ್ಯವಾಗಿ ಗಣೇಶ್ ಚಿತ್ರವೆಂದರೆ ಹಾಡುಗಳು ಮಧುರವಾಗಿರುತ್ತವೆ. ಅವುಗಳ ಚಿತ್ರೀಕರಣವೂ ನೋಡಲು ಹಿತವಾಗಿರುತ್ತದೆ. ಆದರೆ ಈ ಚಿತ್ರದಲ್ಲಿ ಅದ್ಯಾವುದೂ ಇಲ್ಲದಿರುವುದು ಒಂದು ದೊಡ್ಡ ಮೈನಸ್ ಪಾಯಿಂಟ್. ಗಣೇಶ್, ಸಾಧು ಕೋಕಿಲ ಹಾಗು ರಂಗಾಯಣ ರಘು ತಮಗೆ ನೀಡಿದ



ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿ, ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರೂ ಚಿತ್ರ ಯಾಕೋ ಹೃದಯಕ್ಕೆ ತಟ್ಟುತ್ತಿಲ್ಲ. ಹೀಗಾಗಿ 'ಮಿಸ್ಟರ್ 420' ಚಿತ್ರ ಗಣೇಶ್‌ಗಾಗಲೀ, ನಿರ್ಮಾಪಕ ಸಂದೇಶ್ ನಾಗರಾಜ್‌ಗಾಗಲೀ ನಿರೀಕ್ಷಿಸಿದಷ್ಟು ಫಲವನ್ನು ನೀಡಲಾರದು. •

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com